# ಸಮಾಜ ವಿಜ್ಞಾನ

## ಭಾಗ -2

## ತರಗತಿ V

**Social Science**
**Std V**
**Part II**
**Kannada Medium**

ಕೇರಳ ಸರಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ
ತಯಾರಿಸಿದವರು
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT) ಕೇರಳ

2024

## ರಾಷ್ಟ್ರಗೀತೆ

ಜನಗಣಮನ ಅಧಿನಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಪಂಜಾಬ ಸಿಂಧು ಗುಜರಾತ ಮರಾಠ
ದ್ರಾವಿಡ ಉತ್ಕಲ ವಂಗ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಛಲ ಜಲಧಿತರಂಗ
ತವಶುಭ ನಾಮೇ ಜಾಗೇ
ತವಶುಭ ಆಶಿಷ ಮಾಗೇ
ಗಾಹೇ ತವಜಯ ಗಾಥಾ
ಜನಗಣ ಮಂಗಲದಾಯಕ ಜಯಹೇ
ಭಾರತ ಭಾಗ್ಯವಿಧಾತಾ
ಜಯಹೇ ಜಯಹೇ ಜಯಹೇ,
ಜಯ ಜಯ ಜಯ ಜಯಹೇ!

## ಪ್ರತಿಜ್ಞೆ

ಭಾರತವು ನನ್ನ ದೇಶ. ಭಾರತೀಯರೆಲ್ಲರೂ ನನ್ನ ಸಹೋದರ, ಸಹೋದರಿಯರು. ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ನಾನು ಹೆಮ್ಮೆ ಪಡುತ್ತೇನೆ. ನಾನು ನನ್ನ ತಂದೆ, ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ. ಮತ್ತು ಎಲ್ಲರೊಡನೆ ಸೌಜನ್ಯದಿಂದ ವರ್ತಿಸುತ್ತೇನೆ. ನಾನು ನನ್ನ ದೇಶ ಮತ್ತು ದೇಶದ ಜನರಿಗೆ ನನ್ನ ಶ್ರದ್ಧೆಯನ್ನು ಮುಡಿಪಾಗಿಡುತ್ತೇನೆ. ಅದರ ಕ್ಷೇಮ ಮತ್ತು ಸಮೃದ್ಧಿಯಲ್ಲೇ ನನ್ನ ಆನಂದವಿದೆ.

# 5

# ಸಮಾಜ ವಿಜ್ಞಾನ

*Prepared by*
**State Council of Educational Research and Training (SCERT) Kerala**
Poojappura, Thiruvananthapuram 695012, Kerala
Website : www.scertkerala.gov.in, e-mail : scertkerala@gmail.com
Typeset and design by : SCERT
First edition: 2024
Printed at : KBPS, Kakkanad, Kochi-30
© Department of General Education, Government of Kerala

ಪ್ರೀತಿಯ ಗೆಳೆಯರೇ

ಇದು ಐದನೇ ತರಗತಿಯ ಸಮಾಜವಿಜ್ಞಾನ ಪಾಠಪುಸ್ತಕದ ಎರಡನೇ ಭಾಗವಾಗಿದೆ. ಸಾರಿಗೆ-ಆಶಯ ವಿನಿಮಯ ವ್ಯವಸ್ಥೆಗಳ ಆರಂಭ, ಬೆಳವಣಿಗೆ ಎಂಬಿವುಗಳ ಕುರಿತು ಐತಿಹಾಸಿಕವಾಗಿ ತಿಳಿದುಕೊಳ್ಳಲು ಮತ್ತು ವರ್ತಮಾನದ ಸ್ಥಿತಿಗತಿಗಳನ್ನು ನಿರ್ಣಯಿಸುವಲ್ಲಿ ಇದರ ಪಾತ್ರವನ್ನು ವಿವರಿಸುವಂತೆ ‘ ಸಾರಿಗೆ - ಆಶಯ ವಿನಿಮಯ’ ಎಂಬ ಪಾಠಭಾಗಕ್ಕೆ ಸಾಧ್ಯವಾಗುವುದು. ‘ ನಾಡನ್ನು ಅರಿಯೋಣ’ ಎಂಬ ಪಾಠಭಾಗ ಕೇರಳದ ಭೂ ಪ್ರಕೃತಿ, ಭೌಗೋಳಿಕ ವಿಶೇಷತೆಗಳು, ಪ್ರಾಕೃತಿಕ ಸಂಪನ್ಮೂಲಗಳ ಸಂರಕ್ಷಣೆಯ ಮಹತ್ವ ಎಂಬಿವುಗಳ ಕುರಿತು ಪ್ರತಿಪಾದಿಸುವುದು.

ಸಾಮಾಜಿಕ - ಆರ್ಥಿಕ ಅಸಮಾನತೆಯಿಂದ ಸಮಾನತೆಯೆಡೆಗೆ ನಮ್ಮ ಸಮಾಜದ ಪರಿವರ್ತನೆಯ ಕುರಿತು ಪ್ರಾಥಮಿಕ ತಿಳುವಳಿಕೆ ‘ ಸಮಾನತೆಯೆಡೆಗೆ’ ಎಂಬ ಪಾಠಭಾಗದಿಂದ ಲಭಿಸಲು ಸಹಾಯಕವಾಗಿದೆ. ಆಕಾಶ ವಿಸ್ಮಯಗಳು ಮತ್ತು ಆಕಾಶದ ವಿದ್ಯಮಾನಗಳನ್ನು ‘ ಆಕಾಶ ವಿಸ್ಮಯ ಮಣ್ಣಿನ ವಿಶೇಷ’ ಎಂಬ ಪಾಠಭಾಗದಲ್ಲಿ ಪ್ರತಿಪಾದಿಸಲಾಗಿದೆ.‘ಕಾನೂನುಗಳು ಮತ್ತು ಸಮಾಜ’ ಎಂಬ ಪಾಠಭಾಗ ಸಾಮಾಜಿಕ ಜೀವನದಲ್ಲಿ ಕಾನೂನುಗಳನ್ನು ಪಾಲಿಸಬೇಕಾಗಿರುವುದರ ಅನಿವಾರ್ಯತೆಯನ್ನು ಬೊಟ್ಟು ಮಾಡುವುದು. ಸಮಾಜವನ್ನು ಆಳವಾಗಿ ಅರ್ಥೈಸಲು ಮತ್ತು ಮಾನವೀಯ ಮೌಲ್ಯಗಳನ್ನು ಅಳವಡಿಸಲು ಈ ಪುಸ್ತಕ ಉಪಯುಕ್ತವಾಗುವುದಂತೂ ಖಂಡಿತ.

**ಡಾ. ಜಯಪ್ರಕಾಶ್ ಆರ್.ಕೆ**
ನಿರ್ದೇಶಕರು
ಎಸ್.ಸಿ.ಇ.ಆರ್.ಟಿ



# WORKSHOP PARTICIPANTS

## Advisor

**Dr. K.N. Ganesh**
Chairman
Kerala Council for Historical Research

## Chairperson

**Dr. Abhilash Kumar K.G**
Assistant. Professor
Department of Political Science,
B.J.M. Govt. College, Chavara

## Experts

**Dr. Nandakumar B. V.**
Assistant Professor
Department of History
Sree Narayana College,
Varkala

**Dr. Suresh Babu G.S.**
Professor in Sociology of Education,
Zakir Hussain Center for Educational Studies
Jawaharlal Nehru University,
New Delhi

## Participants

**Achuthankutty K.**
UPST (Retd.)
AUP School Irumpalassery,
Palakkad

**Beena. T.Chandapilla**
UPST,
Govt. UPS, Kozhancherry,
Pathanamthitta

**Beena. S. Nair**
UPST,
Govt. UPS, Kozhancherry,
Pathanamthitta

**Pavithan C.K.**
HST (Retd.)
GHSS, Kaniyampatta,
Wayanad

**Pushpangadan U.**
UPST
GHSS Anchal,
Punalur, Kollam

**Benoy V.**
Principal
GHSS, Payambra,
Kozhikode

**Nisha M.S**
UPST,
VHSS Mezhuveli,
Pathanamthitta

**Radhakrishnan P.**
UPST (Retd.)
GLP School Alur,
Palakkad

**Margaret Lini V.P.**
HST
Govt.V&HSS, Vellanadu,
Thiruvananthapuram

**Venugopalan K.**
BPC (Retd.)
Pattambi, Palakkad

**Anas N. S.**
Research Scholar
NSS College, Nilamel,
Kollam

**Valsala Kumari K.R.**
HST (Retd.)
PBMHSS, Kodungallur,
Thrissur

**Santosh Veliyannoor**
Artist, Kottayam

**Vishnu P.S.**
Artist, Nemom,
Thiruvananthapuram

**Niketan M.**
Student (+1), GHSS
Medical College Campus,
Kozhikode

## Kannada Version

**Expert**
**Radhakrishna M**
H.M (Rtd) GHSS Pandi

**Language Expert**
**Rajarama Rao T**
H.M, (Rtd) SVVHSS
Miyapadavu

**Participants**
**Vijaya Kumar. P**
H.M GSBS Kumbale

**Rajani C.K**
UPST, VAUPS Miyapadavu

**Sushma K.R**
UPST,AUPS Bovikana

**Sunil Kumar M**
HST, GVHSS Delampady

**Nayana Prasad H.T**
UPST, GHS Kadambar

Academic Co ordinator

**Dr. Anjana V. R. Chandran**
Research Officer, SCERT KERALA

State Council For Educational Research And Training (SCERT)
Vidya Bhavan, Pujappura, Thiruvananthapuram 695 012

# ಅನುಕ್ರಮಣಿಕೆ


7. ಸಾರಿಗೆ - ಆಶಯ ವಿನಿಮಯ ವ್ಯವಸ್ಥೆಗಳು. . . . . . . . . . 111 - 132

8. ನಾಡನ್ನು ಅರಿಯೋಣ . . . . . . . . . . . . . . . . . . . . . . 133 - 148

9. ಸಮಾನತೆಯೆಡೆಗೆ. . . . . . . . . . . . . . . . . . . . . 149 - 160

10. ಆಕಾಶ ವಿಸ್ಮಯ ಮತ್ತು ಮಣ್ಣಿನ ವಿಶೇಷತೆ. . . . . . . . . . 161 - 178

11. ಕಾನೂನುಗಳು ಮತ್ತು ಸಮಾಜ . . . . . . . . . . . . . . . 179 - 189


**ಈ ಪಾಠಪುಸ್ತಕದಲ್ಲಿ ಕಲಿಕಾ ಸೌಕರ್ಯಕ್ಕಾಗಿ ಕೆಲವು ಚಿಹ್ನೆಗಳನ್ನು ಉಪಯೋಗಿಸಲಾಗಿದೆ.**

| | | | |
|---|---|---|---|
|  | ಹೆಚ್ಚಿನ ಓದಿಗೆ *(ಮೌಲ್ಯಮಾಪನಕ್ಕೆ ಒಳಪಡಿಸಬೇಕಾಗಿಲ್ಲ)* |  | ಪ್ರಶ್ನೆ |
|  | ಚಟುವಟಿಕೆ |  | ಮುಂದುವರಿದ ಚಟುವಟಿಕೆಗಳು |
|  | ಚರ್ಚಿಸೋಣ / ಸಂದರ್ಶನ |  | ಬಣ್ಣ ಹಚ್ಚೋಣ |
|  | ಚಿತ್ರ ಸಂಗ್ರಹ |  | ಹಾಡು ಹಾಡೋಣ |
|  | ಕೊಲಾಜ್ |  | ಆಡೋಣ |
|  | ಓದೋಣ |  | ಬರೆಯೋಣ |
|  | ನಿರ್ಮಿಸೋಣ |  | ಪ್ಲ ಕಾರ್ಡ್ ನಿರ್ಮಾಣ |
|  | ರೋಲ್ ಪ್ಲೇ / ಮೈಮ್ |  | ರಚಿಸೋಣ |
|  | ಐ.ಸಿ.ಟಿ | | |

# ಭಾರತದ ಸಂವಿಧಾನ

## ಪ್ರಸ್ತಾವನೆ

ಭಾರತದ ಜನಗಳಾದ ನಾವು ಭಾರತವನ್ನು ಒಂದು [1]**[ಸಾರ್ವಭೌಮ ಸಮಾಜವಾದೀ ಸರ್ವಧರ್ಮ ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ]** ರಚಿಸಲು ಮತ್ತು ಅದರ ಸಮಸ್ತ ನಾಗರಿಕರಿಗೆ:

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯ** ;
ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಧರ್ಮಶ್ರದ್ಧೆ ಮತ್ತು ಉಪಾಸನಾ **ಸ್ವಾತಂತ್ರ್ಯ** ;
ಸ್ಥಾನಮಾನ ಹಾಗೂ ಅವಕಾಶ **ಸಮಾನತೆ**

ದೊರೆಯುವಂತೆ ಮಾಡಲು ಮತ್ತು ವ್ಯಕ್ತಿ ಗೌರವವನ್ನು, [2][ರಾಷ್ಟ್ರದ ಏಕತೆಯನ್ನು ಹಾಗೂ ಅಖಂಡತೆಯನ್ನು] ಸುನಿಶ್ಚಿತಗೊಳಿಸಿ ಅವರಲ್ಲಿ **ಭ್ರಾತೃಭಾವನೆಯನ್ನು** ವೃದ್ಧಿಗೊಳಿಸಲು ಶ್ರದ್ಧಾಪೂರ್ವಕ ಸಂಕಲ್ಪ ಮಾಡಿದವರಾಗಿ;

**ನಮ್ಮ ಸಂವಿಧಾನ ಸಭೆಯಲ್ಲಿ** 1949ನೆಯ ಇಸವಿ ನವೆಂಬರ್ ತಿಂಗಳ ಇಪ್ಪತ್ತಾರನೆಯ ತಾರೀಖಾದ ಈ ದಿವಸ **ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ, ಅಧಿನಿಯಮಿಸಿ ಅರ್ಪಿಸಿಕೊಂಡಿದ್ದೇವೆ.**

---

1. 1976ನೇ ಇಸವಿಯ ಭಾರತ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೇರೆಗೆ "ಸಂಪೂರ್ಣ ಪ್ರಭುತ್ವ ಸಂಪನ್ನ ಲೋಕತಂತ್ರಾತ್ಮಕ ಗಣರಾಜ್ಯವಾಗಿ" ಎಂಬ ಪದಗಳ ಬದಲಾಗಿ (3-1-1977 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
2. ಮೇಲ್ಕಂಡ ಅಧಿನಿಯಮದ 2ನೇ ಪ್ರಕರಣದ ಮೇರೆಗೆ "ರಾಷ್ಟ್ರದ ಏಕತೆಯನ್ನೂ" ಎಂಬ ಪದಗಳ ಬದಲಾಗಿ (3 - 1 - 1977ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.

# 7

# ಸಾರಿಗೆ - ಆಶಯ ವಿನಿಮಯ ವ್ಯವಸ್ಥೆಗಳು




ಮೇಲಿನ ವಾರ್ತಾ ಕೊಲಾಷ್‌ನ್ನು ಗಮನಿಸಿರಿ.

ತಿರುವನಂತಪುರದಿಂದ ಕೊಚ್ಚಿಗೆ ಅತಿ ವೇಗವಾಗಿ ಹೃದಯವನ್ನು ತಲುಪಿಸಲು ಹೇಗೆ ಸಾಧ್ಯವಾಯಿತು?

- 
- 

ಕರಾವಳಿ ನಿವಾಸಿಗಳಿಗೆ ಯಾವೆಲ್ಲಾ ರೀತಿಯ ಎಚ್ಚರಿಕೆಗಳನ್ನು ನೀಡಿರಬಹುದು?

- 
- 

ತಕ್ಷಣವೇ ಪ್ರಳಯ ದುರಂತ ಪರಿಹಾರದ ಕ್ರಮ ಕೈಗೊಳ್ಳಲು ಸಾಧ್ಯವಾದದ್ದು ಹೇಗೆ?

ಮೇಲೆ ಹೇಳಿದ ಸಂದರ್ಭಗಳು ನಮ್ಮ ದೈನಂದಿನ ಜೀವನದಲ್ಲಿ ಸಾರಿಗೆ ಸಂಪರ್ಕ ಸೌಕರ್ಯಗಳ ಪ್ರಾಮುಖ್ಯತೆಯನ್ನು ತಿಳಿಸುತ್ತವೆ.

ಸಾರಿಗೆ ಸಂಪರ್ಕ ಮತ್ತು ಆಶಯ ವಿನಿಮಯ ವ್ಯವಸ್ಥೆಗಳು ಮಾನವರ ಮಧ್ಯೆ ಇರುವ ಭೌತಿಕ ಅಂತರವನ್ನು ನಿವಾರಿಸಲು ಇರುವ ಹಾದಿಗಳಾಗಿವೆ. ಮಾನವರ ಮಧ್ಯೆ ಇರುವ ಅಂತರವನ್ನು ಪರಿಗಣಿಸಿ ಪರಸ್ಪರ ಒಂದುಗೂಡಿಸುವ ಸೌಕರ್ಯವು ಇದಾಗಿದೆ. ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಜನರನ್ನು ಮತ್ತು ಸರಕುಗಳನ್ನು ಸಾಗಿಸಲು ಸಾರಿಗೆಯು ಸಹಾಯಕವಾಗುತ್ತದೆ. ಒಂದು ಸ್ಥಳದ ಸಂದೇಶವನ್ನು ಇನ್ನೊಂದು ಸ್ಥಳಕ್ಕೆ ರವಾನಿಸಲು ವಾರ್ತಾ ವಿನಿಮಯ ವ್ಯವಸ್ಥೆಗಳನ್ನು ಬಳಸುತ್ತೇವೆ.

## ಸಾರಿಗೆ




ನೀನಾಳ ಅಂಚೆಚೀಟಿಯ ಸಂಗ್ರಹದ ಒಂದು ಪುಟವನ್ನು ಮೇಲೆ ನೀಡಲಾಗಿದೆ. ಇವುಗಳು ಭಾರತೀಯ ಅಂಚೆ ಇಲಾಖೆಯು ಬಿಡುಗಡೆಗೊಳಿಸಿದ ಕೆಲವು ಅಂಚೆ ಚೀಟಿಗಳಾಗಿವೆ. ಇವು ವಿವಿಧ ಕಾಲಘಟ್ಟಗಳ ಸಾರಿಗೆ ವಿಕಾಸದ ಕುರಿತು ಭಾರತದ ಅಂಚೆ ಇಲಾಖೆ ಬಿಡುಗಡೆಗೊಳಿಸಿದ ಅಂಚೆ ಚೀಟಿಗಳಾಗಿವೆ. ಅವುಗಳಲ್ಲಿ ಮುದ್ರಿತವಾದ ವಾಹನಗಳು ಯಾವುವೆಂದು ಕಂಡುಹಿಡಿಯಿರಿ.

ಅಂಚೆ ಚೀಟಿಯಲ್ಲಿ ಕಾಣುವ ವಾಹನ ಇಂದು ನಮ್ಮ ಪ್ರದೇಶಗಳಲ್ಲಿವೆಯೇ?

ಮನುಷ್ಯರು ಮಾತ್ರ ವಾಹನಗಳನ್ನು ಉಪಯೋಗಿಸುತ್ತಾರೆ ಎನ್ನುವ ವಿಚಾರ ನಿಮಗೆ ತಿಳಿದಿದೆಯಲ್ಲವೇ? ಹಿಂದಿನ ಕಾಲದಲ್ಲಿ ಆನೆ, ಕುದುರೆ, ಎತ್ತು, ಒಂಟೆ ಮುಂತಾದ ಪ್ರಾಣಿಗಳನ್ನು ವಾಹನದ ಬದಲಾಗಿ ಉಪಯೋಗಿಸುತ್ತಿದ್ದರು. ಇಂದು ಮಾನವನು ತನ್ನ ಯಾವೆಲ್ಲಾ ಅಗತ್ಯಗಳಿಗಾಗಿ ವಾಹನವನ್ನು ಉಪಯೋಗಿಸುತ್ತಾನೆ?

> **ಸಾರಿಗೆ**
>
> ವಾಹನ ಎಂದರೆ 'ಕೊಂಡೊಯ್ಯುವ ಉಪಕರಣ' ಎಂದರ್ಥ.
>
> ವಾಹನವು ಮಾನವನ ಸಂಚಾರಕ್ಕೂ ಸರಕುಗಳ ಸಾಗಾಟಕ್ಕೂ ಉಪಯೋಗಿಸುವ ಯಾಂತ್ರಿಕ - ಯಾಂತ್ರಿಕೇತರ ವ್ಯವಸ್ಥೆಯಾಗಿದೆ.

- ಸಂಚಾರಕ್ಕೆ
- ಸರಕುಗಳನ್ನು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಕೊಂಡೊಯ್ಯಲು
- 
- 

ವಾಹನಗಳನ್ನು ಕಂಡುಹಿಡಿಯುವುದಕ್ಕಿಂತ ಮೊದಲು ಮಾನವನು ತನ್ನ ಈ ಅಗತ್ಯಗಳನ್ನು ಹೇಗೆ ನೆರವೇರಿಸಿರಬಹುದು?





- ಕಾಲ್ನಡೆಯಾಗಿ
- ತಲೆಹೊರೆಯಾಗಿ
- ಮೃಗಗಳ ಬೆನ್ನಿನಲ್ಲಿ

ಇಂತಹ ವಿಧಾನಗಳಿಗೆ ಯಾವೆಲ್ಲ ಇತಿಮಿತಿಗಳಿದ್ದವು?

- ಹೆಚ್ಚುತ್ತಿರುವ ಅವಶ್ಯಕತೆಗಳನ್ನು ಪೂರೈಸಲು ಸಾಧ್ಯವಾಗುತ್ತಿರಲಿಲ್ಲ.
- 
- 

ಮೇಲೆ ಹೇಳಿದ ಇತಿಮಿತಿಗಳನ್ನು ಪರಿಹರಿಸುವುದಕ್ಕಾಗಿ ಮಾನವರು ವಾಹನಗಳನ್ನು ಕಂಡುಹಿಡಿದರು. ಚಕ್ರದ ಅನ್ವೇಷಣೆಯು ಸಾರಿಗೆಯಲ್ಲಿ ಪ್ರಗತಿ ಉಂಟಾಗಲು ಕಾರಣವಾಯಿತು.

## ಚಕ್ರದಿಂದ ವಾಹನಕ್ಕೆ

ಮಾನವನ ಜೀವನವನ್ನು ಬದಲಾಯಿಸಿದ ಚಕ್ರದ ಅನ್ವೇಷಣೆಯು ಕೇವಲ ಒಂದೇ ದಿನದಲ್ಲಿ ನಡೆದದ್ದಲ್ಲ. ಉರುಟಾದ ಮರ ಮಟ್ಟುಗಳ ಮೇಲೆ ವಸ್ತುಗಳನ್ನು ಇಟ್ಟು ಉರುಳಿಸಿದರೆ ಭಾರವನ್ನು ಸ್ವಲ್ಪ ಕಡಿಮೆ ಮಾಡಬಹುದೆಂದು ಅರ್ಥೈಸಿಕೊಂಡ ಮಾನವನು ಉರುಟಾದ ಮರ ಮಟ್ಟುಗಳನ್ನು ಸಣ್ಣದಾಗಿ ಮಾಡಿದಾಗ ಅದು ಚಕ್ರಗಳಾಯಿತು.

ಚಿತ್ರಗಳನ್ನು ಗಮನಿಸಿರಿ.







ಚಿತ್ರದಲ್ಲಿ 1976ರಲ್ಲಿ ಸ್ವಿಜರ್‌ಲ್ಯಾಂಡ್‌ನ ಸೂರಿಚ್ ಸರೋವರದ ತೀರದಲ್ಲಿ ಲಭಿಸಿದ ಸುಮಾರು 4,500ಕ್ಕಿಂತಲೂ ಹೆಚ್ಚು ವರ್ಷ ಹಳೆಯದಾದ ಚಕ್ರದ ಭಾಗವನ್ನು ನೀಡಲಾಗಿದೆ. ಮೆಪ್ಪಿಲ್ ಮರದಿಂದ ನಿರ್ಮಿಸಿರುವ ಈ ಚಕ್ರದ ಭಾಗವನ್ನು ಸ್ವಿಸ್ ನ್ಯಾಷನಲ್ ವಸ್ತು ಸಂಗ್ರಹಾಲಯದಲ್ಲಿ ಸಂರಕ್ಷಿಸಿಡಲಾಗಿದೆ.



### ಮೆಸೋಪೊಟೇಮಿಯಾ

ಸುಮಾರು 5000 ವರ್ಷಗಳ ಮೊದಲು ಮೆಸೋಪೊಟೇಮಿಯನ್ನರು ಚಕ್ರಗಳನ್ನು ನಿರ್ಮಿಸಿದ್ದಾರೆಂದು ಹೇಳಲಾಗುತ್ತಿದೆ. ಅವರು ಮೂರು ಮರದ ಹಲಗೆಯನ್ನು ಚರ್ಮದ ಪಟ್ಟಿಯನ್ನುಪಯೋಗಿಸಿ ಜೋಡಿಸಿ, ತಾಮ್ರದ ಆಣಿಯನ್ನು ಹೊಡೆದು ಚಕ್ರಗಳನ್ನು ತಯಾರಿಸುತ್ತಿದ್ದರು. ನಂತರದ ಕಾಲದಲ್ಲಿ ಈಜಿಪ್ಟಿನವರು, ರೋಮನ್ನರು ಚಕ್ರಗಳಲ್ಲಿ ಹೆಚ್ಚಿನ ಬದಲಾವಣೆಯನ್ನು ತಂದರು. ಮೆಸೋಪೊಟೇಮಿಯಾ ನಾಗರಿಕತೆಯು ಇಂದಿನ ಇರಾಕ್ ದೇಶವು ಒಳಗೊಂಡಿರುವ ಯೂಫ್ರಟಿಸ್ ಮತ್ತು ಟೈಗ್ರೀಸ್ ನದಿಗಳ ಮಧ್ಯದ ಪ್ರದೇಶವಾಗಿತ್ತು. ಆದುದರಿಂದಲೇ ಮೆಸೋಪೊಟೇಮಿಯಾ ಎಂದರೆ ಎರಡು ನದಿಗಳ ಮಧ್ಯೆ ಇರುವ ಪ್ರದೇಶ ಎಂದರ್ಥ.



ಇವುಗಳು ಹಿಂದಿನ ಕಾಲದಲ್ಲಿ ಚಕ್ರಗಳನ್ನು ಸಾರಿಗೆಗಾಗಿ ಯಾವೆಲ್ಲ ರೀತಿಯಲ್ಲಿ ಉಪಯೋಗಿಸುತ್ತಿದ್ದರು ಎಂದು ತಿಳಿಸುವ ಚಿತ್ರಗಳಾಗಿವೆ. ಇದರಿಂದ ಯಾವೆಲ್ಲಾ ಮಾಹಿತಿಗಳು ಲಭಿಸುತ್ತವೆ?

- ಚಕ್ರಗಳನ್ನು ಜೋಡಿಸಿದ ನಂತರ ಮಾನವರು ಅದನ್ನು ಎಳೆದುಕೊಂಡು ಹೋಗುತ್ತಿದ್ದರು.
- ಚಕ್ರಗಳನ್ನು ಜೋಡಿಸಿದ ಗಾಡಿಯನ್ನು ಪ್ರಾಣಿಗಳು ಎಳೆಯುವಂತೆ ಮಾಡುತ್ತಿದ್ದರು.
- 
- 

ಆರಂಭದಲ್ಲಿ ಮಾನವರು ಸ್ವಯಂ ಎಳೆಯುವ ಹಾಗೂ ಪ್ರಾಣಿಗಳಿಂದ ಎಳೆಯುವ ಚಕ್ರದ ಗಾಡಿಗಳನ್ನು ಸಾರಿಗೆಗಾಗಿ ಉಪಯೋಗಿಸುತ್ತಿದ್ದರು. ಸರಕುಗಳನ್ನು ಸಾಗಿಸಲು ಹಾಗೂ ಮಾನವರ ಸಂಚಾರಕ್ಕೆ ಇದೇ ರೀತಿಯ ಚಕ್ರದ ಗಾಡಿಗಳನ್ನು ಉಪಯೋಗಿಸಲಾಯಿತು. ಬಳಿಕ ಇಂಧನ ಉಪಯೋಗಿಸುವ ಯಂತ್ರಗಳನ್ನು ಕಂಡುಹಿಡಿಯಲಾಯಿತು. ಯಂತ್ರಗಳನ್ನು ಉಪಯೋಗಿಸುವ ವಾಹನಗಳು ಬಂದ ನಂತರ ಸಾರಿಗೆ

ರಂಗದಲ್ಲಿ ಬೃಹತ್ ಬದಲಾವಣೆಗಳು ಉಂಟಾಯಿತು. ಸರಕುಗಳನ್ನು ಹಾಗೂ ಮಾನವರನ್ನು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಕೊಂಡೊಯ್ಯುವ ಸಲುವಾಗಿ ವಿವಿಧ ಸಾರಿಗೆ ಸಂಪರ್ಕಗಳ ಉಪಯೋಗ ಆರಂಭವಾಯಿತು.

**ಚಕ್ರದಿಂದ ವಾಹನಕ್ಕೆ ಬದಲಾವಣೆ ಹೊಂದಿದ ಸಾರಿಗೆಯ ಅಭಿವೃದ್ಧಿಯನ್ನು ಸೂಚಿಸುವ ಚಿತ್ರಗಳನ್ನು ರಚಿಸಿ ತರಗತಿಯಲ್ಲಿ ಪ್ರದರ್ಶನ ನಡೆಸಿರಿ.**



## ವಿವಿಧ ಸಾರಿಗೆ ವ್ಯವಸ್ಥೆಗಳು

ಇಂದು ನಾವು ಉಪಯೋಗಿಸುವ ಪ್ರಧಾನವಾದ ಸಾರಿಗೆ ವ್ಯವಸ್ಥೆಯನ್ನು ಸೂಚಿಸುವ ಫ್ಲೋ ಚಾರ್ಟನ್ನು ನಿರೀಕ್ಷಿಸಿರಿ.




## ಭೂ ಸಾರಿಗೆ

ಭೂ ಪ್ರದೇಶದ ಮೇಲಿರುವ ಸಾರಿಗೆ ವ್ಯವಸ್ಥೆಯನ್ನು ಭೂ ಸಾರಿಗೆ ಎನ್ನುವರು. ಭೂಸಾರಿಗೆಯಲ್ಲಿರುವ ಪ್ರಧಾನವಾದ ಸಾರಿಗೆ ಸಂಪರ್ಕಗಳನ್ನು ಫ್ಲೋ ಚಾರ್ಟಿನಿಂದ ಕಂಡುಹಿಡಿದು ಬರೆಯಿರಿ.

- ....................................
- ....................................

## ರಸ್ತೆ ಸಾರಿಗೆ

ವಾಹನಗಳ ಸಂಚಾರವು ಸುಗಮವಾಗಬೇಕಾದರೆ ಉತ್ತಮ ರಸ್ತೆಗಳು ಅವಶ್ಯವಲ್ಲವೇ? ರಸ್ತೆಗಳು ರೂಪುಗೊಂಡ ಹಂತಗಳಿಗೆ ಸಂಬಂಧಪಟ್ಟ ಚಿತ್ರಗಳನ್ನು ಕೆಳಗೆ ನೀಡಲಾಗಿದೆ. ಅವುಗಳನ್ನು ನಿರೀಕ್ಷಿಸಿರಿ.


ಕಾಲುದಾರಿ


ಮಣ್ಣಿನ ರಸ್ತೆ


ಕಲ್ಲು ಹಾಸಿದ ರಸ್ತೆ



ಕಾಂಕ್ರೀಟ್ ರಸ್ತೆ



ಡಾಮರೀಕರಿಸಿದ ರಸ್ತೆ

ಹಿಂದಿನಕಾಲದಲ್ಲಿ ಕಾಲುದಾರಿಗಳು ಹಾಗೂ ಮಣ್ಣಿನ ರಸ್ತೆಗಳನ್ನು ಸಾರಿಗೆಗಾಗಿ ಉಪಯೋಗಿಸಲಾಗುತ್ತಿತ್ತು. ಕಾಲಕ್ರಮೇಣ ಕಲ್ಲು ಹಾಸಿದ ರಸ್ತೆಗಳು, ಕಾಂಕ್ರೀಟ್ ರಸ್ತೆಗಳು ಹಾಗೂ ಡಾಮರೀಕರಿಸಿದ ರಸ್ತೆಗಳು ನಿರ್ಮಾಣಗೊಂಡವು.

## ಮಕ್ ಆದಂ ರಸ್ತೆಗಳು

1820ರಲ್ಲಿ ಸ್ಕಾಟಿಶ್ ಎಂಜಿನಿಯರಾದ ಜೆ.ಎಲ್. ಮಕ್ ಆದಂ ಎಂಬವರು ಆಧುನಿಕ ರೀತಿಯಲ್ಲಿ ರಸ್ತೆ ನಿರ್ಮಾಣವನ್ನು ಆರಂಭಿಸಿದರು. ಜಲ್ಲಿಕಲ್ಲುಗಳನ್ನು ಹಾಸಿ ಅದರ ಮೇಲೆ ರೋಡ್ ರೋಲರ್ ಯಂತ್ರವನ್ನು ಉರುಳಿಸಿ ನಿರ್ಮಿಸಿದ ರಸ್ತೆಗಳನ್ನು 'ಮಕ್ ಆದಂ' ರಸ್ತೆಗಳು ಎಂದು ಕರೆಯುತ್ತಾರೆ.

ನಮ್ಮ ದೇಶದಲ್ಲಿ ಗ್ರಾಮೀಣ ರಸ್ತೆಗಳು, ರಾಜ್ಯ ಹೆದ್ದಾರಿಗಳು, ರಾಷ್ಟ್ರೀಯ ಹೆದ್ದಾರಿಗಳು ಹಾಗೂ ಅತಿ ವೇಗ ಹೆದ್ದಾರಿಗಳು ಎನ್ನುವ ರೀತಿಯಲ್ಲಿ ಬೃಹತ್ ರಸ್ತೆಯ ಶೃಂಖಲೆಯಿದೆ. ಜಗತ್ತಿನಲ್ಲಿ ಭಾರತದ ರಸ್ತೆ ಶೃಂಖಲೆಯು ಎರಡನೇ ಸ್ಥಾನದಲ್ಲಿದೆ. ಒಂದು ದೇಶದ ಆರ್ಥಿಕ, ಸಾಮಾಜಿಕ ಬೆಳವಣಿಗೆಯನ್ನು ನಿರ್ಧರಿಸುವಲ್ಲಿ ಅಲ್ಲಿನ ರಸ್ತೆ ಸಾರಿಗೆ ಪ್ರಧಾನ ಪಾತ್ರ ವಹಿಸುತ್ತದೆ.

## ಭಾರತದ ಪ್ರಧಾನ ಹೆದ್ದಾರಿಗಳು

### ಸುವರ್ಣ ಚತುಷ್ಕೋಣ (Golden Quadrilateral)

ಇದು ಭಾರತದ ಪ್ರಧಾನ ಕೈಗಾರಿಕೆ ಮತ್ತು ಕೃಷಿ ಕೇಂದ್ರಗಳನ್ನು ಸಂಪರ್ಕಿಸುವ ರಾಷ್ಟ್ರೀಯ ಹೆದ್ದಾರಿ ಜಾಲವಾಗಿದೆ. ಇದು ದೆಹಲಿ, ಕೊಲ್ಕತ್ತಾ, ಮುಂಬೈ, ಚೆನ್ನೈ ಮುಂತಾದ ನಗರಗಳಲ್ಲಿ ಹಾಗೂ 12 ರಾಜ್ಯಗಳ ಮೂಲಕ ಹಾದು ಹೋಗುತ್ತದೆ.




### ಉತ್ತರ-ದಕ್ಷಿಣ ಮತ್ತು ಪೂರ್ವ-ಪಶ್ಚಿಮ ಕಾರಿಡಾರ್ ಗಳು (North-South and East-West Corridors)

ಉತ್ತರ-ದಕ್ಷಿಣ ಕಾರಿಡಾರ್ ಶ್ರೀನಗರ ವನ್ನು ಕನ್ಯಾಕುಮಾರಿಯೊಂದಿಗೂ ಪೂರ್ವ-ಪಶ್ಚಿಮ ಕಾರಿಡಾರ್ ಸಿಲ್ಚಾರ್‌ನ್ನು ಪೋರ್‌ಬಂದರ್ ನೊಂದಿಗೂ ಸಂಪರ್ಕಿಸುತ್ತದೆ.





ಚಕ್ರಗಳ ಉಪಯೋಗದ ನಂತರ ಉಂಟಾದ ವಾಹನಗಳ ಅಭಿವೃದ್ಧಿಯನ್ನು ಸೂಚಿಸುವ ಚಿತ್ರಗಳನ್ನು ನಿರೀಕ್ಷಿಸಿ ರಸ್ತೆ ಸಾರಿಗೆಗಳಲ್ಲಿ ಉಂಟಾದ ಬದಲಾವಣೆಗಳ ಕುರಿತು ಚರ್ಚಿಸಿ ಟಿಪ್ಪಣಿ ತಯಾರಿಸಿರಿ.

ಹಳೆಯ ಹಾಗೂ ಹೊಸ ಮಾದರಿಯ ವಿವಿಧ ವಾಹನಗಳ ಮತ್ತು ರಸ್ತೆಗಳ ಚಿತ್ರಗಳನ್ನು ಸಂಗ್ರಹಿಸಿ ಆಲ್ಬಮ್ ತಯಾರಿಸಿ ತರಗತಿಯಲ್ಲಿ ಪ್ರದರ್ಶಿಸಿರಿ.

## ರಸ್ತೆ ಸಾರಿಗೆಯ ಹಿರಿಮೆಗಳು

- ತುಲನಾತ್ಮಕವಾಗಿ ಖರ್ಚು ಕಡಿಮೆ
- ಎಲ್ಲಾ ವಿಭಾಗದ ಜನರಿಗೂ ಲಭ್ಯವಾಗುತ್ತದೆ.
- ಕಡಿಮೆ ದೂರದ ಪ್ರಯಾಣಗಳಿಗೆ ಯೋಗ್ಯವಾಗಿದೆ.
- 
- 

## ರೈಲು ಸಾರಿಗೆ

ರೈಲುಗಾಡಿಯು ಎಲ್ಲ ಪ್ರಾಯದವರಲ್ಲಿಯೂ ಕೌತುಕವನ್ನು ಉಂಟುಮಾಡುತ್ತದೆ. ಇದು ಭೂ ಸಾರಿಗೆಯಲ್ಲಿ ಅತಿ ವೇಗವಾದ ಸಾರಿಗೆ ಸೌಕರ್ಯವಾಗಿದೆ. ಮೊತ್ತಮೊದಲಿಗೆ ಬ್ರಿಟನ್ನಿನಲ್ಲಿ ರೈಲ್ವೆ ಸಂಪರ್ಕವನ್ನು ಆರಂಭಿಸಲಾಯಿತು. ಉಗಿಯಂತ್ರದ ಅನ್ವೇಷಣೆಯ ಫಲವಾಗಿ ಲೋಕೋಮೋಟಿವ್ ಎಂಬ ರೈಲು ಗಾಡಿ ಉದಯವಾಯಿತು. 1825ರಲ್ಲಿ ಜಾರ್ಜ್ ಸ್ಟೀಫನ್ ಸನ್ ಬ್ರಿಟನ್ನಿನಲ್ಲಿ ಮೊತ್ತಮೊದಲ ಲೋಕೋಮೋಟಿವ್ ರೈಲು ಯಂತ್ರವನ್ನು ನಿರ್ಮಿಸಿದರು. ಇದಕ್ಕೆ ಇಂಧನವಾಗಿ ಕಲ್ಲಿದ್ದಲನ್ನು ಬಳಸಿದರು. ಕ್ರಮೇಣ ತಂತ್ರಜ್ಞಾನದ ಅಭಿವೃದ್ಧಿಯಿಂದಾಗಿ ಡೀಸೆಲ್ ಮತ್ತು ವಿದ್ಯುತ್ ಯಂತ್ರಗಳು ಬಳಕೆಗೆ ಬಂದಿತು.

1825ರಲ್ಲಿ ಇಂಗ್ಲೆಂಡಿನ ಸ್ಟಾಕ್ ಟನ್ ಮತ್ತು ಡಾರ್ಲಿಂಗ್ ಟನ್ ಎಂಬೀ ನಗರಗಳನ್ನು ಸಂಪರ್ಕಿಸುವ ಜಗತ್ತಿನ ಮೊದಲ ರೈಲ್ವೆ ಹಳಿಯನ್ನು ನಿರ್ಮಿಸಲಾಯಿತು. ಜಾರ್ಜ್ ಸ್ಟೀಫನ್ ಸನ್ ನಿರ್ಮಿಸಿದ 'ಸ್ಟೀಫನ್ ಸನ್ ರಾಕೆಟ್' ಎಂಬ ಲೋಕೋಮೋಟಿವ್ ಈ ಹಳಿಯಲ್ಲಿ ಓಡಿಸಿ ಜಗತ್ತಿನ ರೈಲ್ವೆ ಸಾರಿಗೆಯ ಆರಂಭವನ್ನು ಮಾಡಲಾಯಿತು.




ವಿವಿಧ ಕಾಲಘಟ್ಟಗಳಲ್ಲಿದ್ದ ಉಗಿಬಂಡಿಗಳ ಚಿತ್ರಗಳು

ಚಿತ್ರಗಳನ್ನು ನಿರೀಕ್ಷಿಸಿ ವಿವಿಧ ಕಾಲಘಟ್ಟಗಳಲ್ಲಿದ್ದ ಉಗಿಬಂಡಿಗಳ ವಿಶೇಷತೆಗಳನ್ನು ಬರೆಯಿರಿ. .

1. ಕಲ್ಲಿದ್ದಲನ್ನು ಕೊಂಡೊಯ್ಯುವ ಉಗಿಬಂಡಿ
2. ..........................................................................
3. ..........................................................................
4. ..........................................................................
5. ..........................................................................
6. ಬುಲೆಟ್ ಟ್ರೈನ್

ಬ್ರಿಟಿಷರು ಭಾರತದಲ್ಲಿ ರೈಲ್ವೆಯನ್ನು ಆರಂಭಿಸಿದರು. ಅವರು ಭಾರತದಲ್ಲಿರುವ ಕಚ್ಚಾ ವಸ್ತುಗಳನ್ನು ಹಾಗೂ ಕಾಡು ಉತ್ಪನ್ನಗಳನ್ನು ಸಮುದ್ರ ಮಾರ್ಗದ ಮೂಲಕ ಯುರೋಪಿಗೆ ಕೊಂಡುಹೋಗುತ್ತಿದ್ದರು. ಈ ವಸ್ತುಗಳನ್ನು ಹಾಗೂ ಸಂಪನ್ಮೂಲಗಳನ್ನು ಬಂದರುಗಳಿಗೆ ಸಾಗಿಸಲು ರೈಲ್ವೆಯು ಉತ್ತಮ ವ್ಯವಸ್ಥೆ ಎಂಬ ನೆಲೆಯಲ್ಲಿ ಬ್ರಿಟಿಷರು ಭಾರತದಲ್ಲಿ ರೈಲ್ವೆ ಸಾರಿಗೆಯನ್ನು ಆರಂಭಿಸಿದರು.


ಭಾರತದ ಮೊಟ್ಟಮೊದಲ ರೈಲ್ವೆ ಸಾರಿಗೆ. ಬಾಂಬೆಯಿಂದ (ಈಗಿನ ಮುಂಬೈ), ಥಾಣೆವರೆಗೆ 1853


ಕೇರಳದ ಮೊದಲ ರೈಲ್ವೆ ಸಾರಿಗೆ. ಬೇಪೂರನಿಂದ ತಿರೂರು ವರೆಗೆ 1861

ರೈಲ್ವೆಯು ದೈನಂದಿನ ಪ್ರಯಾಣಕ್ಕೆ, ಸರಕು ಸಾಗಾಟ ಹಾಗೂ ಪ್ರವಾಸಕ್ಕೆ ಜನರು ಪ್ರಮುಖವಾಗಿ ಆಶ್ರಯಿಸುವ ಸಾರಿಗೆ ವ್ಯವಸ್ಥೆಯಾಗಿದೆ. ಅತ್ಯಂತ ದೊಡ್ಡ ರೈಲ್ವೇ ಶೃಂಖಲೆ ವ್ಯವಸ್ಥೆ ಭಾರತದಲ್ಲಿದೆ. ಜಗತ್ತಿನ ಅತಿದೊಡ್ಡ ರೈಲ್ವೇ ಸಂಪರ್ಕ ವ್ಯವಸ್ಥೆಯಿರುವ ದೇಶಗಳಲ್ಲಿ ಭಾರತವೂ ಒಂದಾಗಿದೆ. ಸಾರಿಗೆ ವ್ಯವಸ್ಥೆಗಳನ್ನು ಉತ್ತಮಪಡಿಸಲು ಹಾಗೂ ವಾತಾವರಣದ ಮಾಲಿನ್ಯವನ್ನು ಕಡಿಮೆಗೊಳಿಸುವ ಉದ್ದೇಶದಿಂದ ಭಾರತದ ಪ್ರಮುಖ ನಗರಗಳಲ್ಲಿ ಮೆಟ್ರೋ ರೈಲ್ವೆ ಸಂಪರ್ಕ ಆರಂಭಿಸಲಾಗಿದೆ.

**ಮೆಟ್ರೋ ರೈಲು**

ಮಹಾನಗರಗಳಲ್ಲಿನ ಸಂಚಾರ ಸಮಸ್ಯೆಗಳು ಮತ್ತು ವಾತಾವರಣದ ಮಾಲಿನ್ಯವನ್ನು ಕಡಿಮೆಗೊಳಿಸುವ ಉದ್ದೇಶದಿಂದ ಮೆಟ್ರೋ ರೈಲು ಆರಂಭಿಸಲಾಯಿತು. ಕೊಲ್ಕತ್ತಾ, ದೆಹಲಿ, ಮುಂಬೈ, ಬೆಂಗಳೂರು, ಚೆನ್ನೈ, ಕೊಚ್ಚಿ ಮುಂತಾದ ಭಾರತದ ಪ್ರಧಾನ ನಗರಗಳಲ್ಲಿ ಮೆಟ್ರೋ ರೈಲು ಸಂಪರ್ಕವಿದೆ.

## ರೈಲು ಸಾರಿಗೆಯ ಹಿರಿಮೆಗಳು

- ಹೆಚ್ಚು ಜನರಿಗೆ ಸಂಚರಿಸಲು ಸಾಧ್ಯವಾಗುವ, ಕಡಿಮೆ ಖರ್ಚಿನ ಸಾರಿಗೆ ಸಂಪರ್ಕವಾಗಿದೆ.
- ಹೆಚ್ಚು ಸರಕುಗಳನ್ನು ಸಾಗಿಸಬಹುದು .
- ಆರ್ಥಿಕ ವ್ಯವಸ್ಥೆಯ ಬೆಳವಣಿಗೆಯಲ್ಲಿ ಪ್ರಧಾನ ಪಾತ್ರ ವಹಿಸುತ್ತದೆ.
- 

ಈ ಪಾಠ ಭಾಗದ ಕೊನೆಯಲ್ಲಿ ನೀಡಿರುವ (ಪುಟಸಂಖ್ಯೆ 131) ಕೇರಳದ ಭೂಪಟವನ್ನು ನಿರೀಕ್ಷಿಸಿ ರೈಲು ಸಾರಿಗೆ ಇಲ್ಲದ ಜಿಲ್ಲೆಗಳನ್ನು ಕಂಡುಹಿಡಿದು ಬರೆಯಿರಿ.

## ಜಲ ಸಾರಿಗೆ

ಚಿತ್ರಗಳನ್ನು ನಿರೀಕ್ಷಿಸಿರಿ.



ಮಾನವರು ಜಲ ಸಾರಿಗೆಯನ್ನು ಯಾವೆಲ್ಲ ಅಗತ್ಯಗಳಿಗಾಗಿ ಆಶ್ರಯಿಸುತ್ತಾರೆ?

- ಸಂಚಾರ
-
-
-

> ಜಲ ಸಾರಿಗೆ ಸಂಪರ್ಕವನ್ನು ಕಂಡುಹಿಡಿಯಲು ಮಾನವನನ್ನು ಪ್ರೇರೇಪಿಸಿದ ಘಟಕಗಳು ಯಾವುವು?

ಮಾನವರಿಗೂ ಪ್ರಾಣಿಗಳಿಗೂ ಜಲಾಶಯಗಳನ್ನು ದಾಟಲು ಸಾಧ್ಯವಾಗದ ಪರಿಸ್ಥಿತಿಯಲ್ಲಿ ಜಲ ಸಾರಿಗೆ ಎಂಬ ಆಶಯ ಹುಟ್ಟಿಕೊಂಡಿತು. ಬೃಹತ್ ಮರದಿಂದ ನಿರ್ಮಿಸಿದ ಒಂಟಿಕೋಲು ತೆಪ್ಪವನ್ನು ಮತ್ತು ಮರದ ದಿಮ್ಮಿಗಳ ಮಧ್ಯಭಾಗವನ್ನು ಸುಟ್ಟು ಟೊಳ್ಳು ಮಾಡಿ ದೋಣಿಯನ್ನು ತಯಾರಿಸುತ್ತಿದ್ದರು. ಮುಂದೆ ಇಂತಹ ಉಪಕರಣಗಳ ಆವಿಷ್ಕಾರವು ದೋಣಿ ನಿರ್ಮಾಣಕ್ಕೆ



ಹಿಂದಿನ ಕಾಲದ ದೋಣಿ

ಸಹಾಯಕವಾಯಿತು. ಕ್ರಮೇಣ ಹಲವು ರೀತಿಯ ದೋಣಿಗಳನ್ನು ಮತ್ತು ಹಾಯಿದೋಣಿಗಳನ್ನು ನಿರ್ಮಿಸಿದರು. ಇದರಿಂದ ಜಲ ಸಾರಿಗೆಯು ಇನ್ನಷ್ಟು ಅಭಿವೃದ್ಧಿ ಹೊಂದಿತು.

ನೀವು ಸಂಚರಿಸಿದ ಜಲ ಸಾರಿಗೆ ವಾಹನಗಳು ಯಾವುವು?

- 
- 
- 
- 

ನಿಮಗೆ ತಿಳಿದಿರುವ ಪರಿಸರ ಸ್ನೇಹಿ ವಸ್ತುಗಳನ್ನು ಉಪಯೋಗಿಸಿಕೊಂಡು ಜಲ ಸಾರಿಗೆ ವಾಹನ ಮಾದರಿಗಳನ್ನು ನಿರ್ಮಿಸಿ ತರಗತಿಯಲ್ಲಿ ಪ್ರದರ್ಶಿಸಿರಿ.





**ಮೆಸೋಪೊಟೇಮಿಯನ್ನರು ವ್ಯಾಪಾರವನ್ನು ನಡೆಸುತ್ತಿದ್ದ ಸಂದರ್ಭದಲ್ಲಿ ಹಡಗಿನಂತಹ ಜಲನೌಕೆಗಳನ್ನು ಉಪಯೋಗಿಸಿದ್ದರು. ಹರಿಗೋಲು ಹಾಗೂ ಉದ್ದವಾದ ಕೋಲುಗಳನ್ನು ಉಪಯೋಗಿಸಿ ದೂಡುತ್ತಾ ಮುಂದೆ ಹೋಗುವ ರೀತಿಯಲ್ಲಿ ನಿರ್ಮಿಸಿದರು. ಇವುಗಳನ್ನು ಸರಕು ಸಾಗಾಟ ಮತ್ತು ಸಂಚಾರಕ್ಕೂ ಉಪಯೋಗಿಸಿದರು.**

**ಸಿಂಧೂ ನದಿ ನಾಗರಿಕತೆಯ ಕೇಂದ್ರವಾದ ಗುಜರಾತಿನ ಲೋಥಾಲ್ ನಲ್ಲಿ ಹಡಗು ನಿರ್ಮಾಣ ಕೇಂದ್ರದ (ಡೋಕ್ಯಾಡಿನ) ಅವಶೇಷಗಳನ್ನು ಕಂಡುಹಿಡಿಯಲಾಯಿತು. ಲೋಥಾಲ್ ನಿಂದ ಲಭಿಸಿದ ಮುದ್ರೆಗಳಲ್ಲೂ ಹರಪ್ಪದಿಂದ ಲಭಿಸಿದ ಮೆಸೋಪೊಟೇಮಿಯನ್ ಮುದ್ರೆಗಳಲ್ಲೂ ದೋಣಿಯ ಚಿತ್ರಗಳಿವೆ. ಇದು ಆ ಕಾಲದಲ್ಲಿ ಜಲ ಸಾರಿಗೆಯು ನೆಲೆ ನಿಂತಿತ್ತು ಎನ್ನುವುದಕ್ಕೆ ಸಾಕ್ಷಿಯಾಗಿದೆ.**


ಲೋಥಾಲ್ ಹಡಗು ನಿರ್ಮಾಣ ಕೇಂದ್ರ

ಜಲ ಸಾರಿಗೆಯನ್ನು ಒಳನಾಡಿನ ಜಲಸಾರಿಗೆ ಮತ್ತು ಸಮುದ್ರ ಜಲಸಾರಿಗೆ ಎಂದು ಎರಡು ರೀತಿಯಲ್ಲಿ ವಿಂಗಡಿಸಬಹುದು. ಭಾರತದಲ್ಲಿ ರೈಲು ಸಾರಿಗೆಗಿಂತ ಮೊದಲು ಒಳನಾಡಿನ ಜಲ ಸಾರಿಗೆಯು ಪ್ರಧಾನ ಸಾರಿಗೆ ಸಂಪರ್ಕವಾಗಿತ್ತು. ಒಳನಾಡಿನ ಜಲ ಸಾರಿಗೆಯು, ನದಿಗಳು ಹಾಗೂ ಹಿನ್ನೀರುಗಳು ಹೆಚ್ಚಿರುವ ಪ್ರದೇಶಗಳಲ್ಲಿ ಅಭಿವೃದ್ಧಿ ಹೊಂದಿತ್ತು. ಹಿಂದಿನಕಾಲದಲ್ಲಿ ಇದಕ್ಕಾಗಿ ಕಾಲುವೆಗಳನ್ನು ನಿರ್ಮಿಸಲಾಯಿತು.

## ಕೇರಳದ ಒಳನಾಡಿನ ಜಲಸಾರಿಗೆ

**ಕೊಲ್ಲಂನಿಂದ ಕೋಟಪುರಂವರೆಗೆ ಇರುವ ರಾಷ್ಟ್ರೀಯ ಜಲ ಸಾರಿಗೆ ಸಂಖ್ಯೆ -3 ಕೋಝಿಕ್ಕೋಡ್ ನಿಂದ ಕೊಡುಂಗಲ್ಲೂರುವರೆಗೆ ಕನೋಲಿ ಕಾಲುವೆ. ಇವುಗಳು ಕೇರಳದ ಪ್ರಧಾನ ಎರಡು ಜಲಸಾರಿಗೆಯಾಗಿದೆ. ರೈಲುಗಾಡಿ ಸಂಪರ್ಕ ಅಭಿವೃದ್ಧಿ ಹೊಂದುವವರೆಗೆ ಸರಕು ಸಾಗಾಟಕ್ಕೆ ಈ ಸಾರಿಗೆಯನ್ನು ಆಶ್ರಯಿಸಲಾಯಿತು. ಇಂದು ಈ ಸಾರಿಗೆಗಳು ಪ್ರವಾಸಿಗರನ್ನು ಆಕರ್ಷಿಸುತ್ತದೆ.**

ಭಾರತದೊಂದಿಗೆ ವ್ಯಾಪಾರವನ್ನು ಅಭಿವೃದ್ಧಿಪಡಿಸುವ ಉದ್ದೇಶದಿಂದಾಗಿ ಯುರೋಪಿಯನ್ನರು ಜಲ ಸಾರಿಗೆಗೆ ಪ್ರಾಧಾನ್ಯತೆಯನ್ನು ನೀಡಿದ್ದರು. ಆರಂಭಕಾಲದಲ್ಲಿ ನಗರಗಳಿಗೆ ಕಲ್ಲಿದ್ದಲನ್ನು ಕೊಂಡು ಹೋಗುವ ಸಲುವಾಗಿ ಕಾಲುವೆಗಳನ್ನು ನಿರ್ಮಿಸಿದರು. ಆದರೆ ಯುರೋಪಿಯನ್ನರು ಕ್ರಮೇಣ ಇದನ್ನು ಜಲ ಸಾರಿಗೆ ಸೌಕರ್ಯವಾಗಿ ಉಪಯೋಗಿಸಲು ಆರಂಭಿಸಿದರು. ಕನೋಲಿ ಕಾಲುವೆ ಮತ್ತು ಪಾರ್ವತಿ ಪುತ್ತನಾರ್ ಕಾಲುವೆ ಮುಂತಾದವು ಕೇರಳದಲ್ಲಿ ನಿರ್ಮಿಸಿದ ಕಾಲುವೆಗಳಾಗಿವೆ. 'ಪೂರ್ವದ ವೆನ್ನಿಸ್' ಎಂದು ಕರೆಯಲ್ಪಡುವ ಆಲಪ್ಪುಳದಲ್ಲಿ ಧಾರಾಳ ಕಾಲುವೆಗಳಿವೆ.



## ಕನೋಲಿ ಕಾಲುವೆ

ಬ್ರಿಟಿಷರ ಆಡಳಿತ ಕಾಲದಲ್ಲಿ ಮಲಬಾರ್ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಯಾಗಿದ್ದ ಎಚ್ ವಿ ಕನೋಲಿಯವರು 1845ರಲ್ಲಿ ಕೋಝಿಕ್ಕೋಡ್ ನಿಂದ ಕೊಡುಂಗಲ್ಲೂರು ವರೆಗೆ ವಿಶಾಲವಾದ ಜಲ ಸಾರಿಗೆ ಸಂಪರ್ಕದ ಆಶಯವನ್ನು ಮುಂದಿಟ್ಟರು. ನಂತರ ಪೊನ್ನಾನಿ, ಚಾವಕ್ಕಡ್ ಭಾಗಗಳನ್ನು ಸೇರಿಸಿ ಕೊಡುಂಗಲ್ಲೂರುವರೆಗೆ ಇರುವ ನದಿಗಳನ್ನು ಸೇರಿಸಿಕೊಂಡು ಕಾಲುವೆಗಳನ್ನು ನಿರ್ಮಿಸಿದರು. ಈ ಜಲ ಸಾರಿಗೆಯನ್ನು ಕನೋಲಿ ಕಾಲುವೆ ಎನ್ನುವರು.



## ಪಾರ್ವತಿ ಕಾಲುವೆ

ಪಾರ್ವತಿ ಪುತ್ತನಾರ್ ಕಾಲುವೆ ತಿರುವನಂತಪುರ ಜಿಲ್ಲೆಯ 'ವೇಳಿ-ಕಠಿಣಂಕುಳಂ' ಹಿನ್ನೀರುಗಳನ್ನು ಸೇರಿಸಿಕೊಂಡು ನಿರ್ಮಿಸಿದ ಕಾಲುವೆಯಾಗಿದೆ.

ಅಂತರ್ದೇಶೀಯ ಸಂಚಾರಗಳಿಗೂ ಸರಕು ಸಾಗಾಟಕ್ಕೂ ಹಿಂದಿನಕಾಲದಲ್ಲಿ ಹೆಚ್ಚಾಗಿ ಸಮುದ್ರ ಸಾರಿಗೆಯನ್ನು ಅವಲಂಬಿಸಿದ್ದರು. ಗಾಳಿಯು ಬೀಸುವ ದಿಕ್ಕನ್ನು ಅನುಸರಿಸಿ ಸಂಚರಿಸುವ ಹಾಯಿಹಡಗುಗಳ ಅನ್ವೇಷಣೆಯು ಸಮುದ್ರ ಸಾರಿಗೆಯಲ್ಲಿ ಅಭಿವೃದ್ಧಿಯನ್ನು ಉಂಟು ಮಾಡಿತು. ಇದರ ಪರಿಣಾಮವಾಗಿ ದೂರದ ಪ್ರದೇಶಗಳಿಗಿರುವ ಸಂಚಾರವು ಹೆಚ್ಚಾಯಿತು. ಉಗಿಯಂತ್ರದ ಅನ್ವೇಷಣೆಯು ಆವಿಯನ್ನು ಉಪಯೋಗಿಸಿ ಚಲಿಸುವ ಹಡಗುಗಳ ನಿರ್ಮಾಣ ಹಾಗೂ ಪ್ರಯಾಣದ ಸುರಕ್ಷತೆಯನ್ನು ಹೆಚ್ಚಿಸಿತು. ನಂತರದ ಕಾಲದಲ್ಲಿ ಇಂಧನಗಳನ್ನು ಉಪಯೋಗಿಸುವ ಹಡಗುಗಳು ಜನಪ್ರಿಯವಾದವು.



ಹಾಯಿಹಡಗು



ಹಡಗು

ಸಮುದ್ರ ಸಾರಿಗೆಯು ನಡೆಯುವುದು ಕರಾವಳಿ ಜಲಸಾರಿಗೆ ಮತ್ತು ಅಂತಾರಾಷ್ಟ್ರೀಯ ಜಲ ಸಾರಿಗೆ ಸಂಪರ್ಕಗಳಲ್ಲಾಗಿದೆ. ದೇಶದಲ್ಲಿರುವ ಕರಾವಳಿಯ ಬಂದರುಗಳ ಮುಖಾಂತರ ಸರಕುಗಳನ್ನು ಹಾಗೂ ಯಾತ್ರಿಕರನ್ನು ಕೊಂಡು ಹೋಗುತ್ತಾರೆ. ಆದರೆ ಬೇರೆ ದೇಶಗಳ ಬಂದರುಗಳಿಗೆ ಸರಕುಗಳನ್ನು ಸಾಗಿಸಲು ಹಾಗೂ ಜನರನ್ನು ಕೊಂಡೊಯ್ಯಲು ಅಂತಾರಾಷ್ಟ್ರೀಯ ಜಲಮಾರ್ಗವನ್ನು ಉಪಯೋಗಿಸುತ್ತಾರೆ. ಈ ಜಲಮಾರ್ಗಗಳಿಂದ ರಫ್ತು ಮತ್ತು ಆಮದು ನಡೆಯುವುದು.

ಜಲ ಸಾರಿಗೆಯ ಹಿರಿಮೆಗಳು ಯಾವುವು?

- ತುಲನಾತ್ಮಕವಾಗಿ ಖರ್ಚು ಕಡಿಮೆ
- ಮಾಲಿನ್ಯ ಕಡಿಮೆ
- 
- 

**ಸಮುದ್ರತೀರದಲ್ಲಿ ಹಡಗುಗಳು ಬಂದು ನಿಲ್ಲುವ ಸ್ಥಳವನ್ನು ಬಂದರು ಎಂದು ಕರೆಯುತ್ತೇವೆ ಕೇರಳದಲ್ಲಿರುವ ಪ್ರಧಾನ ಬಂದರುಗಳು ಯಾವುವು? ಪಾಠ ಭಾಗದ ಕೊನೆಯಲ್ಲಿ ನೀಡಿರುವ (ಪುಟ 131ರಲ್ಲಿ) ಸಾರಿಗೆ ಭೂಪಟವನ್ನು ನಿರೀಕ್ಷಿಸಿ ಕಂಡುಹಿಡಿಯಿರಿ.**

**ವಿವಿಧ ಜಲ ಸಾರಿಗೆಗಳು ಹಾಗೂ ಅವುಗಳ ಹಿರಿಮೆಗಳನ್ನು ಸೂಚಿಸುವ ಚಾರ್ಟ್ ತಯಾರಿಸಿರಿ.**

## ವಾಯು ಸಾರಿಗೆ



**ಜಾಕ್ವಿಸ್ ಮೌಂಟ್ ಗೋಲ್ಫಿಯರ್ ಫ್ರಾನ್ಸಿನಲ್ಲಿರುವ ಒಂದು ಕಾಗದ ಕಾರ್ಖಾನೆಯ ಮಾಲೀಕನಾಗಿದ್ದನು. ಒಂದು ದಿನ ಅವನ ಹೆಂಡತಿ ಒದ್ದೆಯಾದ ಬಟ್ಟೆಯನ್ನು ತೂಗು ಹಾಕಿ ಅದರ ಕೆಳಗಡೆ ಬೆಂಕಿ ಹಾಕಿ ಒಣಗಿಸುತ್ತಿದ್ದಳು. ಅಷ್ಟರಲ್ಲಿ ಆ ಬಟ್ಟೆ ಆಕಾಶಕ್ಕೆ ಹಾರಿ ಹೋಗುವ ದೃಶ್ಯವು ಅವರಲ್ಲಿ ಆಶ್ಚರ್ಯವನ್ನುಂಟುಮಾಡಿತು. ಆ ದೃಶ್ಯವು ಜಾಕ್ವಿಸ್‌ನನ್ನು ಯೋಚಿಸುವಂತೆ ಮಾಡಿತು. ಅನಂತರದ ದಿನಗಳಲ್ಲಿ ಅವನಿಗೆ ವಿಶ್ರಾಂತಿ ಇಲ್ಲದಾಯಿತು. ಅವನು ನಡೆದ ಘಟನೆಯನ್ನು ತನ್ನ ಅಣ್ಣನಾದ ಜೋಸೆಫ್ ಮೌಂಟ್ ಗೋಲ್ಫಿಯರ್ ನಲ್ಲಿ ಹೇಳಿದ. ಅವರಿಬ್ಬರು ಸೇರಿಕೊಂಡು ಒಂದು ದೊಡ್ಡ ಬಲೂನು ನಿರ್ಮಿಸಿ ಅದರಲ್ಲಿ ಉಷ್ಣಗಾಳಿಯನ್ನು ತುಂಬಿಸಿಬಿಟ್ಟರು. ಅದು ಎತ್ತರಕ್ಕೆ ಹೋಯಿತು ಅದರ ನಂತರ ಬಲೂನಿನ ಕೆಳ ಭಾಗದಲ್ಲಿ ಬುಟ್ಟಿಯನ್ನು ಕಟ್ಟಿ ಅದರಲ್ಲಿ ಅವರ ಸಾಕು ಕೋಳಿ, ಬಾತುಕೋಳಿ ಮುಂತಾದವುಗಳನ್ನು ಪ್ರಯಾಣಿಕರಾಗಿ ಮಾಡಿದರು. ಜಾಕ್ವಿಸ್, ಜೋಸೆಫ್ ಸಹೋದರರು ಆ ಬಲೂನ್ ವಾಹನದಲ್ಲಿ ಪ್ಯಾರಿಸ್ ನಗರದಲ್ಲಿ ಅರ್ಧ ಗಂಟೆಗಳ ಕಾಲ ಪ್ರಯಾಣಿಸಿದರು.**

ಟಿಪ್ಪಣಿ ಓದಿದಿರಲ್ಲವೇ, 1783ರಲ್ಲಿ ಉಂಟಾದ ಈ ಘಟನೆಯು ಮುಂದೆ ವ್ಯೋಮಯಾತ್ರೆಗಳ ಆರಂಭವನ್ನು ಮಾಡಿತ್ತು. ಮನುಷ್ಯರು ಮೊದಲು ಉಷ್ಣಗಾಳಿಯನ್ನು ತುಂಬಿಸಿದ ಬಲೂನುಗಳನ್ನು ಆಕಾಶದಲ್ಲಿ ಹಾರಾಡಲು ಉಪಯೋಗಿಸಿದರು. ಅನಂತರ ಸಾಂದ್ರತೆ ಕಡಿಮೆ ಇರುವ ಅನಿಲಗಳನ್ನು ಬಲೂನ್ ಗಳಲ್ಲಿ ತುಂಬಿಸಿ ಆಕಾಶ ನೌಕೆಗಳನ್ನು ನಿರ್ಮಿಸಿದರು. ಬಳಿಕ ವೇಗ ಕಡಿಮೆಗೊಳಿಸಿ, ಕೆಳಗಿಳಿಯಲಿರುವ ಪ್ಯಾರಾಚೂಟುಗಳನ್ನು ಕಂಡುಹಿಡಿದರು. ಆದರೆ ಇದ್ಯಾವುದನ್ನು ಮಾನವರಿಗೆ ಬೇಕಾದ ರೀತಿಯಲ್ಲಿ ನಿಯಂತ್ರಿಸಲು ಹಾಗೂ ಉಪಯೋಗಿಸಲು ಸಾಧ್ಯವಾಗಲಿಲ್ಲ.


ಆಕಾಶ ಬುಟ್ಟಿ


ಪ್ಯಾರಾಚೂಟ್

ಇಂದು ನಾವು ಕಾಣುತ್ತಿರುವ ವಿಮಾನದ ಮೊದಲ ರೂಪವನ್ನು ನಿರ್ಮಿಸಿದ್ದು ಅಮೆರಿಕನ್ನರಾದ ಒರ್ ವಿಲ್ ರೈಟ್ ಮತ್ತು ವಿಲ್ ಬರ್ ರೈಟ್ ಎನ್ನುವ ಸಹೋದರರು(ರೈಟ್ ಸಹೋದರರು). ಇವರು ನಿರ್ಮಿಸಿದ ವಿಮಾನದ ಹೆಸರು ಫ್ಲೆಯರ್-1 ಎಂದಾಗಿತ್ತು. 1903 ಡಿಸೆಂಬರ್ 17ರಂದು ಅಮೆರಿಕಾದ ಉತ್ತರ ಕರೋಲಿನಾದಿಂದ ಫ್ಲೆಯರ್-1 ನ್ನು ಹಾರಿಸಲಾಯಿತು.


ಫ್ಲೆಯರ್-1


ಒರ್ ವಿಲ್ ರೈಟ್


ವಿಲ್ ಬರ್ ರೈಟ್

ಕಾಲಕ್ರಮೇಣ ಮಾನವರಿಗೆ ಹೆಲಿಕಾಪ್ಟರ್ ಗಳು, ಜೆಟ್ ವಿಮಾನಗಳು, ಪ್ರಯಾಣ ವಿಮಾನಗಳು, ಸೂಪರ್ ಸೋನಿಕ್ ವಿಮಾನಗಳನ್ನು ನಿರ್ಮಿಸಲು ಸಾಧ್ಯವಾಯಿತು. ವಾಯು ಸಾರಿಗೆ ದೇಶದ ಒಳಗೆ ಹಾಗೂ ಅಂತರ್ದೇಶೀಯ ದೂರ ಪ್ರಯಾಣಗಳಿಗೆ ಅತಿ ಉಪಯುಕ್ತವಾದ ವಾಯು ಸಾರಿಗೆಯಾಗಿದೆ. ಇದು ಅತಿ ವೇಗ ಇರುವ ಸಾರಿಗೆ ವ್ಯವಸ್ಥೆಯಾಗಿದೆ ಸೈನಿಕ ಅಗತ್ಯಗಳಿಗೂ ಈ ವಾಯು ಸಾರಿಗೆಯನ್ನು

### ಭಾರತದಲ್ಲಿ ವಿಮಾನಯಾನ ಸಾರಿಗೆ



**20ನೇ ಶತಮಾನದ ಆರಂಭದಲ್ಲಿ ಭಾರತದಲ್ಲಿ ವಾಯುಸಾರಿಗೆಯನ್ನು ಆರಂಭಿಸಲಾಯಿತು. 1911ರಲ್ಲಿ ಅಲಹಾಬಾದ್ ನಿಂದ 10 ಕಿಲೋ ಮೀಟರ್ ದೂರವಿರುವ ನೈನಿಗೆ ಪತ್ರಗಳನ್ನು ತುಂಬಿಸಿದ ವಿಮಾನವನ್ನು ಹಾರಿಸುವುದರ ಮೂಲಕ ಭಾರತದಲ್ಲಿ ವಾಯು ಸಾರಿಗೆಯು ಆರಂಭವಾಯಿತು. 1912ರಲ್ಲಿ ಭಾರತಕ್ಕೆ ಮೊದಲ ಅಂತಾರಾಷ್ಟ್ರೀಯ ವಿಮಾನವು ಲಂಡನ್ನಿನಿಂದ ಕರಾಚಿಗೆ ಮತ್ತು ಅಲ್ಲಿಂದ ದೆಹಲಿಗೆ ಸಂಚಾರ ನಡೆಸಿತು. ಭಾರತದ ಮೊದಲ ವಾಣಿಜ್ಯ ವಿಮಾನಯಾನ ಸಂಸ್ಥೆ ಟಾಟಾ ಏರ್ಲೈನ್ಸ್ 1932 ರಲ್ಲಿ ಕರಾಚಿಯಿಂದ ಮುಂಬೈಗೆ ತನ್ನ ಮೊದಲ ಸೇವೆಯನ್ನು ನಡೆಸಿತು. ಭಾರತದ ಮೊದಲ ವಿಮಾನ ನಿಲ್ದಾಣ ಮುಂಬೈಯ ಜುಹುವಿನಲ್ಲಿದೆ. ಇಂದು ಭಾರತ ಅತಿ ವಿಶಾಲವಾದ ವಾಯು ಸಾರಿಗೆ ಜಾಲವಿರುವ ದೇಶಗಳಲ್ಲಿ ಒಂದಾಗಿದೆ.**



**ಈ ಪಾಠ ಭಾಗದ ಕೊನೆಯಲ್ಲಿರುವ (ಪುಟಸಂಖ್ಯೆ 131) ಕೇರಳದ ಸಾರಿಗೆ ಭೂಪಟವನ್ನು ನಿರೀಕ್ಷಿಸಿ ಕೇರಳದಲ್ಲಿರುವ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಗಳು ಇರುವ ಜಿಲ್ಲೆಗಳ ಹೆಸರನ್ನು ಬರೆಯಿರಿ.**

ಉಪಯೋಗಿಸಲಾಗುತ್ತದೆ.

### ವಾಯು ಸಾರಿಗೆಯ ಹಿರಿಮೆಗಳು

- ಅತಿ ವೇಗವಾದ ಸಂಪರ್ಕ ವ್ಯವಸ್ಥೆ
- ವಿವಿಧ ಭೂಖಂಡಗಳಲ್ಲಿರುವ ದೇಶಗಳ ನಡುವೆ ಸಂಪರ್ಕಿಸುವುದು ಮತ್ತು ಭೂಮಿಯನ್ನು ಒಂದು ಜಾಗತಿಕ ಗ್ರಾಮವನ್ನಾಗಿ ಮಾಡುತ್ತಿದೆ.
- ದೇಶದ ರಕ್ಷಣೆಗಾಗಿ ಬಳಸಲಾಗುತ್ತದೆ.

### ವಾಯುಮಾಲಿನ್ಯ ದೆಹಲಿಯಲ್ಲಿ ಶಾಲೆ ಮತ್ತು ಕಾಲೇಜುಗಳನ್ನು ಮುಚ್ಚಲಾಯಿತು



ನವದೆಹಲಿ:ವಾಯುಮಾಲಿನ್ಯವು ಉಲ್ಬಣಗೊಳ್ಳುತ್ತಲೇ ಇರುವುದರಿಂದ ದೆಹಲಿಯ ಶಾಲೆಗಳು ಮತ್ತು ಕಾಲೇಜುಗಳನ್ನು ಮುಂದಿನ ಸೂಚನೆ ಬರುವ ತನಕ ಮುಚ್ಚಲಾಗುತ್ತದೆ. ನಿರ್ಮಾಣ ಚಟುವಟಿಕೆಗಳ ತಡೆಯನ್ನು ಮುಂದೂಡಲಾಗಿದೆ. ನೌಕರರು ಸ್ವಂತ ವಾಹನಗಳ ಬದಲಾಗಿ ಸಾರ್ವಜನಿಕ ಸಂಪರ್ಕ ವಾಹನಗಳನ್ನು ಉಪಯೋಗಿಸಬೇಕಾಗಿ ಸರಕಾರವು ಸೂಚಿಸಿದೆ.

ಈ ವಾರ್ತೆಯನ್ನು ಗಮನಿಸಿದಿರಲ್ಲವೇ. ನೌಕರರು ಸ್ವಂತ ವಾಹನಗಳನ್ನು ಬಿಟ್ಟು ಸಾರ್ವಜನಿಕ ಸಾರಿಗೆ ಸಂಪರ್ಕವನ್ನು ಉಪಯೋಗಿಸಲು ನಿರ್ದೇಶಿಸಿದ್ದು ಯಾಕೆ?

ಚಿತ್ರಗಳನ್ನು ಗಮನಿಸಿರಿ.





ವಾಹನಗಳ ಸಂಖ್ಯೆಗಳಲ್ಲಿನ ಹೆಚ್ಚಳವು ಯಾವೆಲ್ಲ ಸಮಸ್ಯೆಗಳಿಗೆ ಕಾರಣವಾಗುತ್ತವೆ?

- ಹೆಚ್ಚಿದ ಸಂಚಾರದಟ್ಟಣೆ
- ವಾಯುಮಾಲಿನ್ಯ
- ಶಬ್ದ ಮಾಲಿನ್ಯ
- ಆರೋಗ್ಯ ಸಮಸ್ಯೆಗಳು
- ಹೆಚ್ಚಾದ ವಾಹನ ಅಪಘಾತಗಳು
- ಸೀಮಿತ ಪಾರ್ಕಿಂಗ್ ಸೌಕರ್ಯಗಳು, ಪಾದಚಾರಿಗಳಿಗೆ ಹಾಗೂ ಸೈಕಲ್ ಸವಾರರಿಗೆ ಸಂರಕ್ಷಣೆ ಕಡಿಮೆಯಾಗುವುದು
-
-

**ಸಾರ್ವಜನಿಕ ಸಾರಿಗೆಗಳನ್ನು ಉಪಯೋಗಿಸುವುದರ ಅಗತ್ಯದ ಕುರಿತು ತರಗತಿಯಲ್ಲಿ ಚರ್ಚೆ ನಡೆಸಿ ಟಿಪ್ಪಣಿ ತಯಾರಿಸಿರಿ.**

-
-

## ಆಶಯ ವಿನಿಮಯ

ಒಂದು ಸ್ಥಳದಿಂದ ಅಥವಾ ಒಬ್ಬ ವ್ಯಕ್ತಿಯಿಂದ ಮಾಹಿತಿಯನ್ನು ಬೇರೊಂದು ಸ್ಥಳಕ್ಕೆ ಅಥವಾ ಇನ್ನೊಬ್ಬ ವ್ಯಕ್ತಿಗೆ ರವಾನಿಸುವುದೇ ಆಶಯ ವಿನಿಮಯವಾಗಿದೆ. ಪ್ರಾಚೀನ ಕಾಲದಿಂದಲೇ ಮನುಷ್ಯರು ತಮ್ಮ ಅವಶ್ಯಕತೆಗೆ ಅನುಗುಣವಾಗಿ ವ್ಯತ್ಯಸ್ಥವಾದ ಆಶಯ ವಿನಿಮಯ ಮಾರ್ಗಗಳನ್ನು ಬಳಸಿದ್ದರು.

ಆಶಯ ವಿನಿಮಯ ಹೇಗೆಲ್ಲ ನಡೆಯುತ್ತದೆ?

- ಸಂಭಾಷಣೆಯ ಮೂಲಕ
- ಬರವಣಿಗೆಯ ಮೂಲಕ
- ದೂರವಾಣಿಯ ಮೂಲಕ
-
-
-

ಭಾಷೆಗಳೂ, ಚಿಹ್ನೆಗಳೂ, ಬರವಣಿಗೆಗಳೂ ಇಲ್ಲದ ಕಾಲಘಟ್ಟದಲ್ಲಿ ಒಬ್ಬ ವ್ಯಕ್ತಿ ಹೇಗೆ ತನ್ನ ಆಶಯ ವಿನಿಮಯವನ್ನು ನಡೆಸಿರಬಹುದು?

- ಅಭಿನಯದ ಮೂಲಕ
- ಪ್ರತ್ಯೇಕ ಶಬ್ದಗಳನ್ನು ಉಚ್ಚರಿಸುವ ಮೂಲಕ

**ಭಾಷೆಗಳೂ, ಚಿಹ್ನೆಗಳೂ ಬರವಣಿಗೆಗಳೂ ಇಲ್ಲದ ಕಾಲಘಟ್ಟದ ವಿವಿಧ ಸಂದರ್ಭಗಳ (ಬೇಟೆ, ಮೀನುಗಾರಿಕೆ, ವ್ಯಾಪಾರ, ಪ್ರಯಾಣ ಮುಂತಾದ) ಆಶಯ ವಿನಿಮಯಗಳನ್ನು ತರಗತಿಯಲ್ಲಿ ಮೂಕಾಭಿನಯದ ಮೂಲಕ ಪ್ರದರ್ಶಿಸಿರಿ.**

- 
- 

ಆದಿ ಮಾನವರು ದೇಹದ ಚಲನೆ ಮತ್ತು ಮುಖದ ಚಲನೆಗಳ ಮೂಲಕ ಹಾಗೂ ಶಬ್ದಗಳ ಮೂಲಕವೂ ತಮ್ಮ ಆಶಯಗಳನ್ನು ವ್ಯಕ್ತಪಡಿಸಿದ್ದರು. ನಂತರದ ಕಾಲದಲ್ಲಿ ದೂರದಲ್ಲಿರುವವರೊಂದಿಗೆ ಆಶಯ ವಿನಿಮಯ ನಡೆಸಲು ಬೆಂಕಿ ಮತ್ತು ಹೊಗೆಯ ಸಂಕೇತಗಳನ್ನು ಬಳಸಿದರು. ಸುಮಾರು 30 ಸಾವಿರ ವರ್ಷಗಳ ಮೊದಲು ಮಾನವರು ಚಿಹ್ನೆಗಳನ್ನು ಉಪಯೋಗಿಸತೊಡಗಿದರು ಎಂದು ಇತಿಹಾಸಗಾರರು ಅಭಿಪ್ರಾಯಪಟ್ಟಿದ್ದಾರೆ.

ಪ್ರಾಚೀನ ಕಾಲದಲ್ಲಿ ಗುಹೆಗಳ ಭಿತ್ತಿಗಳಲ್ಲಿ ರಚಿಸಿದ ಚಿತ್ರಗಳು ಆ ಕಾಲದ ಆಶಯ ವಿನಿಮಯಕ್ಕೆ ಮುಖ್ಯ ಉದಾರಣೆಗಳಾಗಿವೆ. ಆಶಯ ವಿನಿಮಯಕ್ಕಾಗಿ ಚಿಹ್ನೆಗಳನ್ನು ಮತ್ತು ಚಿತ್ರಗಳನ್ನು ಉಪಯೋಗಿಸಿದರು. ಆನಂತರ ಲಿಪಿ ಮತ್ತು ಬರವಣಿಗೆಯ ಕಲೆಯನ್ನು ರೂಪೀಕರಿಸಿದರು.

ಸುಮಾರು 5000 ವರ್ಷಗಳ ಮೊದಲು ಮಾನವರು ಬರವಣಿಗೆ ಕಲೆಯನ್ನು ರೂಪೀಕರಿಸಿದರೆಂದು ಹೇಳಲಾಗಿದೆ. ಮೊಟ್ಟಮೊದಲು ಸುಮೇರಿಯನ್ನರು ಬರವಣಿಗೆಯ ಲಿಪಿಯ ಕಲೆಯನ್ನು ಆರಂಭಿಸಿದರು. ಇವರ ಲಿ... ಕ... ದಲ್ಲಿ ಬರೆಯಲ... ೇಗಿ...


ಕ್ಯೂನಿಫಾರ್ಮ್ ಲಿಪಿ


ಹೈರೋಗ್ಲಿಫಿಕ್ಸ್ ಲಿಪಿ

| ಚಿತ್ರ | ಬರೆದು ಉಪಯೋಗಿಸಿದ ವಸ್ತು | ಬರೆಯಲು ಉಪಯೋಗಿಸಿದ ಉಪಕರಣ |
|---|---|---|
|  | ಶಿಲೆ | ಚೂಪಾದಕಲ್ಲು |
|  | ತಾಮ್ರದ ಫಲಕ | ಲೋಹ ಲೇಖನಿ |
|  | ತಾಳೆಯೋಲೆ | ಮೊನಚು ಲೇಖನಿ |

ಇಂದು ನಾವು ಸುದ್ದಿ ಮತ್ತು ಸಂದೇಶಗಳನ್ನು ರವಾನಿಸಲು ಉಪಯೋಗಿಸುವ ಸೌಕರ್ಯಗಳು ಯಾವುವು?

- 
- 
- 
- 
- 
- 



ರಾಜರ ಘೋಷಣೆ - ಚಿತ್ರೀಕರಣ

ವಿವಿಧ ಕಾಲಘಟ್ಟಗಳಲ್ಲಿ ಸುದ್ದಿ ಮತ್ತು ಸಂದೇಶಗಳನ್ನು ರವಾನಿಸಲು ಬಳಸಿದ ವಿಧಾನಗಳನ್ನು ಕೆಳಗೆ ನೀಡಲಾಗಿದೆ.

ಹಿಂದಿನಕಾಲದ ಜನಸಾಮಾನ್ಯರು ಸುದ್ದಿ ಸಂದೇಶಗಳನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ರವಾನಿಸಲು ಕುದುರೆ, ನಾಯಿ, ಪಕ್ಷಿಗಳು ಮುಂತಾದವುಗಳನ್ನು ಉಪಯೋಗಿಸುತ್ತಿದ್ದರು. ಹಿಂದೆ ರಾಜರ ಆಡಳಿತ ಕಾಲದಲ್ಲಿ ಸಂದೇಶಗಳನ್ನು ತಿಳಿಸಲು ಕೈಗೊಳ್ಳುತ್ತಿದ್ದ ಆಶಯವಿನಿಮಯ ವಿಧಾನಗಳಲ್ಲಿ ಒಂದನ್ನು ಚಿತ್ರದಲ್ಲಿ ತೋರಿಸಲಾಗಿದೆ. ಮುದ್ರಣ ಯಂತ್ರದ ಸಂಶೋಧನೆಯು

ಮುದ್ರಣ ತಂತ್ರಜ್ಞಾನವನ್ನು ಕಂಡುಹಿಡಿದದ್ದು ಚೀನಾ ದೇಶದವರು. ಆರಂಭಕಾಲದಲ್ಲಿ ಮುದ್ರಣ ಯಂತ್ರವನ್ನು ಮರದ ತುಂಡುಗಳನ್ನು ಉಪಯೋಗಿಸಿ ಚಲಾಯಿಸಲಾಗುತ್ತಿತ್ತು. ನಂತರ ಜರ್ಮನಿಯವನಾದ ಗುಟ್ಟನ್ ಬರ್ಗ್ ಕಬ್ಬಿಣ ಉಪಯೋಗಿಸಿ ಮುದ್ರಣ ಯಂತ್ರವನ್ನು ಕಂಡುಹಿಡಿದನು. ಮುದ್ರಣ ಯಂತ್ರದ ಆಗಮನದ ನಂತರ ವಾರ್ತೆಗಳನ್ನು ವೇಗವಾಗಿ ಪ್ರಚಾರ ಮಾಡಲು ಸಾಧ್ಯವಾಯಿತು.



ಗುಟ್ಟನ್ ಬರ್ಗ್ ನ ಮುದ್ರಣ ಯಂತ್ರ



ಗುಟ್ಟನ್ ಬರ್ಗ್




ಸಂಕ್ಷೇಪ ವೇದಾರ್ಥಂ
(ಪೂರ್ತಿಯಾಗಿ ಮಲಯಾಳದಲ್ಲಿ ಮುದ್ರಿಸಿದ ಮೊದಲ ಪುಸ್ತಕ)

ಬಳಿಕ ವಾರ್ತೆಗಳು ಮತ್ತು ಸಂದೇಶ ರವಾನೆಯ ಕಾರ್ಯವನ್ನು ಸುಲಭಗೊಳಿಸಿತು.

ಅಂಚೆ ಪದ್ದತಿಯು ವಾರ್ತಾ ವಿನಿಮಯದ ವೇಗವನ್ನು ಹೆಚ್ಚಿಸಿತು. ಸಾರಿಗೆಯಲ್ಲಿ ಉಂಟಾದ ಬದಲಾವಣೆಯು ವಾರ್ತಾ ವಿನಿಮಯ ವ್ಯವಸ್ಥೆಯ ಮೇಲೂ ಪ್ರಭಾವ ಬೀರಿತು. ಸುದ್ದಿ ಮತ್ತು ಸಂದೇಶ ವಾರ್ತೆಗಳನ್ನು ತಲುಪಿಸುವಲ್ಲಿ ಅಂಚೆಯನ್ನು ವ್ಯಾಪಕವಾಗಿ ಉಪಯೋಗಿಸಲು ಆರಂಭಿಸಿದರು. ವೈಜ್ಞಾನಿಕ ರಂಗದಲ್ಲಿ ಉಂಟಾದ ಅಭಿವೃದ್ಧಿಯು ವಾರ್ತಾ ವಿನಿಮಯ ಬೆಳವಣಿಗೆಗೆ ದಾರಿ ಮಾಡಿ ಕೊಟ್ಟಿತು. ಇಂಟರ್ನೆಟ್ ಮತ್ತು ಅದಕ್ಕೆ ಅನುಬಂಧವಾದ ಸೇವೆಗಳ ಆಗಮನವು




ಭಾರತದ ಅಂಚೆ ಪೆಟ್ಟಿಗೆ

**ಸಂಪರ್ಕ ವಿನಿಮಯ ರಂಗದಲ್ಲಿ ಉಂಟಾದ ಬದಲಾವಣೆಯನ್ನು ಸೂಚಿಸುವ ವಿಡಿಯೋವನ್ನು ಟೀಚರ್‌ನ ಸಹಾಯದೊಂದಿಗೆ ತಯಾರಿಸಿರಿ.**

ವಾರ್ತಾ ವಿನಿಮಯದಲ್ಲಿ ಕ್ರಾಂತಿಕಾರಿಯಾದ ಬದಲಾವಣೆಯನ್ನು ತಂದಿತು.

## ಆಶಯ ವಿನಿಮಯ ವಿಧಾನಗಳು




ಸುದ್ದಿ ಮತ್ತು ಸಂದೇಶಗಳನ್ನು ಮುಖ್ಯವಾಗಿ ಎರಡು ರೀತಿಯಲ್ಲಿ ರವಾನಿಸಬಹುದು.

## ವೈಯಕ್ತಿಕ ಆಶಯ ವಿನಿಮಯ

ಒಬ್ಬ ವ್ಯಕ್ತಿಯಿಂದ ಇನ್ನೊಬ್ಬ ವ್ಯಕ್ತಿಗೆ ಸಂದೇಶಗಳು ಅಥವಾ ಆಶಯಗಳನ್ನು ರವಾನಿಸುವುದು ವೈಯಕ್ತಿಕ




ಆಶಯ ವಿನಿಮಯವಾಗಿದೆ. ವೈಯಕ್ತಿಕ ಆಶಯ ವಿನಿಮಯಕ್ಕಾಗಿ ಉಪಯೋಗಿಸುವ ಮಾಧ್ಯಮಗಳು.

## ಸಮೂಹ ಆಶಯವಿನಿಮಯ

ಒಂದು ಸಂದೇಶವನ್ನು ಅಥವಾ ಆಶಯವನ್ನು ಒಂದು ಜನ ಸಮೂಹಕ್ಕೆ ತಲುಪಿಸುವ ಮಾಧ್ಯಮವನ್ನು

## ಸಮೂಹ ಆಶಯ ವಿನಿಮಯ ಉಪಕರಣಗಳು



ದಿನಪತ್ರಿಕೆಗಳು




ರೇಡಿಯೋ



ಟೆಲಿವಿಷನ್



ಸೆಮಿನಾರ್




ಸಾರ್ವಜನಿಕ ಸಭೆ



ಬೀದಿ ನಾಟಕ

ಸಮೂಹ ಆಶಯ ವಿನಿಮಯ ಎನ್ನುವರು. ಇದಕ್ಕಾಗಿ ಉಪಯೋಗಿಸುವ ಮಾರ್ಗಗಳೇ ಸಮೂಹ ಆಶಯ ವಿನಿಮಯ ಮಾಧ್ಯಮಗಳಾಗಿವೆ.

### ಇಂಟರ್ನೆಟ್ ಆಧಾರಿತ ನೂತನ ಆಶಯ ವಿನಿಮಯ ತಂತ್ರಜ್ಞಾನ

ಇಂಟರ್ ನೆಟ್ ಎಂಬುದು ಜಗತ್ತಿನಾದ್ಯಂತ ಇರುವ ಕಂಪ್ಯೂಟರ್ ಗಳನ್ನು ಬಂಧಿಸುವ ಶೃಂಖಲೆಯಾಗಿವೆ. ಇಂಟರ್ನೆಟ್ ನ ಸಹಾಯದಿಂದ ಹಲವು ರೀತಿಯ ಮಾಹಿತಿಗಳು ನಮಗೆ ಲಭಿಸುತ್ತದೆ ಇಂಟರ್ನೆಟ್ ನ ಸಹಾಯದಿಂದ ಉಪಯೋಗಿಸಲ್ಪಡುವ ಕೆಲವು ನೂತನ ಆಶಯ ವಿನಿಮಯ ಸೌಕರ್ಯಗಳನ್ನು ಕೆಳಗೆ ನೀಡಲಾಗಿದೆ.

**ವಿಡಿಯೋ ಕಾನ್ಫರೆನ್ಸ್**

ದೂರದ ಸ್ಥಳದಲ್ಲಿರುವ ಜನರೊಂದಿಗೆ ಇಂಟರ್ನೆಟ್ ನ ಸಹಾಯದಿಂದ ವೀಕ್ಷಣೆ ಮತ್ತು ಮಾತುಗಾರಿಕೆಯ ಮೂಲಕ ಆಶಯವನ್ನು ತಿಳಿಸಲು ಸಾಧ್ಯ.

**ಈ ಕಾಮರ್ಸ್**

ಇಂಟರ್ನೆಟ್ ನ ಸಹಾಯದಿಂದ ಸರಕು ಮತ್ತು ಸೇವೆಗಳನ್ನು ಖರೀದಿಸುವ ಮತ್ತು ಮಾರಾಟ ಮಾಡುವ ವ್ಯವಸ್ಥೆ.

**ಇ-ಮೇಲ್**

ಎಲೆಕ್ಟ್ರಾನಿಕ್ ಮಾಧ್ಯಮಗಳನ್ನು ಉಪಯೋಗಿಸಿ ಸಂದೇಶಗಳನ್ನು ಕಳುಹಿಸಲು ಹಾಗೂ ಸ್ವೀಕರಿಸಲು ಮತ್ತು ಸಂಗ್ರಹಿಸಲು ಸಾಧ್ಯವಾಗುವ ವ್ಯವಸ್ಥೆ.

**ಟೆಲಿ-ಮೆಡಿಸಿನ್**

ಇಂಟರ್ನೆಟ್ ತಂತ್ರಜ್ಞಾನದ ಸಹಾಯದಿಂದ ದೂರದಲ್ಲಿರುವ ನುರಿತ ವೈದ್ಯರ ಸೇವೆಯನ್ನು ಆರೋಗ್ಯ ರಂಗದಲ್ಲಿ ಉಪಯೋಗಿಸುವುದು.

**ದೈನಂದಿನ ಜೀವನದಲ್ಲಿ ಮಾಹಿತಿ ತಂತ್ರಜ್ಞಾನದ ಪ್ರಭಾವದ ಕುರಿತು ಚರ್ಚಿಸಿ ಟಿಪ್ಪಣಿ ತಯಾರಿಸಿರಿ.**

ಮೇಲೆ ಸೂಚಿಸಿರುವುಗಳಲ್ಲದೆ ಪುಸ್ತಕಗಳು, ಮ್ಯಾಗಜಿನ್‌ಗಳು, ಕಲಾರೂಪಗಳು, ಸಿನಿಮಾ, ಸಾಮಾಜಿಕ ಜಾಲತಾಣಗಳು ಮುಂತಾದವುಗಳ ಮೂಲಕ ಸಮಾಜದಲ್ಲಿ ದೊಡ್ಡ ಪ್ರಮಾಣದಲ್ಲಿ ಆಶಯ ವಿನಿಮಯವನ್ನು ನಡೆಸಲು ಸಾಧ್ಯವಾಗುತ್ತದೆ.

ಆಧುನಿಕ ಸಮಾಜದ ರೂಪಿಕರಣದಲ್ಲಿ, ಸಾರಿಗೆಯಲ್ಲಿ ಆಶಯ ವಿನಿಮಯ ವ್ಯವಸ್ಥೆಗಳು ಪ್ರಧಾನ ಪಾತ್ರ ವಹಿಸುತ್ತದೆ. ಆಶಯ ವಿನಿಮಯ ತಂತ್ರಜ್ಞಾನದ ವೇಗವು ಜಗತ್ತಿನ ಜನರನ್ನು ಒಟ್ಟು ಸೇರಿಸುವಲ್ಲಿ ಅವಕಾಶವನ್ನು ಒದಗಿಸಿದೆ. ಇದು ಜನರನ್ನು ಜಾಗತಿಕ ಗ್ರಾಮವನ್ನಾಗಿಸುತ್ತದೆ ಹಾಗೂ ಜನರನ್ನು ಸೌಹಾರ್ದಯುತವಾಗಿ ಒಟ್ಟು ಸೇರಿಸುವಲ್ಲಿ ಮಾನವೀಯ ಮೌಲ್ಯಗಳನ್ನು ಬೆಳೆಸಲು ಸಹಾಯಕವಾಗುವ ರೀತಿಯಲ್ಲಿ ಈ ಸಾರಿಗೆ ಆಶಯ ವಿನಿಮಯ ವ್ಯವಸ್ಥೆಗಳನ್ನು ನಾವು ಉಪಯೋಗಿಸಬಹುದು.



## ಮುಂದುವರಿದ ಚಟುವಟಿಕೆಗಳು

1. ಜಲ ಸಾರಿಗೆ, ವಾಯು ಸಾರಿಗೆ ಪ್ರಯಾಣಗಳನ್ನು ಟೀಚರ್‌ನ ಸಹಾಯದೊಂದಿಗೆ ICT ಮೂಲಕ ತಿಳಿದುಕೊಳ್ಳಿರಿ.
2. ಸಾರಿಗೆ ವ್ಯವಸ್ಥೆ ಮಾನವರಲ್ಲಿ ಉಂಟುಮಾಡಿದ ಬದಲಾವಣೆಗಳ ಕುರಿತು ಸೆಮಿನಾರ್ ನಡೆಸಿರಿ.
3. ಸಾರಿಗೆ ಮತ್ತು ಸಂಪರ್ಕ ರಂಗಗಳಲ್ಲಿ ಉದ್ಯೋಗ ಸಾಧ್ಯತೆಗಳ ಕುರಿತು ಅನ್ವೇಷಣೆ ನಡೆಸಿ ಟಿಪ್ಪಣಿ ತಯಾರಿಸಿರಿ.
4. ವಿವಿಧ ವಾಹನಗಳ ಮಾದರಿಯನ್ನು ತಯಾರಿಸಿ ಶಾಲೆಯಲ್ಲಿ ಪ್ರದರ್ಶನ ನಡೆಸಿರಿ.

# 8

# ನಾಡನ್ನು ಅರಿಯೋಣ



ಪಚ್ಚಯಾಂ ವಿರಿಪಿಟ್ಟ ಸಹ್ಯನಿಲ್ ತಲೆವೆಚ್ಚುಂ
ಸ್ವಚ್ಛಾಬ್ಧಿಮಣಲ್ ತಿಟ್ಟಂ ಪಾದೋ ಪದಾನಂ ಪೂಂಡುಂ
ಪಳ್ಳಿಕೊಂಡಿಡುನ್ನ ನಿನ್ ಪಾರ್ಶ್ವಯುಗ್ಮತ್ತಿ ಕಾತ್ತು
ಕೊಳ್ಳುನ್ನು ಕುಮಾರಿಯುಂ ಗೋಕರ್ಣೇಶನುಮಮ್ಮೆ

**ಮಾತೃವಂದನಂ: ವಳ್ಳತ್ತೋಳ್ ನಾರಾಯಣ ಮೆನೋನ್**

ಹಸಿರು ಪಸರಿಸಿರುವ ಸಹ್ಯಾದ್ರಿಯಲ್ಲಿ ತಲೆಯಿಟ್ಟು
ಸ್ವಚ್ಛ ಸಾಗರದ ಮಳಲ ದಂಡೆಯಲಿ ಕಾಲು ಚಾಚಿ
ಮಲಗಿರುವ ನಿನ್ನ ಇಕ್ಕೆಲಗಳನ್ನು ಕಾಯುತ್ತಿರುವರು
ಕನ್ಯಾಕುಮಾರಿ ಗೋಕರ್ಣೇಶರು ತಾಯೇ

ಕೇರಳದ ಸೌಂದರ್ಯವನ್ನು ವಿವರಿಸುವ ವಳ್ಳತ್ತೋಳ್ ನಾರಾಯಣ ಮೆನೋನ್‌ರವರ ಕವಿತೆಯ ಆಶಯವನ್ನು ಗಮನಿಸಿರಿ.

ಪೂರ್ವದಲ್ಲಿ ಎತ್ತರದ ಪರ್ವತಗಳು, ಅದರಿಂದ ಹರಿಯುವ ಅನೇಕ ನದಿಗಳು, ಬಯಲಿನುದ್ದಕ್ಕೂ ದೋಣಿಗಳು ಚಲಿಸುವ ಹಿನ್ನೀರು, ಪಶ್ಚಿಮಕ್ಕೆ ಚಾಚಿಕೊಂಡಿರುವ ಕಡಲ ತೀರ, ಗದ್ದೆ ಬಯಲುಗಳು, ಸಮತಲ ಪ್ರದೇಶಗಳು ಎಲ್ಲೆಲ್ಲೂ ಹಚ್ಚಹಸಿರು, ಹಿತಕರ ವಾತಾವರಣ, ಎಷ್ಟು ಸುಂದರ ನಮ್ಮ ಕೇರಳ!

ನೀವು ವಾಸಿಸುವ ಪ್ರದೇಶಗಳಲ್ಲಿ ಈ ರೀತಿಯಲ್ಲಿರುವ ಸ್ಥಳಗಳು, ಬೆಟ್ಟಗಳು, ಕಡಲ ತೀರಗಳು, ಜಲಾಶಯಗಳು ಮೊದಲಾದ ವಿಶೇಷತೆಗಳಿವೆಯೇ? ಕೇರಳದ ಭೂಪ್ರಕೃತಿಯು ವೈವಿಧ್ಯಮಯವಾದ ಭೂ ವಿಶೇಷತೆಗಳನ್ನು ಒಳಗೊಂಡಿದೆ.

ಇನ್ನು ನಾವು ಕೇರಳದ ಒಂದು ಗ್ರಾಮ ಪಂಚಾಯತಿನ ನಕ್ಷೆಯನ್ನು ನಿರೀಕ್ಷಿಸುವ.




ಚಿತ್ರ-1

ಮೂಲ: ವಾಣಿಯಂಕುಳ ಪಂಚಾಯತ್ ವಿಜ್ಞಾನೀಯಂ: 2001

ವಾಣಿಯಂಕುಳಂ ಬೆಟ್ಟಗಳು, ಸಮತಲ ಪ್ರದೇಶಗಳು ಒಳಗೊಂಡಿರುವ ಭೂಪ್ರಕೃತಿಯಾಗಿದೆ. ನಕ್ಷೆಯಲ್ಲಿ ಕಾಣುವ ಪ್ರಧಾನ ನದಿ ಯಾವುದು?

- ..............................................

ವಾಣಿಯಂಕುಳಂ ಗ್ರಾಮ ಪಂಚಾಯತಿನ ದಕ್ಷಿಣ ಗಡಿಯಲ್ಲಿ ಭಾರತಹೊಳೆ ಹರಿಯುತ್ತದೆ.

ಭಾರತಹೊಳೆಗೆ ಸಮಾನಾಂತರವಾಗಿ ಹಾದು ಹೋಗುವ ಪ್ರಧಾನ ಸಾರಿಗೆ ಮಾರ್ಗ ಯಾವುದು?

- ..............................................

ಪಂಚಾಯತಿನ ಹೆಚ್ಚಿನ ಪ್ರದೇಶಗಳು ಭಾರತಹೊಳೆಯ ಜಲಾನಯನ ಪ್ರದೇಶಗಳಾಗಿವೆ. ಜಲ ಸಾರಿಗೆ, ಮೀನುಗಾರಿಕೆ ಮೊದಲಾದವುಗಳಿಗಾಗಿ ಈ ಹೊಳೆಯನ್ನು ಉಪಯೋಗಿಸಲಾಗುತ್ತದೆ. ಹೊಳೆಯ ದಡದಲ್ಲಿರುವ ಫಲವತ್ತಾದ ಮಣ್ಣು ಕೃಷಿ ಅಭಿವೃದ್ಧಿಗೆ ಕಾರಣವಾಗುತ್ತದೆ.

ವಾಣಿಯಂಕುಳಂ ಗ್ರಾಮ ಪಂಚಾಯತಿನ ಕೃಷಿ, ಜನರ ಆಹಾರ ಪದ್ಧತಿ, ಸಾರಿಗೆ ಇತ್ಯಾದಿಗಳ ಮೇಲೆ ಭಾರತಹೊಳೆ ಹೇಗೆ ಪರಿಣಾಮ ಬೀರುತ್ತದೆ? ಎಂದು ಚರ್ಚಿಸಿರಿ.

- ಭಾರತಹೊಳೆಯ ದಡದಲ್ಲಿರುವ ಫಲವತ್ತಾದ ಮಣ್ಣು ಕೃಷಿಗೆ ಸೂಕ್ತವಾಗಿದೆ .
- 
- 
- 

ವಾಣಿಯಂಕುಳಂ ಗ್ರಾಮ ಪಂಚಾಯಿತಿನ ಕೆಲವು ಭೌಗೋಳಿಕ ವೈಶಿಷ್ಟ್ಯಗಳನ್ನು ನಾವು ತಿಳಿದುಕೊಂಡಿದ್ದೇವೆಯಲ್ಲವೇ. ಇಂತಹ ಭೌಗೋಳಿಕ ಲಕ್ಷಣಗಳು ಆ ಊರಿನ ಜನರ ಜೀವನದ ಮೇಲೆ ಅನೇಕ ರೀತಿಯಲ್ಲಿ ಪ್ರಭಾವ ಬೀರುವುದನ್ನು ಕಂಡಿರಲ್ಲವೇ.

ನೀವು ವಾಸಿಸುವ ಪ್ರದೇಶದ ಭೌಗೋಳಿಕ ಲಕ್ಷಣಗಳು, ಅಲ್ಲಿನ ವಿವಿಧ ಕೃಷಿ ಬೆಳೆಗಳು, ಉದ್ಯೋಗಗಳು ಇತ್ಯಾದಿಗಳನ್ನು ಪಟ್ಟಿ ಮಾಡಿರಿ.

ನಿಮ್ಮ ಊರಿನ ಕೃಷಿ ಹಾಗೂ ಇತರ ಉದ್ಯೋಗಗಳು ಭೌಗೋಳಿಕ ವೈಶಿಷ್ಟ್ಯಗಳಿಗೆ ಸಂಬಂಧಿಸಿರುವುದಲ್ಲವೇ? ಕೊಟ್ಟಿರುವ ಸೂಚಕಗಳ ಆಧಾರದ ಮೇಲೆ ಪರಿಶೀಲಿಸಿರಿ. ಟೀಚರ ಸಹಾಯವನ್ನು ಪಡೆಯುವಿರಲ್ಲವೇ?



- ಹವಾಗುಣ
- ಜಲಾಶಯಗಳು
- ಸಮತಟ್ಟಾದ ಪ್ರದೇಶಗಳು
- ಗುಡ್ಡಗಾಡು ಪ್ರದೇಶಗಳು
- ಮಣ್ಣಿನ ಫಲವತ್ತತೆ
- ಸಾರಿಗೆ
- ಕೈಗಾರಿಕೆಗಳು

ನೀವು ಕಂಡುಕೊಂಡ ಮಾಹಿತಿ ಮತ್ತು ಪ್ರದೇಶದ ಭೌಗೋಳಿಕ ವೈಶಿಷ್ಟ್ಯಗಳನ್ನು ಸೇರಿಸಿ ಕೆಳಗೆ ನೀಡಲಾದ ವಿಷಯದ ಮೇಲೆ ಒಂದು ಸ್ಥಳೀಯ ಭೌಗೋಳಿಕ ರೇಖಾಚಿತ್ರವನ್ನು ತಯಾರಿಸಿ ಸಮಾಜ ವಿಜ್ಞಾನ ಕ್ಲಬ್‌ನಲ್ಲಿ ಪ್ರಸ್ತುತಪಡಿಸಿರಿ.

### ಸ್ಥಳೀಯ ಭೌಗೋಳಿಕ ಚಿತ್ರ

- ಪ್ರದೇಶ/ಸ್ಥಳೀಯ ವಾರ್ಡ್ ಒಳಗೊಂಡ ರೂಪ ರೇಖೆ
- ಭೌಗೋಳಿಕ ವೈಶಿಷ್ಟ್ಯ
- ಭೌಗೋಳಿಕ ವೈಶಿಷ್ಟ್ಯಗಳೊಂದಿಗೆ ಜನಜೀವನದ ಸಂಬಂಧ
- ಎದುರಿಸುವ ಸಮಸ್ಯೆಗಳು
- ಪರಿಹಾರ ಸೂಚನೆಗಳು

ನಿಮ್ಮ ಪ್ರದೇಶದ ಭೌಗೋಳಿಕ ವೈಶಿಷ್ಟ್ಯಗಳನ್ನು ಚರ್ಚಿಸಿದಿರಲ್ಲವೇ. ನಮ್ಮ ರಾಜ್ಯದ ಭೂ ಪ್ರಕೃತಿ ವೈಶಿಷ್ಟ್ಯಗಳು ಇದೇ ರೀತಿಯಲ್ಲಿ ಇವೆಯೇ?

ಕೇರಳದ ಭೂಪ್ರಕೃತಿ, ಮಣ್ಣು, ನೀರು, ಹವಾಗುಣ ಮತ್ತು ಬೆಳೆಗಳು ಎಂಬುದರ ಕುರಿತು ಹಾಗೂ ಅವು ಜನಜೀವನದ ಮೇಲೆ ಬೀರುವ ಪ್ರಭಾವದ ಕುರಿತು ಒಂದು ಅಧ್ಯಯನ ನಡೆಸೋಣವೇ?

# ಕೇರಳದ ಭೂಪ್ರಕೃತಿ




ಚಿತ್ರ - 2

ಭೂಪಟವನ್ನು ನಿರೀಕ್ಷಿಸಿ ಕೆಳಗೆ ಸೂಚಿಸಿರುವುದನ್ನು ಕಂಡುಹಿಡಿದು ನೋಟು ಪುಸ್ತಕದಲ್ಲಿ ಬರೆಯಿರಿ.

- ಕೇರಳದ ಮೂರು ಭೂಪ್ರಕೃತಿ ವಿಭಾಗಗಳು
- ಪ್ರತಿಯೊಂದು ಭೂಪ್ರಕೃತಿ ವಿಭಾಗವು ಸಮುದ್ರ ಮಟ್ಟದಿಂದ ಇರುವ ಎತ್ತರ
- ಲಕ್ಷದ್ವೀಪ ಸಮುದ್ರಕ್ಕೆ ತಾಗಿಕೊಂಡಿರುವ ಕೇರಳದ ಭೂಪ್ರಕೃತಿ ವಿಭಾಗ
- ತಮಿಳುನಾಡು, ಕರ್ನಾಟಕ ಎಂಬೀ ರಾಜ್ಯಗಳ ಗಡಿಗಳೊಂದಿಗೆ ತಾಗಿಕೊಂಡು ನೆಲೆ ನಿಂತಿರುವ ಕೇರಳದ ಭೂಪ್ರಕೃತಿ ವಿಭಾಗ.

ಇನ್ನು ನಾವು ಕೇರಳದ ಭೂಪ್ರಕೃತಿ ವಿಭಾಗದ ಕುರಿತು ಹೆಚ್ಚಿನ ಮಾಹಿತಿಗಳನ್ನು ಪರಿಶೀಲಿಸೋಣ.

## ಮಲೆನಾಡು

ಕೇರಳದ ಭೂಪ್ರಕೃತಿ ಭೂಪಟದಲ್ಲಿ ಮಲೆನಾಡಿನ ಸ್ಥಾನವನ್ನು ಗುರುತಿಸಿರಿ. ಸಮುದ್ರಮಟ್ಟದಿಂದ ಸುಮಾರು 75 ಮೀಟರಿಗಿಂತ ಮೇಲೆ ನೆಲೆ ನಿಂತಿದ್ದು; ಬೆಟ್ಟ, ಗುಡ್ಡ, ಪರ್ವತಗಳನ್ನು ಒಳಗೊಂಡಿರುವ ಭೂಪ್ರಕೃತಿ ವಿಭಾಗವಾಗಿದೆ. ಮಲೆನಾಡು ಹೆಚ್ಚು ಮಳೆ ಬೀಳುವ ಪ್ರದೇಶವಾಗಿದ್ದು, ಸಾಮಾನ್ಯವಾಗಿ ಹಸಿರಿನಿಂದ ಕೂಡಿದೆ. ಕೇರಳದ ಎಲ್ಲಾ 44 ನದಿಗಳು ಈ ಭೂಪ್ರಕೃತಿ ವಿಭಾಗದಿಂದ ಹುಟ್ಟಿಕೊಂಡಿವೆ.

## ನಡುನಾಡು

ಪುಟ ಸಂಖ್ಯೆ 136 ರಲ್ಲಿ ನೀಡಿರುವ ಭೂಪಟದಲ್ಲಿ (ಚಿತ್ರ 2) ನಡುನಾಡಿನ ಸ್ಥಾನವನ್ನು ಕಂಡುಹಿಡಿಯಿರಿ. ಮಲೆನಾಡು ಮತ್ತು ಕರಾವಳಿ ಪ್ರದೇಶದ ಮಧ್ಯದಲ್ಲಿ ನೆಲೆ ನಿಂತಿರುವ ಭೂಪ್ರಕೃತಿ ವಿಭಾಗವಾಗಿದೆ ನಡುನಾಡು. ಈ ಪ್ರದೇಶದ ಎತ್ತರವು ಸಮುದ್ರಮಟ್ಟದಿಂದ 7.5 ಮೀಟರಿನಿಂದ 75 ಮೀಟರ್ ವರೆಗೆ ಇದೆ. ಸಣ್ಣಬೆಟ್ಟಗಳು, ಕಣಿವೆಗಳು, ನದಿ ಬಯಲುಗಳು ನಡುನಾಡಿನ ವಿಶೇಷತೆಯಾಗಿದೆ.

## ಕರಾವಳಿ

ಲಕ್ಷದ್ವೀಪ ಸಮುದ್ರದೊಂದಿಗೆ ತಾಗಿ ಕಾಣುವ ಭೂಪ್ರಕೃತಿ ವಿಭಾಗ ಇದಾಗಿದೆ. ಸಮುದ್ರ ತೀರದ ಸಮೀಪ ನೆಲೆ ನಿಂತಿರುವ ಈ ತೀರ ಪ್ರದೇಶವು ಸಮುದ್ರಮಟ್ಟದಿಂದ 7.5 ಮೀಟರ್ ವರೆಗೆ ಎತ್ತರವಿದೆ.




ನೀಡಿರುವ ರಾಷ್ಟ್ರೀಯ ಭೂಪಟದ ಮೇಲೆ ಒಂದು ಟ್ರೇಸಿಂಗ್ ಪೇಪರನ್ನು ಇಟ್ಟು ಜಿಲ್ಲೆಗಳನ್ನು ಬಿಡಿಸಿರಿ. ಅದರ ನಂತರ ಜಿಲ್ಲೆಗಳನ್ನು ಬಿಡಿಸಿದ ಟ್ರೇಸಿಂಗ್ ಪೇಪರ್‌ನ್ನು ಚಿತ್ರ - 2ರಲ್ಲಿ (ಪುಟ ಸಂಖ್ಯೆ 136) ಕೇರಳದ ಭೂಪ್ರಕೃತಿ ಭೂಪಟದ ಮೇಲೆ ಸರಿಯಾದ ರೀತಿಯಲ್ಲಿ ಕ್ರಮೀಕರಿಸಿ ಸೂಪರ್ ಎಂಬೋಸ್ ಮಾಡಿ ಕೆಳಗೆ ಹೇಳಿರುವುದನ್ನು ಕಂಡು ಹಿಡಿಯಿರಿ.

- ಪ್ರತಿಯೊಂದು ಜಿಲ್ಲೆಗಳಲ್ಲೂ ಒಳಗೊಳ್ಳುವ ಭೂಪ್ರಕೃತಿ ವಿಭಾಗಗಳು
- ಕರಾವಳಿ ಪ್ರದೇಶವಿರುವ ಜಿಲ್ಲೆಗಳು
- ಮೂರೂ ಭೂಪ್ರಕೃತಿ ವಿಭಾಗ ಒಳಗೊಳ್ಳುವ ಜಿಲ್ಲೆಗಳು.

## ಕೇರಳದ ಹವಾಗುಣ

ಕೇರಳವು ಸಾಕಷ್ಟು ಮಳೆ ಲಭಿಸುವ ಪ್ರದೇಶವಾಗಿದೆ. ಕೇರಳದಲ್ಲಿ ಎರಡು ಪ್ರಮುಖ ಮಳೆಯ ಋತುಗಳಿವೆ.

- ನೈಋತ್ಯ ಮಾನ್ಸೂನ್ ಋತು ಅಥವಾ ಕಾಲ ವರ್ಷ (ಮುಂಗಾರು ಮಳೆ).
- ಈಶಾನ್ಯ ಮಾನ್ಸೂನ್ ಋತು ಅಥವಾ ತುಲಾ ವರ್ಷ (ಹಿಂಗಾರು ಮಳೆ).

ನೈಋತ್ಯ ಮಾನ್ಸೂನ್ ಸಮಯದಲ್ಲಿ ಕೇರಳದಲ್ಲಿ ಹೆಚ್ಚಿನ ಮಳೆಯಾಗುತ್ತದೆ.

ಕೇರಳದಲ್ಲಿ ಬೇಸಿಗೆ ಕಾಲವು ಮಾರ್ಚ್ ನಿಂದ ಮೇ ವರೆಗೆ ಇರುತ್ತದೆ. ಈ ಕಾಲದಲ್ಲಿ ತುಂಬಾ ಸೆಖೆ ಅನುಭವಕ್ಕೆ ಬರುತ್ತದೆ. ಬೇಸಿಗೆ ಕಾಲದ ಮಧ್ಯಂತರ ಮಳೆಯು ಸೆಖೆಯ ತೀವ್ರತೆಯನ್ನು ಕಡಿಮೆ ಮಾಡಿ ಆಹ್ಲಾದವನ್ನು ನೀಡುತ್ತದೆ.

### ಮಾನ್ಸೂನ್

ಮಾನ್ಸೂನ್ ಮಾರುತಗಳು ಕಾಲದ ಬದಲಾವಣೆಗೆ ಅನುಗುಣವಾಗಿ ದಿಕ್ಕು ಬದಲಿಸಿ ಬೀಸುವ ಗಾಳಿಯಾಗಿದೆ.

ಜೂನ್- ಸೆಪ್ಟೆಂಬರ್ ತಿಂಗಳುಗಳಲ್ಲಿ ಭೂಮಧ್ಯ ರೇಖೆಯ ಉತ್ತರದ ಹಿಂದೂ ಮಹಾಸಾಗರದಲ್ಲಿ ನೈಋತ್ಯ ದಿಕ್ಕಿನಿಂದ ತೀರಕ್ಕೆ ಬೀಸುವ ಮಾರುತವಾಗಿದೆ ನೈಋತ್ಯ ಮಾನ್ಸೂನ್ ಮಾರುತಗಳು.

ಸಮುದ್ರದಿಂದ ಬೀಸುವುದರಿಂದ ಇವು ತೇವಾಂಶ ವಾಹಕಗಳಾಗಿವೆ. ತೀರಕ್ಕೆ ಬೀಸುವ ಈ ಗಾಳಿಯನ್ನು ಪಶ್ಚಿಮ ಘಟ್ಟದ ಪರ್ವತ ಸಾಲುಗಳು ತಡೆದು ನಿಲ್ಲಿಸುತ್ತದೆ. ಇದರ ಫಲವಾಗಿ ಕೇರಳವನ್ನು ಒಳಗೊಂಡಿರುವ ಪಶ್ಚಿಮ ಕರಾವಳಿಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮಳೆ ಲಭಿಸುತ್ತದೆ. ಇದನ್ನು ನೈಋತ್ಯ ಮಾನ್ಸೂನ್ ಎನ್ನುವರು. ಕೇರಳದಲ್ಲಿ ಈ ಮಳೆಗಾಲವನ್ನು 'ಕಾಲ ವರ್ಷ' (ಮುಂಗಾರು ಮಳೆ) ಎಂದು ಕರೆಯುತ್ತಾರೆ.

ಅಕ್ಟೋಬರ್, ನವೆಂಬರ್ ತಿಂಗಳುಗಳಲ್ಲಿ ಮಾನ್ಸೂನ್ ಮಾರುತಗಳು ಈಶಾನ್ಯದಿಂದ ವಿರುದ್ಧ ದಿಕ್ಕಿನಲ್ಲಿ ಬೀಸುತ್ತದೆ. ಈ ಮಾರುತಗಳನ್ನು ಈಶಾನ್ಯ ಮಾನ್ಸೂನ್ ಮಾರುತಗಳು ಎಂದು ಕರೆಯಲಾಗುತ್ತದೆ. ಈ ಮಾರುತಗಳ ಒಂದು ಭಾಗವು ಬಂಗಾಳಕೊಲ್ಲಿಯ ಮೇಲೆ ಹಾದು ಹೋಗುವುದರಿಂದ ಇದು ತೇವಾಂಶ ಪೂರಿತವಾಗಿದ್ದು ಭಾರತದ ದಕ್ಷಿಣ ರಾಜ್ಯಗಳ ಹಲವು ಭಾಗಗಳಲ್ಲಿ ಮಳೆ ಬರಲು ಕಾರಣವಾಗುತ್ತದೆ. ಈ ಮಳೆಗಾಲವನ್ನು ಕೇರಳದಲ್ಲಿ 'ತುಲಾ ವರ್ಷ' (ಹಿಂಗಾರು ಮಳೆ) ಎಂದು ಕರೆಯುತ್ತಾರೆ.

## ಕೇರಳದ ಮಣ್ಣು

**ಮಣ್ಣೇ ನಂಬಿ ಲೇಲಯ್ಯ**

ಮಣ್ಣೇ ನಂಬೀ ಲೇಲಯ್ಯ ಮರಮಿರುಕ್ಕು
ಮರತ್ತೆ ನಂಬೀ ಲೇಲಯ್ಯ ಮಣ್ಣೀರುಕ್ಕು
ಮರತ್ತೆ ನಂಬೀ ಲೇಲಯ್ಯ ಕೊಂಬಿರುಕ್ಕು
ಕೊಂಬೇ ನಂಬಿ ಲೇಲಯ್ಯ ಇಲಇರುಕ್ಕು
ಇಲಯೇ ನಂಬಿ ಲೇಲಯ್ಯ ಪೂವಿರುಕ್ಕು
ಪೂವೆ ನಂಬಿ ಲೇಲಯ್ಯ ಕಾಯಿರುಕ್ಕು
ಕಾಯೇ ನಂಬಿ ಲೇಲಯ್ಯ ಪಳಂಮಿರುಕ್ಕು
ಪಳತ್ತೆ ನಂಬಿ ಲೇಲಯ್ಯ ನಾಮಿರುಕ್ಕು
ನಮ್ಮ ನಂಬೀ ಲೇಲಯ್ಯ ನಾಡಿರುಕ್ಕು

ಮೂಲ:ಹಸ್ತಪ್ರತಿ *2008-2009*

ಅಟ್ಟಪಾಡಿಯ ಇರುಳ ಜನಾಂಗದ ಹಾಡನ್ನು ಗಮನಿಸಿರಿ. ಜೀವಜಾಲಗಳ ಅಸ್ತಿತ್ವಕ್ಕೆ ಜಲ, ಗಾಳಿಯಂತೆ ಮಣ್ಣು ಕೂಡ ಅತ್ಯವಶ್ಯಕ. ಮಣ್ಣು, ಮನುಷ್ಯರ ನಡುವೆ ಇರುವ ಪರಸ್ಪರ ಸಂಬಂಧದಿಂದ ಮಾನವ ಸಂಸ್ಕೃತಿ ರೂಪಗೊಂಡಿದೆ. ಮಣ್ಣಿಲ್ಲದಿದ್ದರೆ ಸಸ್ಯಗಳಿಲ್ಲ, ಅವುಗಳನ್ನು ಆಶ್ರಯಿಸಿರುವ ಜೀವಿಗಳೂ ಇಲ್ಲ.

ಮಣ್ಣು ಹೇಗೆ ರೂಪುಗೊಳ್ಳುತ್ತದೆ ?

ಮಣ್ಣು ಭೂಮಿಯಲ್ಲಿ ಜೀವದ ಅಸ್ತಿತ್ವಕ್ಕೆ ಕಾರಣವಾಗುವ ಪ್ರಧಾನ ಘಟಕಗಳಲ್ಲೊಂದಾಗಿದೆ. ಬಂಡೆ ಒಡೆದು ಮಣ್ಣಾಗಿ ಪರಿವರ್ತನೆಯಾಗುವುದು ದೀರ್ಘಕಾಲದ ಪ್ರಕ್ರಿಯೆಯಾಗಿದೆ.

ಜವಾಹರ್ ಲಾಲ್ ನೆಹರೂರವರ 'ತಂದೆ ಮಗಳಿಗೆ ಬರೆದ ಪತ್ರಗಳು' ಎಂಬ ಪುಸ್ತಕದಲ್ಲಿ ಮಣ್ಣು ಹೇಗೆ ಉಂಟಾಗುತ್ತದೆ ಎಂದು ಪ್ರತಿಪಾದಿಸುವ ಭಾಗ ಓದಿ, ತರಗತಿಯಲ್ಲಿ ಚರ್ಚಿಸಿರಿ.



ಭೂಪ್ರಕೃತಿ, ಹವಾಗುಣ, ಕಲ್ಲಿನ ರಚನೆ, ಪ್ರಾಚೀನತೆ, ಸಸ್ಯಗಳು, ಪ್ರಾಣಿಗಳು ಹಾಗೂ ಇತರ ಸೂಕ್ಷ್ಮಜೀವಿಗಳ ಚಟುವಟಿಕೆ ಇತ್ಯಾದಿಗಳು ಮಣ್ಣು ರೂಪುಗೊಳ್ಳಲು ಕಾರಣವಾಗುತ್ತದೆ. ಒಂದಿಂಚು ದಪ್ಪ ಮಣ್ಣು ರೂಪುಗೊಳ್ಳಲು, ಸುಮಾರು ಸಾವಿರಕ್ಕಿಂತಲೂ ಹೆಚ್ಚು ವರ್ಷಗಳು ಬೇಕಾಗುತ್ತದೆ ಎಂದು ಅಂದಾಜಿಸಲಾಗಿದೆ.

**ಮಣ್ಣನ್ನು ಉಪಯೋಗಿಸಿ ಮನುಷ್ಯನು ಮಾಡುವ ವೈವಿಧ್ಯಮಯವಾದ ಚಟುವಟಿಕೆಗಳ ಚಿತ್ರಗಳನ್ನು ಸಂಗ್ರಹಿಸಿ ಟೀಚರ ಸಹಾಯದೊಂದಿಗೆ ಡಿಜಿಟಲ್ ಆಲ್ಬಮ್ ತಯಾರಿಸಿ ಸಮಾಜ ವಿಜ್ಞಾನ ಕ್ಲಬ್ಬಿನಲ್ಲಿ ಪ್ರದರ್ಶಿಸಿರಿ.**

ಲ್ಯಾಟರೈಟ್ ಮಣ್ಣು (Laterite Soil), ಕೆಂಪು ಮಣ್ಣು (Red Soil), ಮೆಕ್ಕಲು ಮಣ್ಣು (Alluvial Soil), ಅರಣ್ಯಮಣ್ಣು (Forest Soil) ಎಂಬಿವುಗಳು ಕೇರಳದ ಮಣ್ಣಿನ ಪ್ರಮುಖ ವಿಧಗಳಾಗಿವೆ. ಕಪ್ಪು ಮಣ್ಣು(Black Soil), ಪೀಟ್ ಮಣ್ಣು (Peat Soil) ಮೊದಲಾದವುಗಳು ಕೆಲವು ಪ್ರದೇಶಗಳಲ್ಲಿ ಕಂಡು ಬರುತ್ತವೆ.

**ಮಣ್ಣಿನ ಪ್ರಮುಖ ವಿಧಗಳ ವಿಶೇಷತೆಗಳ ಕುರಿತು ಹೆಚ್ಚಿನ ಮಾಹಿತಿಯನ್ನು ಟೀಚರ ಸಹಾಯದಿಂದ ಸಂಗ್ರಹಿಸಿ ಟಿಪ್ಪಣಿ ತಯಾರಿಸಿ ತರಗತಿಯಲ್ಲಿ ಪ್ರಸ್ತುತಪಡಿಸಿರಿ.**

ಚಿತ್ರಗಳನ್ನು ನಿರೀಕ್ಷಿಸಿರಿ.



ಅತಿಯಾದ ಕೀಟನಾಶಕ ಹಾಗೂ ರಸಗೊಬ್ಬರದ ಬಳಕೆ



ಮಣ್ಣಿನಲ್ಲಿ ಪ್ಲಾಸ್ಟಿಕ್ ತ್ಯಾಜ್ಯಗಳು



ಅವೈಜ್ಞಾನಿಕ ಗಣಿಗಾರಿಕೆ



ಅವೈಜ್ಞಾನಿಕ ಕೃಷಿ ಚಟುವಟಿಕೆಗಳು

ಮಣ್ಣಿನ ವಿಶಿಷ್ಟ ಗುಣಲಕ್ಷಣಗಳ ಮೇಲೆ ಪ್ರತಿಕೂಲ ಪರಿಣಾಮ ಬೀರುವ ದೃಶ್ಯಗಳನ್ನು ಚಿತ್ರಗಳಲ್ಲಿ ನೀಡಲಾಗಿದೆ. ಇತರ ಸಂದರ್ಭಗಳನ್ನು ಹುಡುಕಿ ಪಟ್ಟಿ ಮಾಡಿರಿ.

- 
- 
- 
- 

ಮಣ್ಣು ಸಂರಕ್ಷಣೆಗೆ ಯಾವೆಲ್ಲಾ ಕ್ರಮಗಳನ್ನು ಕೈಗೊಳ್ಳಬಹುದು?

ಮಣ್ಣು ಸಂರಕ್ಷಣ ಕ್ರಮಗಳ ಚಿತ್ರಗಳನ್ನು ನಿರೀಕ್ಷಿಸಿರಿ.


ಕಾಂಡ್ಲಾ ಕಾಡುಗಳು


ಹುರಿಹಗ್ಗದ ಹೊದಿಕೆ


ಕಲ್ಲಿನ ಧರೆ


ಸಮತಟ್ಟು ಕೃಷಿ

ಹೆಚ್ಚಿನ ಕ್ರಮಗಳನ್ನು ಕಂಡು ಹಿಡಿದು ಪಟ್ಟಿ ಮಾಡಿರಿ .

-
-
-

ಡಿಸೆಂಬರ್ 5 'ವಿಶ್ವ ಮಣ್ಣು ಸಂರಕ್ಷಣಾದಿನ'ವಾಗಿ ವಿಶ್ವಸಂಸ್ಥೆಯು ಆಚರಿಸುತ್ತದೆ.

**ನಿಮ್ಮ ಪ್ರದೇಶದ ಮಣ್ಣಿನ ವಿಧಗಳನ್ನು ಸಂಗ್ರಹಿಸಿ ಟೀಚರ ಸಹಾಯದೊಂದಿಗೆ ಅವುಗಳ ವಿಶೇಷತೆಗಳನ್ನು ಗುರುತಿಸಿ ಚಾರ್ಟಿನಲ್ಲಿ ಬರೆದು ತರಗತಿಯಲ್ಲಿ ಪ್ರದರ್ಶಿಸಿರಿ.**

## ಕೇರಳದ ಜಲಸಂಪನ್ಮೂಲಗಳು

ನೀರು ಮನುಷ್ಯರ ಅಸ್ತಿತ್ವಕ್ಕೆ ಅನಿವಾರ್ಯವಾದ ಒಂದು ನೈಸರ್ಗಿಕ ಮೂಲವಾಗಿದೆ.

ಭೂಮಿಯ ಮೇಲಿನ ನೀರಿನ ನೈಸರ್ಗಿಕ ಮೂಲಗಳು ಯಾವುವು?

- ನದಿಗಳು
- ಒರತೆಗಳು
-
-

**ನಿಮ್ಮ ಪ್ರದೇಶದ ನೀರಿನ ಮೂಲಗಳು ಯಾವುವು?**

ಕೇರಳವು ಪೂರ್ವದಲ್ಲಿ ಸಹ್ಯ ಪರ್ವತದಿಂದ ಪಶ್ಚಿಮದಲ್ಲಿ ಅರಬ್ಬಿ ಸಮುದ್ರದವರೆಗೆ ಏರಿಳಿತಗಳೊಂದಿಗೆ, ಇಳಿ ಜಾರಿನಿಂದ ಕೂಡಿದ ಭೂಪ್ರಕೃತಿಯಾಗಿದೆ. ಸಹ್ಯ ಪರ್ವತ ಸಾಲುಗಳಲ್ಲಿ ಉದ್ಭವಿಸಿ ಸರೋವರಗಳಿಗೂ

ಸಮುದ್ರಗಳಿಗೂ ಹರಿಯುವ ನದಿಗಳು ಕೇರಳವನ್ನು ಜಲ ಸಮೃದ್ಧಿಯನ್ನಾಗಿಸುತ್ತದೆ. ಇವುಗಳಲ್ಲದೆ ಹಲವಾರು ಕೆರೆಗಳು, ಕೊಳಗಳು ನಮ್ಮ ನಾಡಿನಲ್ಲಿವೆ. ಮಲೆನಾಡು ಭೂಪ್ರಕೃತಿ ವಿಭಾಗದಲ್ಲಿ ಕೇರಳದ 44 ನದಿಗಳು ಉದ್ಭವಿಸಿವೆ. ಇವುಗಳಲ್ಲಿ 3 ನದಿಗಳು ಪೂರ್ವಕ್ಕೂ 41 ನದಿಗಳು ಪಶ್ಚಿಮಕ್ಕೆ ಹರಿಯುತ್ತವೆ.

**ನಿಮ್ಮ ಶಾಲೆಯಲ್ಲಿ ಸಮಾಜ ವಿಜ್ಞಾನ ಲ್ಯಾಬ್‌ನಲ್ಲಿ ಕೇರಳದ ನದಿಗಳ ಭೂಪಟವನ್ನು ನಿರೀಕ್ಷಿಸಿ ಪೂರ್ವಕ್ಕೂ ಪಶ್ಚಿಮಕ್ಕೂ ಹರಿಯುವ ನದಿಗಳನ್ನು ಕಂಡುಹಿಡಿದು ಬೇರ್ಪಡಿಸಿ ಪಟ್ಟಿ ಮಾಡಿರಿ.**

ಎರಡು ಮಳೆಗಾಲಗಳ ಮೂಲಕ ನಮ್ಮ ಜಲಮೂಲಗಳು ಸಮೃದ್ಧವಾಗುವುದಾದರೂ ಮಳೆಗಾಲ ಮುಗಿದ ಕೂಡಲೇ ಅವುಗಳಲ್ಲಿ ಹಲವು ಬತ್ತಿ ಹೋಗುವುದನ್ನು ಗಮನಿಸಿಲ್ಲವೇ? ಇದರ ಕಾರಣಗಳನ್ನು ಕಂಡುಹುಡುಕಿರಿ.

ಜಗತ್ತಿನ ಒಟ್ಟು ಜಲ ಲಭ್ಯತೆಯ ಬಹಳ ಸಣ್ಣ ಪ್ರಮಾಣ ಮಾತ್ರವೇ ಶುದ್ಧ ಜಲವಾಗಿರುವುದು. ಅಮೂಲ್ಯವಾದ ಶುದ್ಧ ಜಲವನ್ನು ಸಂರಕ್ಷಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಇಂಗುಗುಂಡಿ, ಮಳೆನೀರು ಕೊಯ್ಲು, ತಡೆಗೋಡೆ, ಅಣೆಕಟ್ಟು ಮೊದಲಾದ ವಿಧಾನಗಳನ್ನು ಬಳಸಿಕೊಂಡು ಜಲ ಸಂರಕ್ಷಣೆ ಖಚಿತಪಡಿಸಲು ಸಾಧ್ಯ.

ಚಿತ್ರಗಳನ್ನು ನಿರೀಕ್ಷಿಸಿರಿ.





ಯಾವೆಲ್ಲ ಸಂದರ್ಭಗಳಲ್ಲಿ ಜಲಮೂಲಗಳು ಮಲಿನಗೊಳ್ಳುತ್ತವೆ?

**ನಿಮ್ಮ ಊರಿನ ಜಲಾಶಯಗಳು ಮಲಿನಗೊಳ್ಳುತ್ತಿವೆಯೇ? ಚರ್ಚಿಸಿರಿ. ಜಲಾಶಯಗಳನ್ನು ಮಲಿನೀಕರಣದಿಂದ ಸಂರಕ್ಷಿಸಲು ಯಾವೆಲ್ಲ ಸಲಹೆಗಳನ್ನು ನೀಡಬಹುದು.**

**ಜಲ ಸಂರಕ್ಷಣಾ ಸಂದೇಶಗಳಿರುವ ಫಲಕಗಳನ್ನು ತಯಾರಿಸಿ ಜಲಸಂರಕ್ಷಣಾ ಮೆರವಣಿಗೆಯನ್ನು ಆಯೋಜಿಸಿರಿ. ಮಳೆ ಕೊಯ್ಲು ಅಗತ್ಯದ ಕುರಿತು ಭಾಷಣ ತಯಾರಿಸಿರಿ.**

ಜಲಾಶಯಗಳು ಮಲಿನಗೊಳ್ಳುವುದರಿಂದ ಜೀವ ಜಾಲಗಳ ಉಳಿವಿಗೆ ತೊಂದರೆ ಉಂಟಾಗುತ್ತದೆ. ಈಗಿರುವ ಜಲಮೂಲಗಳನ್ನು ಸಂರಕ್ಷಿಸುವುದಕ್ಕೆ ಹಾಗೂ ಉಳಿಸಿ ಕೊಳ್ಳಲು ಸರಕಾರವು ವಿವಿಧ ಯೋಜನೆಗಳನ್ನು ಜಾರಿಗೊಳಿಸಿದೆ. ಕೆಳಗೆ ಕೊಟ್ಟಿರುವ ಪಟ್ಟಿಯನ್ನು ಪರಿಶೀಲಿಸಿರಿ.

| ಯೋಜನೆ | ನಿರ್ವಹಣೆ |
|---|---|
| ಇನ್ನು ನಾನು ಹರಿಯಲೇ? | ಹರಿತ ಕೇರಳ ಮಿಷನ್ |
| ಮಾಲಿನ್ಯ ಮುಕ್ತ ನವಕೇರಳ | ಸ್ಥಳೀಯಾಡಳಿತ ಇಲಾಖೆ |
| ಶುದ್ಧನೀರಿನಿಂದ ಹರಿಯುತ್ತಿದೆ ನವಕೇರಳ | ಸ್ಥಳೀಯಾಡಳಿತ ಇಲಾಖೆ |
| ಜಲಜೀವನ ಮಿಷನ್ | ಕೇಂದ್ರ ಸರಕಾರ |

ಈ ಯೋಜನೆಗಳ ಉದ್ದೇಶಗಳನ್ನು ಕಂಡುಹಿಡಿಯಿರಿ.

## ಕೇರಳದ ಬೆಳೆ ವೈವಿಧ್ಯ

ಕೇರಳದ ವಿವಿಧ ಪ್ರದೇಶಗಳಲ್ಲಿ ಕಂಡು ಬರುವ ಕೆಲವು ಕೃಷಿ ಬೆಳೆಗಳ ಚಿತ್ರಗಳನ್ನು ನಿರೀಕ್ಷಿಸಿರಿ.




ಚಿತ್ರದಲ್ಲಿ ಯಾವೆಲ್ಲ ಬೆಳೆಗಳು ಕಾಣುತ್ತವೆ?

ಈ ಪ್ರತಿಯೊಂದು ಬೆಳೆಗಳು ಪ್ರಧಾನವಾಗಿ ಯಾವ ಭೂಪ್ರಕೃತಿ ವಿಭಾಗಗಳಲ್ಲಿ ಕೃಷಿ ಮಾಡಲಾಗುತ್ತದೆ?

ಕೇರಳದ ಎಲ್ಲಾ ಭೂಪ್ರಕೃತಿ ವಿಭಾಗಗಳಲ್ಲೂ ಚಹಾವನ್ನು ಕೃಷಿ ಮಾಡದಿರುವುದು ಯಾಕಾಗಿರಬಹುದು?

ಸಮುದ್ರ ತೀರಕ್ಕೆ ಸಮೀಪವಿರುವ ಪ್ರದೇಶಗಳಲ್ಲಿ ಸಾಮಾನ್ಯವಾಗಿ ರಬ್ಬರ್ ಕೃಷಿ ಕಂಡು ಬರುವುದಿಲ್ಲ ಕಾರಣವೇನಾಗಿರಬಹುದು?

ಪ್ರತಿಯೊಂದು ಪ್ರದೇಶದ ಕೃಷಿ ಅಲ್ಲಿನ ಭೂಪ್ರಕೃತಿ, ಹವಾಮಾನ ಮೊದಲಾದವುಗಳೊಂದಿಗೆ

ಸಂಬಂಧಿಸಿರುತ್ತದೆ. ಮಣ್ಣು, ನೀರಾವರಿ ಸೌಲಭ್ಯಗಳು, ಸಮುದ್ರದ ಮಟ್ಟದಿಂದಿರುವ ಎತ್ತರ ಇತ್ಯಾದಿಗಳು ಕೃಷಿಯ ಮೇಲೆ ಪ್ರಭಾವ ಬೀರುತ್ತವೆ.

ಇಡುಕ್ಕಿ ಜಿಲ್ಲೆಯ ಮುನ್ನಾರ್, ಪಿರುಮೇಡು; ವಯನಾಡು ಜಿಲ್ಲೆಯ ಮೇಪ್ಪಾಡಿ, ವೈತೀರಿ; ತಿರುವನಂತಪುರಂ ಜಿಲ್ಲೆಯ ಪೊನ್ಮುಡಿ ಇತ್ಯಾದಿ ಪ್ರದೇಶಗಳಲ್ಲಿ ಚಹಾವನ್ನು ವ್ಯಾಪಕವಾಗಿ ಕೃಷಿ ಮಾಡಲಾಗುತ್ತದೆ. ಪಾಲಕ್ಕಾಡು ಜಿಲ್ಲೆಯಲ್ಲೂ, ಕುಟ್ಟನಾಡಿನಲ್ಲೂ ಭತ್ತದ ಕೃಷಿ ವ್ಯಾಪಕವಾಗಿದೆ.

ನಿಮ್ಮ ಪ್ರದೇಶಗಳಲ್ಲಿ ಕೃಷಿ ಮಾಡುವ ಪ್ರಧಾನ ಬೆಳೆಗಳು ಯಾವುದೆಲ್ಲ ಎಂದು ಕಂಡು ಹಿಡಿದು ಪಟ್ಟಿಮಾಡಿರಿ.

- 
- 
- 
- 

ಫಲವತ್ತಾದ ಮಣ್ಣು ಮತ್ತು ಧಾರಾಳವಾಗಿ ಲಭಿಸುವ ಮಳೆಯು ಕೇರಳದಲ್ಲಿ ವೈವಿಧ್ಯಮಯವಾದ ಬೆಳೆಗಳಿಗೆ ಯೋಗ್ಯವಾದ ವಾತಾವರಣವನ್ನು ಸೃಷ್ಟಿಸುತ್ತದೆ. ಸಮುದ್ರಮಟ್ಟದಿಂದಿರುವ ಅತಿಯಾದ ಎತ್ತರದಿಂದ ಅನುಭವಕ್ಕೆ ಬರುವ ಶೀತ ಹವಾಮಾನ, ಇಳಿಜಾರು ಭೂಪ್ರಕೃತಿ ಮೊದಲಾದವು ಮಲೆನಾಡು ಪ್ರದೇಶದಲ್ಲಿ ಚಹಾ, ಏಲಕ್ಕಿ, ಕಾಫಿ, ಕರಿಮೆಣಸು ಮೊದಲಾದ ಬೆಳೆಗಳಿಗೆ ಅನುಕೂಲಕರ ವಾತಾವರಣವನ್ನು ಒದಗಿಸುತ್ತದೆ.

ಭೂಪ್ರಕೃತಿಯೂ ಮಣ್ಣಿನ ವೈಶಿಷ್ಟ್ಯತೆಗಳೂ ನಡುನಾಡಿನ ವೈವಿಧ್ಯ ಬೆಳೆಗಳಿಗೆ ಕಾರಣವಾಗುತ್ತದೆ. ಮರಗೆಣಸು, ಕೆಸುವಿನ ಗೆಡ್ಡೆ, ಸುವರ್ಣ ಗೆಡ್ಡೆ ಮೊದಲಾದ ಗೆಡ್ಡೆ ವರ್ಗಗಳ ಜೊತೆ ನಡುನಾಡಿನಲ್ಲಿ ಬಾಳೆ ಕೃಷಿಯೂ ರಬ್ಬರ್ ಕೃಷಿಯೂ ವ್ಯಾಪಕವಾಗಿದೆ. ಭಾರತದಲ್ಲಿ ಅತಿ ಹೆಚ್ಚು ರಬ್ಬರ್ ಕೃಷಿ ಮಾಡುವುದು ಕೇರಳದಲ್ಲಾಗಿದೆ.

ಕರಾವಳಿ ಪ್ರದೇಶಗಳಲ್ಲಿ ಮೆಕ್ಕಲು ಮಣ್ಣಿನ ಲಭ್ಯತೆಯು ಭತ್ತ ಕೃಷಿಗೆ ಯೋಗ್ಯವಾಗಿದೆ. ಇಲ್ಲಿ ತೆಂಗು ಸಮೃದ್ಧವಾಗಿ ಬೆಳೆಯಲು ಇಲ್ಲಿನ ಉಪ್ಪಿನಾಂಶವಿರುವ ಮಣ್ಣು ಸಹಾಯಕವಾಗಿದೆ. ಹಿನ್ನೀರುಗಳು ಮತ್ಸ್ಯ ಕೃಷಿಗೆ ಬಳಕೆಯಾಗುತ್ತದೆ.



ಮಲೆನಾಡು, ನಡುನಾಡು, ಕರಾವಳಿ ಪ್ರದೇಶಗಳ ಪ್ರಧಾನ ಕೃಷಿ ಬೆಳೆಗಳನ್ನು ಪಟ್ಟಿ ಮಾಡಿರಿ.

ಒಂದು ಪ್ರದೇಶದ ಕೃಷಿ ಸಮೃದ್ಧವಾಗಬೇಕಾದರೆ ಯಾವೆಲ್ಲಾ ಘಟಕಗಳು ಹೊಂದಾಣಿಕೆ ಆಗಬೇಕು. ಪಟ್ಟಿ ಪೂರ್ತಿಮಾಡಿರಿ.

- ಅನುಕೂಲಕರ ಭೂಪ್ರಕೃತಿ
- ಫಲವತ್ತಾದ ಮಣ್ಣು
- 
- 
- 
- 

ಪ್ರತಿಯೊಂದು ಭೂಪ್ರಕೃತಿ ವಿಭಾಗಗಳಲ್ಲಿರುವ ಮಣ್ಣು, ಅಸ್ತಿತ್ವದಲ್ಲಿರುವ ಹವಾಗುಣ, ಲಭಿಸುವ ಮಳೆ ಎಂಬಿವುಗಳಿಗೆ ಅನುಗುಣವಾಗಿ ಅಲ್ಲಿನ ಕೃಷಿ ರೂಪಗೊಂಡಿರುವುದು. ಕೇರಳದ ಹಲವು ಹಬ್ಬಗಳೂ, ಹವಾಗುಣವೂ ಭೂ ಪ್ರಕೃತಿಯೊಂದಿಗೆ ನಿಕಟ ಸಂಬಂಧವಿರುವವುಗಳಾಗಿವೆ. ಓಣಂ ಒಂದು ಸುಗ್ಗಿ (ಬೆಳೆಕೊಯ್ಲು)ಯ ಹಬ್ಬ ಎಂದು ತಿಳಿದಿದೆಯೇ? ಅದೇ ರೀತಿ ವಿಷುವಿಗೂ ಕೂಡ ಬೆಳೆಕೊಯ್ಲುವಿನೊಂದಿಗೆ ಸಂಬಂಧವಿದೆ. ಮಳೆಗಾಲದ ನಂತರ ಕೇರಳದ ಜಲಮೂಲಗಳಲ್ಲಿ ನಡೆಯುವ ದೋಣಿ ಸ್ಪರ್ಧೆಗಳು, ಬಯಲುಗಳಲ್ಲಿ ನಡೆಯುವ ಗೂಳಿ ಕಾಳಗ ಮೊದಲಾದವುಗಳು ಹವಾಗುಣ ಮತ್ತು ಭೂ ಪ್ರಕೃತಿಯೊಂದಿಗೆ ಸಂಬಂಧವಿರುವ ಆಚರಣೆಗಳಿಗೆ ಉದಾಹರಣೆಗಳಾಗಿವೆ. ಹೆಚ್ಚಿನ ಉದಾಹರಣೆಗಳನ್ನು ಕಂಡುಹಿಡಿಯಿರಿ.

## ಕೇರಳದ ವೃತ್ತಿ ವೈವಿಧ್ಯಗಳು

ಪ್ರತಿಯೊಂದು ಭೂಪ್ರಕೃತಿ ವಿಭಾಗಗಳಲ್ಲಿ ವೈವಿಧ್ಯಮಯವಾದ ಕೃಷಿ ಚಟುವಟಿಕೆಗಳು ನಡೆಯುತ್ತದೆ ಎಂದು ನಾವು ಚರ್ಚಿಸಿದೆವಲ್ಲವೇ? ಕೇರಳದ ಜನರು ತೊಡಗಿಕೊಂಡಿರುವ ಉದ್ಯೋಗ ಕೃಷಿ ಕ್ಷೇತ್ರ ಮಾತ್ರ ಆಗಿದೆಯೇ? ಯಾವೆಲ್ಲಾ ಉದ್ಯೋಗಗಳು ನಿಮ್ಮ ಪ್ರದೇಶಗಳಲ್ಲಿದೆ?

- 
- 
- 

ಜನಜೀವನ ಸುಧಾರಿಸಲು ಕೃಷಿ ಕ್ಷೇತ್ರದ ಅಭಿವೃದ್ಧಿಯೊಂದಿಗೆ ಇತರ ಉದ್ಯೋಗ ಕ್ಷೇತ್ರಗಳ ಅಭಿವೃದ್ಧಿಯಾಗಬೇಕಿದೆಯೇ? ನೈಸರ್ಗಿಕ ಸಂಪನ್ಮೂಲ ಹಾಗೂ ಮಾನವ ಸಂಪನ್ಮೂಲಗಳು ಒಂದು ಪ್ರದೇಶದ ಜನರ ಪ್ರಗತಿಯನ್ನು ನಿರ್ಣಯಿಸುವುದು. ಪ್ರತಿಯೊಂದು ಪ್ರದೇಶದ ಭೂಪ್ರಕೃತಿಗೂ ಹವಾಗುಣಕ್ಕೂ ಅನುಗುಣವಾಗಿ ಅಲ್ಲಿನ ಉದ್ಯೋಗ ವ್ಯವಸ್ಥೆ ರೂಪುಗೊಂಡಿದೆ. ಹಿನ್ನೀರುಗಳಲ್ಲಿ ತೆಂಗಿನ ಸಿಪ್ಪೆ ಹದಗೊಳಿಸುವುದು, ಹುರಿಹಗ್ಗ ತಯಾರಿ, ಕುಟ್ಟನಾಡಿನಲ್ಲಿ ಭತ್ತಕೃಷಿ ಮತ್ತು ಬಾತುಕೋಳಿ ಸಾಕಾಣೆಯೂ ಇದಕ್ಕೆ ಉದಾಹರಣೆಗಳಾಗಿವೆ.

ಕೆಳಗೆ ಕೊಟ್ಟಿರುವ ಚಿತ್ರಗಳನ್ನು ನಿರೀಕ್ಷಿಸಿರಿ.




ಚಿತ್ರಗಳಲ್ಲಿ ಸೂಚಿಸಿರುವ ಪ್ರತಿಯೊಂದು ವೃತ್ತಿಗಳು ಕೇರಳದ ಯಾವೆಲ್ಲಾ ಭೂ ಪ್ರಕೃತಿ ವಿಭಾಗಗಳಲ್ಲಿ ಮುಖ್ಯವಾಗಿ ಕಾಣಸಿಗುವುದು ಎಂದು ಪಟ್ಟಿ ಮಾಡಿರಿ.

| ಭೂ ಪ್ರಾಕೃತಿಕ ವಿಭಾಗಗಳು | ವೃತ್ತಿ |
|---|---|
| ಮಲೆನಾಡು | |
| ನಡುನಾಡು | |
| ಕರಾವಳಿ | |

ಕೇರಳದಲ್ಲಿ ಶಿಕ್ಷಣದಲ್ಲಿನ ಪ್ರಗತಿ, ಸುಧಾರಿತ ಸಾಮಾಜಿಕ-ಭೌತಿಕ ಪರಿಸ್ಥಿತಿಗಳು ಮತ್ತು ಆಧುನಿಕ ತಂತ್ರಜ್ಞಾನವು ಜನರು ತೊಡಗಿಸಿಕೊಳ್ಳುವ ಉದ್ಯೋಗಗಳಲ್ಲಿ ಬದಲಾವಣೆಯನ್ನು ಉಂಟುಮಾಡಿತು.

**ಆಧುನಿಕ ತಂತ್ರಜ್ಞಾನವು ಕೃಷಿ ಮತ್ತು ಸಾಂಪ್ರದಾಯಿಕ ಉದ್ಯೋಗಗಳಲ್ಲಿ ತಂದಿರುವ ಬದಲಾವಣೆಗಳ ಕುರಿತು ಅನ್ವೇಷಣೆ ಮಾಡಿ ಟಿಪ್ಪಣಿ ತಯಾರಿಸಿರಿ.**

## ಕೇರಳವೂ ನೈಸರ್ಗಿಕ ವಿಕೋಪಗಳೂ

ಕೇರಳದ ನೈಸರ್ಗಿಕ ಸೌಂದರ್ಯವೂ ಅನುಕೂಲಕರ ಹವಾಗುಣವೂ ಜನಜೀವನವನ್ನು ಸುಖಕರವಾಗಿಸುತ್ತದೆ ಎಂದು ನಾವು ಕಂಡೆವಲ್ಲವೇ. ಆದರೆ ಕೆಲವು ಸಂದರ್ಭಗಳಲ್ಲಿ ನೈಸರ್ಗಿಕ ವಿಕೋಪಗಳೂ ಪ್ರಾಕೃತಿಕ ದುರಂತಗಳು ನಡೆಯುವುದಿದೆ. ಕೇರಳವು ದುರ್ಬಲ ಪರಿಸರಗಳಿರುವ ಪ್ರದೇಶಗಳನ್ನು ಧಾರಾಳವಾಗಿ ಹೊಂದಿರುವ ಭೂಪ್ರಕೃತಿಯಾಗಿದೆ.ಮಾನವನ ಹಸ್ತಕ್ಷೇಪದಿಂದ ಉಂಟಾಗುವ ಬಿಕ್ಕಟ್ಟುಗಳ ಹೊರತಾಗಿ, ಕೆಲವು ನೈಸರ್ಗಿಕ ವಿಕೋಪಗಳು ಜೀವಲೋಕದ ಮೇಲೆ ಹಾನಿಕಾರಕ ಪರಿಣಾಮವನ್ನು ಬೀರುತ್ತವೆ.
ಚಿತ್ರಗಳನ್ನು ಗಮನಿಸಿರಿ.




ಇಲ್ಲಿ ನೀಡಿರುವುದು ನೈಸರ್ಗಿಕ ವಿಕೋಪಕ್ಕೆ ಸಂಬಂಧಿಸಿದ ಚಿತ್ರಗಳಾಗಿವೆ. ಯಾವ ನೈಸರ್ಗಿಕ ವಿಕೋಪಗಳು ಜೀವ, ಆಸ್ತಿ ಮತ್ತು ಪರಿಸರಕ್ಕೆ ಅಪಾಯಕಾರಿಯಾಗಿದೆ? ಪಟ್ಟಿಯನ್ನು ಪೂರ್ಣಗೊಳಿಸಿರಿ.

- ಚಂಡಮಾರುತ
- 
- 
- ಕಾಡ್ಗಿಚ್ಚು
- 
- 

ನೈಸರ್ಗಿಕ ವಿಕೋಪಗಳು ಯಾವುವು?

ನೈಸರ್ಗಿಕ ವಿಕೋಪಗಳು ಜೀವ, ಆಸ್ತಿ ಮತ್ತು ಪರಿಸರಕ್ಕೆ ಅಪಾಯವನ್ನುಂಟುಮಾಡುವ ನೈಸರ್ಗಿಕ ವಿದ್ಯಮಾನಗಳಾಗಿವೆ. ಇಂತಹ ನೈಸರ್ಗಿಕ ವಿಕೋಪಗಳು ಮಾನವ ಮತ್ತು ಇತರ ಜೀವಿಗಳ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತವೆ. 2004 ರಲ್ಲಿ ಕೇರಳದಲ್ಲಿ ಸುನಾಮಿ ಭಾರಿ ಹಾನಿಯನ್ನುಂಟು ಮಾಡಿತು. ಅದರ ಕುರಿತು ನಿಮ್ಮ ಹಿರಿಯರಲ್ಲಿ ಕೇಳಿ ತಿಳಿಯಿರಿ.



ಕವಳಪ್ಪಾರ ಭೂ ಕುಸಿತ (2019)



ಪೆಟ್ಟಿಮುಡಿ ಭೂಕುಸಿತ (2020)

2018 ರಲ್ಲಿ ಕೇರಳದಲ್ಲಿ ಸಂಭವಿಸಿದ ದೊಡ್ಡ ಪ್ರವಾಹ, 2019 ರಲ್ಲಿ ಕವಳಪ್ಪಾರ ಮತ್ತು 2020 ರಲ್ಲಿ ಪೆಟ್ಟಿಮುಡಿಯಲ್ಲಿ ಸಂಭವಿಸಿದ ಭೂಕುಸಿತಗಳು ಆಯಾ ಪ್ರದೇಶಗಳಲ್ಲಿನ ಜನರ ಜೀವನವನ್ನು ಕಷ್ಟಕರವಾಗಿಸಿದೆ.

## ವಿಪತ್ತು ತಡೆಗಟ್ಟುವಿಕೆ ಮತ್ತು ಲಘೂಕರಣ

ವಾರ್ತೆಯ ಮುಖ್ಯಾಂಶಗಳ ಕೊಲಾಶನ್ನು ನಿರೀಕ್ಷಿಸಿರಿ.

ದೇಶದಾದ್ಯಂತ ಪರಿಹಾರ ಸಂಪನ್ಮೂಲಗಳ ಸಂಗ್ರಹ

ಸ್ವಚ್ಛತಾ ಚಟುವಟಿಕೆಗಳಲ್ಲಿ ಯುವಕರ ಮುಂದಾಳತ್ವ. ಪ್ರವಾಹ ಸಂತ್ರಸ್ತರು ತಮ್ಮ ಮನೆಗಳಿಗೆ

ಆಪತ್ಕಾಲದಲ್ಲಿ ಸಹಾಯ ಹಸ್ತ ಚಾಚಿದ ಸ್ವಯಂಸೇವಕರು

ಕಡಲಿನ ಮಕ್ಕಳು ತಮ್ಮ ದೋಣಿಗಳೊಂದಿಗೆ ಅಪಾಯದಲ್ಲಿದ್ದಾರೆ

ಸರ್ಕಾರದ ವಿವಿಧ ಇಲಾಖೆಗಳ ಸಂಘಟಿತ ಚಟುವಟಿಕೆಗಳು

2018 ರ ಪ್ರವಾಹವನ್ನು ಕೇರಳ ಹೇಗೆ ಎದುರಿಸಿತು ಎಂಬುದನ್ನು ತೋರಿಸುವ ವಾರ್ತಾ ಕೊಲಾಷ್‌ನ್ನು ನೀಡಲಾಗಿದೆ.

ಪರಿಹಾರ ಮತ್ತು ರಕ್ಷಣಾ ಕಾರ್ಯಾಚರಣೆಗೆ ಕೇರಳ ಒಟ್ಟಾಗಿದೆ. ಸರ್ಕಾರದ ವಿವಿಧ ಇಲಾಖೆಗಳು, ಸ್ವಯಂಸೇವಾ ಸಂಸ್ಥೆಗಳು, ಯುವಕರು, ವ್ಯಾಪಾರಿಗಳು ಮತ್ತು ಮೀನುಗಾರರು ಮೊದಲಾದವರು ಒಗ್ಗಟ್ಟಾಗಿ ಕಾರ್ಯ ನಿರ್ವಹಿಸಿದರ ಫಲವಾಗಿ ಈ ದೊಡ್ಡ ವಿಕೋಪದ ತೀವ್ರತೆಯನ್ನು ಕಡಿಮೆ ಮಾಡಲು ಸಾಧ್ಯವಾಯಿತು.

ನಿಮ್ಮ ಪ್ರದೇಶದಲ್ಲಿ ಪರಿಹಾರ ಕಾರ್ಯಗಳಲ್ಲಿ ತೊಡಗಿರುವವರು ಇದ್ದಾರೆಯೇ? ಅವರ ಅನುಭವಗಳನ್ನು ತಿಳಿದುಕೊಳ್ಳಿರಿ.

ವಿಪತ್ತು ತಡೆಗಟ್ಟುವಿಕೆ ಮತ್ತು ಲಘೂಕರಣಕ್ಕಾಗಿ ಯಾವೆಲ್ಲಾ ಸಿದ್ಧತೆಗಳನ್ನು ಮಾಡಬಹುದು?

| ಸಿದ್ಧತೆಗಳು | | |
|---|---|---|
| **ವಿಪತ್ತು ನಿವಾರಣಾ ಪೂರ್ವ ಸಿದ್ಧತೆ** | **ವಿಪತ್ತು ಸಮಯದ ರಕ್ಷಣಾ ಕಾರ್ಯಾಚರಣೆಗಳು** | **ವಿಪತ್ತಿನ ನಂತರದ ಕಾರ್ಯಾಚರಣೆಗಳು** |
| ಆಧುನಿಕ ತಂತ್ರಜ್ಞಾನದ ಸಹಾಯದಿಂದ ಕೆಲವು ಅನಾಹುತಗಳನ್ನು ಮೊದಲೇ ತಿಳಿದುಕೊಳ್ಳುವುದು | ರಕ್ಷಣಾ ಕಾರ್ಯಾಚರಣೆಗೆ ಅಗತ್ಯ ವ್ಯವಸ್ಥೆ ಸಿದ್ಧಪಡಿಸುವುದು | ದುರಂತ ಸಂತ್ರಸ್ತರಿಗೆ ಪುನರ್ವಸತಿ ಕಲ್ಪಿಸುವುದು |
| ವಿಪತ್ತು ಸಾಧ್ಯತೆ ಇರುವ ಪ್ರದೇಶಗಳಲ್ಲಿ ಎಚ್ಚರಿಕೆಗಳನ್ನು ನೀಡಿ, ಜಾಗೃತಿ ಮೂಡಿಸಲು ಮತ್ತು ಜನರನ್ನು ಸ್ಥಳಾಂತರಿಸಲು ಕ್ರಮಗಳನ್ನು ಕೈಗೊಳ್ಳುವುದು. | ಪರಿಹಾರ ಶಿಬಿರಗಳನ್ನು ಸ್ಥಾಪಿಸುವುದು. ಆಹಾರ, ಬಟ್ಟೆ, ವಸತಿ ಮತ್ತು ವೈದ್ಯಕೀಯ ಆರೈಕೆಯನ್ನು ಒದಗಿಸುವ ಯೋಜನೆ ನಡೆಸುವುದು . | ಭವಿಷ್ಯದ ವಿಪತ್ತು ಸಂದರ್ಭಗಳನ್ನು ತಡೆಗಟ್ಟಲು ಕ್ರಮಗಳನ್ನು ತೆಗೆದುಕೊಳ್ಳುವುದು. |

**ನೈಸರ್ಗಿಕ ವಿಪತ್ತುಗಳ ತಡೆಗಟ್ಟುವಿಕೆ ಮತ್ತು ಲಘೂಕರಣಕ್ಕಾಗಿ ಕೆಲಸ ಮಾಡುವ ಸರ್ಕಾರಿ ಇಲಾಖೆಗಳು ಮತ್ತು ವ್ಯವಸ್ಥೆಗಳು**

- ಕೇರಳ ಕಂದಾಯ ವಿಪತ್ತು ನಿರ್ವಹಣಾ ಇಲಾಖೆ
- ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ
- ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ
- ವಿಪತ್ತು ಅಪಾಯದ ವಿಶ್ಲೇಷಣಾ ಸೆಲ್
- ಇನ್ಸ್ಟಿಟ್ಯೂಟ್ ಆಫ್ ಲ್ಯಾಂಡ್ & ಡಿಸಾಸ್ಟರ್ ಮ್ಯಾನೇಜ್ಮೆಂಟ್

**ವಿಪತ್ತು ನಿರ್ವಹಣೆ ಮತ್ತು ಪರಿಹಾರ ಕಾರ್ಯಾಚರಣೆಗಳಿಗೆ ಸಂಬಂಧಿಸಿದ ಚಿತ್ರಗಳನ್ನು ಸಂಗ್ರಹಿಸಿ ಟೀಚರ ಸಹಾಯದಿಂದ ಡಿಜಿಟಲ್ ಆಲ್ಬಮ್ ತಯಾರಿಸಿರಿ.**

ನಾವು ವಾಸಿಸುವ ಭೂಮಿಯ ವೈವಿಧ್ಯ, ಮಣ್ಣು, ನೀರು, ಹವಾಗುಣ ಮತ್ತು ಬೆಳೆಗಳು ನಮ್ಮ ಜೀವನದ ಮೇಲೆ ಹೇಗೆ ಪ್ರಭಾವ ಬೀರುತ್ತವೆ ಎಂಬುದನ್ನು ತಿಳಿದುಕೊಂಡಿರಲ್ಲವೇ? ಈ ನೆಲ ಮತ್ತು ಜಲ ಸಮೃದ್ಧಿಯನ್ನು ಮುಂದಿನ ಪೀಳಿಗೆಗೆ ಉಳಿಸುವ ಜವಾಬ್ದಾರಿ ನಮ್ಮ ಮೇಲಿದೆ. ಆದ್ದರಿಂದ ನಾವು ಪ್ರಕೃತಿಯ ಸಮತೋಲನಕ್ಕೆ ಧಕ್ಕೆಯಾಗದ ರೀತಿಯ ಜೀವನಶೈಲಿ ಮತ್ತು ಅಭಿವೃದ್ಧಿಗೆ ಆದ್ಯತೆ ನೀಡಬೇಕು.

## ಮುಂದುವರಿದ ಚಟುವಟಿಕೆಗಳು

1. ಕೇರಳದ ಮೂರು ಭೌಗೋಳಿಕವಿಭಾಗಗಳ ಕೃಷಿ ಬೆಳೆಗಳು, ಮಣ್ಣಿನ ವಿಧಗಳು, ಉದ್ಯೋಗಗಳು ಇತ್ಯಾದಿಗಳ ಕುರಿತು ಮಾಹಿತಿಯನ್ನು ಒಳಗೊಂಡಂತೆ ಭಿತ್ತಿಪತ್ರಿಕೆಯನ್ನು (Wallpaper) ತಯಾರಿಸಿರಿ.
2. ನಿಮ್ಮ ಶಾಲೆಯ ಪ್ರದೇಶದ ಮಣ್ಣಿನ ಗುಣಲಕ್ಷಣಗಳು 'ಮಣ್ಣು ಆ್ಯಪ್' (Mannu App) ಮೂಲಕ ಕಂಡುಹಿಡಿಯಿರಿ. ಶಾಲೆಯಲ್ಲಿ ಬೆಳೆಯಬಹುದಾದ ಬೆಳೆಗಳನ್ನು 'ಆ್ಯಪ್'ನಿಂದ ಆಯ್ಕೆ ಮಾಡಿ, ಕೃಷಿ ಕ್ಲಬ್‌ನ ಆಶ್ರಯದಲ್ಲಿ 'ಮಣ್ಣು ಆ್ಯಪ್'ನ ಸಲಹೆಗಳ ಸಹಾಯದಿಂದಮಣ್ಣಿನ ಫಲವತ್ತತೆಯನ್ನು ಹೆಚ್ಚಿಸಿ, ನಿಮ್ಮ ಮಧ್ಯಾಹ್ನದ ಊಟಕ್ಕೆ ಅವಶ್ಯಕವಾದ ತರಕಾರಿಗಳನ್ನು ಬೆಳೆಯಿರಿ.
3. 'ಕೇರಳದ ಭೂಪ್ರಕೃತಿ ಮತ್ತು ಜನಜೀವನ' ಎಂಬ ವಿಷಯದ ಆಧಾರದಲ್ಲಿ ಸೆಮಿನಾರನ್ನು ಆಯೋಜಿಸಿರಿ.
   - ಪ್ರತಿಯೊಂದು ಭೂಪ್ರಕೃತಿ ವಿಭಾಗಗಳ ಮಣ್ಣು, ಜಲ, ಬೆಳೆ, ಉದ್ಯೋಗ ಮೊದಲಾದವುಗಳನ್ನು ಒಳಗೊಂಡ ಮಾಹಿತಿಗಳನ್ನು ಸಂಗ್ರಹಿಸಿರಿ.
4. ನಿಮ್ಮ ಪ್ರದೇಶದಲ್ಲಿ ಕೃಷಿ ಕ್ಷೇತ್ರ ಎದುರಿಸುತ್ತಿರುವ ಸಮಸ್ಯೆಗಳೇನು? ಅದಕ್ಕಿರುವ ಪರಿಹಾರಗಳ ಕುರಿತು ಸ್ಥಳೀಯ ರೈತರೊಂದಿಗೆ ಚರ್ಚಿಸಿ ವರದಿಯನ್ನು ತಯಾರಿಸಿರಿ.
5. ಕೇರಳ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧಿಕೃತ ಸೈಟ್‌ಗೆ ಭೇಟಿ ನೀಡಿ, ಅದರ ಚಟುವಟಿಕೆಗಳನ್ನು ತಿಳಿದುಕೊಳ್ಳಿರಿ.

# 9

# ಸಮಾನತೆಯೆಡೆಗೆ




ಕುಟುಂಬಗಳ ಮಧ್ಯೆ ಆದಾಯದಲ್ಲಿ ವ್ಯತ್ಯಾಸವಿರಲು ಕಾರಣಗಳೇನಾಗಿರಬಹುದು?

ಪೀಲಿಯ ಗ್ರಾಮದಿಂದ ಹಿಂತಿರುಗಿದ ನೀನಾ ಮತ್ತು ವಿಕ್ಕಿಯ ಆಲೋಚನೆಗಳನ್ನು ಗಮನಿಸಿರಿ.



'ಎಲ್ಲಾ ಕಡೆ ಹೋಗಲು ಸಾಧ್ಯವೇ' ಎಂಬ ಆತಂಕದೊಂದಿಗೆ ನಾನು ಗೆಳೆಯರೊಂದಿಗೆ ಪೀಲಿಯ ಗ್ರಾಮಕ್ಕೆ ಹೋದೆ. ಪೀಲಿ, ಅವಳ ಅಮ್ಮ, ಅಪ್ಪ, ಅವರ ಗ್ರಾಮದವರು ಎಲ್ಲರೂ ನಮ್ಮನ್ನು ತುಂಬಾ ಸಂತೋಷದಿಂದ ಸ್ವಾಗತಿಸಿದರು. ಗ್ರಾಮದ ದೃಶ್ಯಗಳೆಲ್ಲ ಎಷ್ಟು ರಸವತ್ತಾಗಿತ್ತು! ಪೀಲಿಯ ಅಪ್ಪ ಕೃಷಿ ಮಾಡಿ ಉತ್ಪಾದಿಸುವ ವಸ್ತುಗಳನ್ನು ಅವರು ಆಹಾರಕ್ಕಾಗಿ ಉಪಯೋಗಿಸುವರು. ಅದಕ್ಕೆ ಗ್ರಾಮೀಣ ಆಹಾರದ ರುಚಿಯಿತ್ತು. ಗೇಣಿಗೆ ನೀಡಿದ ನಮ್ಮ ಕೃಷಿಭೂಮಿಯಲ್ಲಿ ಇನ್ನು ಮುಂದೆ ಸ್ವಂತವಾಗಿ ಕೃಷಿ ಮಾಡಬೇಕೆಂದು ಮನೆಯಲ್ಲಿ ಹೇಳಬೇಕು. ಈ ಸರಕಾರಿ ಕ್ವಾರ್ಟರ್ಸ್ ನಿಂದ ನಮ್ಮ ಊರಿಗೆ ವಾಸವನ್ನು ಬದಲಾಯಿಸಿದರೆ ಗ್ರಾಮದ ಸಂತೋಷ ನನಗೆ ಆಸ್ವಾದಿಸಬಹುದಿತ್ತು. ಅಪ್ಪ ಮತ್ತು ಅಮ್ಮ ಅಲ್ಲಿಂದ ಆಫೀಸ್ ಗೆ ಹೋಗಬಹುದಲ್ಲವೇ.



'ನಗರದಲ್ಲಿರುವ ಸೌಕರ್ಯಗಳು ಇಲ್ಲದೆ ಹೇಗೆ ಒಂದು ದಿನವನ್ನು ಕಳೆಯುವುದು ಎಂಬ ಚಿಂತೆಯೊಂದಿಗೆ ನಾನು ಪೀಲಿಯ ಗ್ರಾಮಕ್ಕೆ ಹೋದೆ. ರೇಂಜ್, ವೈಫೈ ಯಾವುದೂ ಇಲ್ಲದೆ ಪೀಲಿಯ ಗ್ರಾಮದ ಸಂತೋಷಗಳನ್ನು ನಾನೂ ಆಸ್ವಾದಿಸಿದೆನು. ಅಲ್ಲಿಂದ ಮರಳುವಾಗ ನಗರ ಜೀವನ ಮಾತ್ರ ರಸವತ್ತಾಗಿ ಇರುವುದು ಎಂಬ ಭಾವನೆ ಪೂರ್ಣವಾಗಿ ಬದಲಾಯಿತು. ಅಲ್ಲಿನ ಆಹಾರದ ರುಚಿ ಮತ್ತು ಇಲ್ಲಿನ ಪ್ಯಾಕೆಟ್ ಆಹಾರದ ರುಚಿ ಭಿನ್ನವಾಗಿದೆ. ನಮ್ಮದು ನಗರದ ಅಪಾರ್ಟ್‌ಮೆಂಟ್ ನಲ್ಲಿ ವ್ಯಾಪಾರಿಗಳಾದ ಅಪ್ಪ ಅಮ್ಮರೊಂದಿಗಿನ ಬಿಡುವಿಲ್ಲದ ಜೀವನವಾಗಿದೆ. ಸರಕಾರಿ ಉದ್ಯೋಗದಿಂದ ನಿವೃತ್ತಿ ಹೊಂದಿದ ಬಳಿಕ ಅಜ್ಜನೂ ಇಲ್ಲಿಗೆ ಬಂದಾಗ ನನಗೆ ಸಮಾಧಾನವಾಯಿತು.'

ಇಬ್ಬರು ಗೆಳೆಯರ ಆಲೋಚನೆಯ ವಿವರಣೆಗಳನ್ನು ಓದಿದಿರಲ್ಲವೇ?
ಇವರು ತಮ್ಮ ಕುಟುಂಬದ ಆದಾಯದ ಮೂಲಗಳ ಬಗ್ಗೆ ಹೇಳುತ್ತಾರಲ್ಲವೇ?
ಎರಡು ಕುಟುಂಬದ ಆದಾಯ ಮೂಲಗಳನ್ನು ಪಟ್ಟಿ ಮಾಡಿರಿ.

| ನೀನಾಳ ಕುಟುಂಬದ ಆದಾಯ ಮೂಲಗಳು | ವಿಕ್ಕಿಯ ಕುಟುಂಬದ ಆದಾಯ ಮೂಲಗಳು |
|---|---|
| • ಗೇಣಿ | • ವ್ಯಾಪಾರ |
| • | • |

ಎರಡೂ ಕುಟುಂಬಗಳ ತಿಂಗಳ ಆದಾಯದ ಅಂದಾಜು ಲೆಕ್ಕವನ್ನು ಕೆಳಗಿನ ಪಟ್ಟಿಯಲ್ಲಿ ಕೊಡಲಾಗಿದೆ.

| ಕುಟುಂಬ | ತಿಂಗಳ ಆದಾಯ (ಅಂದಾಜು) |
|---|---|
| ವಿಕ್ಕಿ | 3,00,000 - 5,00,000 (ಮೂರು ಲಕ್ಷ ಮತ್ತು ಐದು ಲಕ್ಷದ ಮಧ್ಯೆ) |
| ನೀನಾ | 1,00,000 - 3,00,000 (ಒಂದು ಲಕ್ಷ ಮತ್ತು ಮೂರು ಲಕ್ಷದ ಮಧ್ಯೆ) |

ಎರಡೂ ಕುಟುಂಬಗಳ ಆದಾಯ ಒಂದೇ ರೀತಿಯಾಗಿರುವುದೇ?



ಒಂದು ಪಂಚಾಯತಿನಲ್ಲಿರುವ ವಿವಿಧ ಕುಟುಂಬಗಳ ತಿಂಗಳ ಆದಾಯದ ಅಂದಾಜು ಲೆಕ್ಕವನ್ನು ಪಟ್ಟಿಯಲ್ಲಿ ಕೊಡಲಾಗಿದೆ. ಪಟ್ಟಿಯನ್ನು ನಿರೀಕ್ಷಿಸಿ ಅತಿ ಹೆಚ್ಚು ಆದಾಯ ಮತ್ತು ಅತಿ ಕಡಿಮೆ ಆದಾಯ ಹೊಂದಿರುವ ಕುಟುಂಬ ಯಾವುದೆಂದು ಕಂಡುಹಿಡಿದು ಬರೆಯಿರಿ.

- ಅತಿ ಹೆಚ್ಚು ಆದಾಯ ಹೊಂದಿರುವ ಕುಟುಂಬ ........................
- ಅತಿ ಕಡಿಮೆ ಆದಾಯ ಹೊಂದಿರುವ ಕುಟುಂಬ ........................

**ವಿವಿಧ ಕುಟುಂಬಗಳ ಆದಾಯ (ಅಂದಾಜು)**

| ಕುಟುಂಬ | ತಿಂಗಳ ಆದಾಯ (ಅಂದಾಜು) |
|---|---|
| A | 4,00,000 - 5,00,000 (ನಾಲ್ಕು ಲಕ್ಷ ಮತ್ತು ಐದು ಲಕ್ಷದ ಮಧ್ಯೆ) |
| B | 3,00,000-4,00,000 (ಮೂರು ಲಕ್ಷ ಮತ್ತು ನಾಲ್ಕು ಲಕ್ಷದ ಮಧ್ಯೆ) |
| C | 2,00,000-3,00,000 (ಎರಡು ಲಕ್ಷ ಮತ್ತು ಮೂರು ಲಕ್ಷದ ಮಧ್ಯೆ) |
| D | 1,00,000-2,00,000 (ಒಂದು ಲಕ್ಷ ಮತ್ತು ಎರಡು ಲಕ್ಷದ ಮಧ್ಯೆ) |
| E | 50,000-1,00,000 (ಐವತ್ತು ಸಾವಿರ ಮತ್ತು ಒಂದು ಲಕ್ಷದ ಮಧ್ಯೆ) |
| F | 25,000- 50,000 (ಇಪ್ಪತ್ತೈದು ಸಾವಿರ ಮತ್ತು ಐವತ್ತು ಸಾವಿರದ ಮಧ್ಯೆ) |
| G | 10,000-25,000 (ಹತ್ತು ಸಾವಿರ ಮತ್ತು ಇಪ್ಪತ್ತೈದು ಸಾವಿರದ ಮಧ್ಯೆ) |

## ಕುಟುಂಬ ಆದಾಯಗಳಲ್ಲಿ ವ್ಯತ್ಯಾಸವಿರಲು ಕಾರಣಗಳು

- ಉದ್ಯೋಗದಿಂದ ಲಭಿಸುವ ಆದಾಯದಲ್ಲಿನ ವ್ಯತ್ಯಾಸ
- ಆದಾಯದ ಮೂಲಗಳ ವ್ಯತ್ಯಾಸ

## ಉದ್ಯೋಗದಿಂದ ಲಭಿಸುವ ಆದಾಯದಲ್ಲಿನ ವ್ಯತ್ಯಾಸ



ಮೇಲೆ ನೀಡಿದ ಚಿತ್ರಗಳಲ್ಲಿ ಜನರು ಯಾವೆಲ್ಲ ಉದ್ಯೋಗಗಳಲ್ಲಿ ತೊಡಗಿಕೊಂಡಿದ್ದಾರೆ?

- 
- 
- 
- 

ವಿವಿಧ ಉದ್ಯೋಗಗಳಲ್ಲಿ ತೊಡಗಿಕೊಂಡಿರುವವರಿಗೆ ಒಂದೇ ಮೊತ್ತದ ಆದಾಯ ಲಭಿಸುವುದೇ?

ಉದ್ಯೋಗದ ಸ್ವಭಾವಕ್ಕನುಸರಿಸಿ ಅದರಿಂದ ಲಭಿಸುವ ಆದಾಯವೂ ವ್ಯತ್ಯಾಸವಾಗುವುದು.

## ಆದಾಯದ ಮೂಲಗಳ ವ್ಯತ್ಯಾಸ

ಆದಾಯ ಮೂಲಗಳಲ್ಲಿನ ವ್ಯತ್ಯಾಸವು ಕುಟುಂಬದ ಆದಾಯ ವ್ಯತ್ಯಾಸಕ್ಕೆ ಕಾರಣವಾಗುವುದು. ಬ್ಯಾಂಕ್ ಠೇವಣಿ, ಶೇರು ಮಾರುಕಟ್ಟೆಯಲ್ಲಿನ ಹೂಡಿಕೆ, ಆಸ್ತಿಗಳು ಮೊದಲಾದವು ವಿವಿಧ ಆದಾಯ ಮೂಲಗಳಾಗಿವೆ. ಆದಾಯ ಮೂಲಗಳಲ್ಲಿನ ವ್ಯತ್ಯಾಸಕ್ಕನುಸರಿಸಿ ಅದಾಯದಲ್ಲೂ ವ್ಯತ್ಯಾಸ ಉಂಟಾಗುತ್ತದೆ. ಹೆಚ್ಚಿನ ಆದಾಯ ಹೊಂದಿರುವವರಿಗೆ ಹೆಚ್ಚಿನ ಅಗತ್ಯಗಳನ್ನು ಪೂರೈಸಲು ಸಾಧ್ಯವಾಗುವುದು. ಆದರೆ, ಕಡಿಮೆ ಆದಾಯ ಹೊಂದಿರುವವರಿಗೆ ಅವರ ಪ್ರಾಥಮಿಕ ಅಗತ್ಯಗಳನ್ನು ಕೂಡಾ ಹಲವು ಸಂದರ್ಭಗಳಲ್ಲಿ ಪೂರೈಸಲು ಸಾಧ್ಯವಾಗುವುದಿಲ್ಲ.

ಅದಾಯದ ಲಭ್ಯತೆಯ ಆಧಾರದಲ್ಲಿ ಕುಟುಂಬಗಳನ್ನು ಮೂರು ವಿಧಗಳಲ್ಲಿ ವರ್ಗೀಕರಿಸಬಹುದು.

- ಹೆಚ್ಚು ಆದಾಯ ಹೊಂದಿರುವ ಕುಟುಂಬಗಳು
- ಮಧ್ಯಮ ಆದಾಯ ಹೊಂದಿರುವ ಕುಟುಂಬಗಳು
- ಕಡಿಮೆ ಆದಾಯ ಹೊಂದಿರುವ ಕುಟುಂಬಗಳು

**ನಿಮ್ಮ ಕುಟುಂಬದ ಅಗತ್ಯಗಳನ್ನು ಪೂರೈಸುವಲ್ಲಿ ಕುಟುಂಬದ ಆದಾಯ ಎಷ್ಟರ ಮಟ್ಟಿಗೆ ಪ್ರಭಾವ ಬೀರುವುದು ಎಂದು ಚರ್ಚಿಸಿರಿ.**

ಉದ್ಯೋಗದಿಂದ ಮತ್ತು ಇತರ ಮೂಲಗಳಿಂದ ಲಭಿಸುವ ಆದಾಯದಲ್ಲಿ ವ್ಯತ್ಯಾಸವಿದೆಯೆಂದು ಗಮನಿಸಿದಿರಲ್ಲವೇ. ಉದ್ಯೋಗ ಮತ್ತು ಅದಾಯದಲ್ಲಿರುವ ಅಸಮಾನತೆ ಸಮಾಜದಲ್ಲಿ ಆರ್ಥಿಕ ಅಸಮಾನತೆಗೆ ಕಾರಣವಾಗುವುದು. ಒಂದು ಸಮಾಜದಲ್ಲಿ ಸಂಪನ್ಮೂಲಗಳು ಸಮಾನವಲ್ಲದ ರೀತಿಯಲ್ಲಿ ಹಂಚಲ್ಪಡುವಾಗ ಅಸಮಾನತೆ ಉಂಟಾಗುತ್ತದೆ.

### ಆರ್ಥಿಕ ಅಸಮಾನತೆ

**ಆರ್ಥಿಕ ಅಸಮಾನತೆ ಎಂಬುದು ಒಂದು ಸಮಾಜದ ವ್ಯಕ್ತಿಗಳು ಅಥವಾ ಸಂಘಟನೆಯಲ್ಲಿ ಸಂಪತ್ತು, ಆದಾಯ ಅಥವಾ ಸಂಪನ್ಮೂಲಗಳು ಎಂಬಿವುಗಳ ಅಸಮಾನ ವಿತರಣೆಯನ್ನು ಸೂಚಿಸುತ್ತದೆ. ಇದು ಅವಕಾಶಗಳು, ಶಿಕ್ಷಣ, ಉದ್ಯೋಗ, ಆರೋಗ್ಯರಕ್ಷಣೆ, ರಾಜಕೀಯ ಅಧಿಕಾರ ಎಂಬಿವುಗಳು ಲಭಿಸುವಲ್ಲಿ ಅಸಮಾನತೆ ಉಂಟುಮಾಡುತ್ತದೆ. ಸಂಪನ್ಮೂಲ ಮತ್ತು ಅವಕಾಶಗಳ ಸಮಾನವಾದ ವಿತರಣೆಯ ಉದ್ದೇಶವನ್ನು ಇಟ್ಟುಕೊಂಡು ಸರಕಾರವು ರೂಪಿಸಿದ ನೀತಿಗಳು ಮತ್ತು ಸಂಸ್ಥೆಗಳ ಮೂಲಕ ಆರ್ಥಿಕ ಅಸಮಾನತೆಯನ್ನು ಪರಿಹರಿಸಲು ಪ್ರಯತ್ನಿಸಲಾಗುತ್ತದೆ.**

ಸಮಾಜದಲ್ಲಿ ಆರ್ಥಿಕ ಅಸಮಾನತೆ ಮಾತ್ರ ಕಂಡುಬರುವುದೇ?
ಟಿಪ್ಪಣಿಗಳನ್ನು ಓದಿರಿ.

### ಸಹ ಭೋಜನ

**ಹತ್ತೊಂಬತ್ತನೆಯ ಶತಮಾನದ ಆರಂಭದಿಂದಲೂ ಜೀವಕ್ಕೆ ಅಗತ್ಯವಾದ ಆಹಾರ ಸೇವನೆಯ ವಿಷಯದಲ್ಲಿ ತೋರುವ ತಾರತಮ್ಯವನ್ನು ಕೊನೆಗೊಳಿಸುವ ಸಲುವಾಗಿ ಕೇರಳದಲ್ಲಿ ಅನೇಕ ಹೋರಾಟಗಳು ನಡೆಯುತ್ತಿದ್ದವು. ಅಯ್ಯಾ ವೈಕುಂಠ ಸ್ವಾಮಿಗಳು ಸ್ಥಾಪಿಸಿದ 'ಸಮತ್ವ ಸಮಾಜ' ಎಂಬ ಸಂಘಟನೆಯ ನೇತೃತ್ವದಲ್ಲಿ ನಡೆದ 'ಸಹ ಭೋಜನ' ದಿಂದ ಆರಂಭಗೊಂಡು ಅನೇಕ ಹೋರಾಟಗಳು ನಡೆದಿವೆ. ಇದರಲ್ಲಿ 1917 ರ ಮೇ 29 ರಂದು ಎರ್ನಾಕುಳಂ ಜಿಲ್ಲೆಯ ಚೆರಾಯಿಯಲ್ಲಿ 'ಸಹೋದರನ್' ಪತ್ರಿಕೆಯ ಸಂಪಾದಕರಾದ ಕೆ.ಅಯ್ಯಪ್ಪನ್ ಅವರು ಆಯೋಜಿಸಿದ ಸಹ ಭೋಜನ ಗಮನಾರ್ಹವಾಗಿದೆ. ಇದರಿಂದಾಗಿ ಅವರು ತೀವ್ರ ಹಲ್ಲೆ ಮತ್ತು ಬೆದರಿಕೆಗಳನ್ನು ಎದುರಿಸಬೇಕಾಗಿ ಬಂದಿತು. ಇದು ತಾರತಮ್ಯಗಳಿಗೆದುರಾಗಿ ನಡೆದ ಒಂದು ನಿರ್ಣಾಯಕ ಘಟನೆಯಾಗಿತ್ತು.**


ಅಯ್ಯಾ ವೈಕುಂಠಸ್ವಾಮಿಗಳು


ಸಹೋದರನ್ ಅಯ್ಯಪ್ಪನ್

### ಮೇಲುಡುಪು ಹೋರಾಟ

ಹತ್ತೊಂಬತ್ತನೇ ಶತಮಾನದ ಆರಂಭದಲ್ಲಿ ದಕ್ಷಿಣ ತಿರುವಿದಾಂಕೂರಿನಲ್ಲಿ ಮಹಿಳೆಯರು ಮೇಲುಡುಪು ಧರಿಸುವುದಕ್ಕಾಗಿ ನಡೆಸಿದ ಹೋರಾಟವಾಗಿತ್ತು. ಸುದೀರ್ಘ ಹೋರಾಟದ ನಂತರ ಜಾತಿ - ಮತ ವ್ಯತ್ಯಾಸವಿಲ್ಲದೆ ಎಲ್ಲರೂ ತಮಗಿಷ್ಟವಾದ ಉಡುಪನ್ನು ಧರಿಸುವ ಹಕ್ಕು ನೀಡುವ ಘೋಷಣೆಯನ್ನು ತಿರುವಿದಾಂಕೂರು ಸರಕಾರ ಹೊರಡಿಸಿತು. ಆದರೂ, ನಂತರದ ಕಾಲದಲ್ಲಿ ಜಾತಿಪದ್ಧತಿಯ ಹೆಸರಲ್ಲಿ ಅನೇಕರಿಗೆ ತಮಗಿಷ್ಟವಾದ ಉಡುಪನ್ನು ಧರಿಸಲು ಹಲವರಿಗೆ ಸಾಧ್ಯವಾಗಲಿಲ್ಲ.

### ಅಯ್ಯಂಗಾಳಿ - ಪಂಚಮಿ ಸ್ಮಾರಕ ವಿದ್ಯಾಲಯ



ತಿರುವಿದಾಂಕೂರು ಸರಕಾರವು ಜಾತಿ - ಮತ ವ್ಯತ್ಯಾಸವಿಲ್ಲದೆ ಎಲ್ಲಾ ವಿಭಾಗದ ವಿದ್ಯಾರ್ಥಿಗಳಿಗೆ ನಾಲ್ಕನೇ ತರಗತಿವರೆಗಿನ ಶಿಕ್ಷಣವನ್ನು ಉಚಿತವಾಗಿ ನೀಡಿತ್ತು.ಆದರೂ, ಮೇಲ್ವರ್ಗದವರು ಎಂದು ಹೇಳಲಾದ ವಿಭಾಗದ ಶಾಲಾ ಅಧಿಕಾರಿಗಳು ಕೆಳಜಾತಿ ಎಂದು ಹೇಳಲಾದ ವಿಭಾಗದ ವಿದ್ಯಾರ್ಥಿಗಳಿಗೆ ಪ್ರವೇಶಾತಿಯನ್ನು ನೀಡಲಿಲ್ಲ. ಇದನ್ನು ವಿರೋಧಿಸಿ ಸರಕಾರಿ ಆದೇಶವನ್ನು ಪಾಲಿಸಬೇಕು ಎಂದು ಆಗ್ರಹಿಸಿ ಪಂಚಮಿ ಎಂಬ ಹೆಸರಿನ ದಲಿತ ಬಾಲಕಿಯ ಕೈಹಿಡಿದು ಊರುಟ್ಟಂಬಲಂ ಶಾಲೆಗೆ ತೆರಳಿ ಪ್ರವೇಶಾತಿ ನೀಡುವಂತೆ ಅಯ್ಯಂಗಾಳಿಯವರು ಆಗ್ರಹಿಸಿದ್ದರು. ಪಂಚಮಿಗೆ ಶಾಲೆಗೆ ಪ್ರವೇಶ ನೀಡಲು ಅಧಿಕಾರಿಗಳು ನಿರ್ಬಂಧಿತರಾದರೂ ಅಂದು ರಾತ್ರಿ ಮೇಲ್ಜಾತಿಯವರು ಎಂದು ಹೇಳಲಾದ ಜನರು ಶಾಲೆಗೆ ಬೆಂಕಿ ಹಚ್ಚಿದರು. ಸುಟ್ಟ ಬೆಂಚುಗಳು ಮತ್ತು ಇತರ ಉಪಕರಣಗಳನ್ನು ಶಾಲಾ ವಸ್ತುಸಂಗ್ರಹಾಲಯದಲ್ಲಿ ಸಂರಕ್ಷಿಸಿ ಇರಿಸಲಾಗಿದೆ. ಆ ಶಾಲೆಗೆ ಅಯ್ಯಂಗಾಳಿ - ಪಂಚಮಿ ಸ್ಮಾರಕ ಶಾಲೆ ಎಂದು ಹೆಸರಿಡಲಾಗಿದೆ.

ಇಲ್ಲಿ ಯಾವ ಯಾವ ರೀತಿಯ ಅಸಮಾನತೆಗಳನ್ನು ಹೇಳಲಾಗಿದೆ?

- 
- 
- 

ಸಾಮಾಜಿಕ ಅಸಮಾನತೆ ಎಂಬುದು ಸಮಾಜದ ಎಲ್ಲಾ ವಿಭಾಗದ ಜನರು ಸಮಾನವಾಗಿರದ ಸ್ಥಿತಿಯಾಗಿದೆ. ಸ್ಥಾನಮಾನಗಳು, ಹಕ್ಕುಗಳು, ಅವಕಾಶಗಳು ಎಂಬಿವುಗಳಲ್ಲಿ ಸಮಾನವಲ್ಲದ ಸ್ಥಿತಿ ಸಾಮಾಜಿಕ ಅಸಮಾನತೆಯನ್ನು ಉಂಟುಮಾಡುತ್ತದೆ.

### ಸಾಮಾಜಿಕ ಅಸಮಾನತೆ

ಸಾಮಾಜಿಕ ಅಸಮಾನತೆಯು ಒಂದು ಸಮಾಜದಲ್ಲಿರುವ ಸಂಪನ್ಮೂಲಗಳು, ಅವಕಾಶಗಳು, ಸ್ಥಾನಮಾನ ಎಂಬಿವುಗಳ ಅಸಮಾನವಾದ ವಿತರಣೆಯನ್ನು ಸೂಚಿಸುತ್ತದೆ. ಆದಾಯದ ಅಸಮಾನತೆ, ಸಂಪತ್ತಿನ ಅಸಮಾನತೆ, ಶಿಕ್ಷಣದಲ್ಲಿ, ಆರೋಗ್ಯ ಪರಿಪಾಲನೆಯಲ್ಲಿ ಅವಕಾಶಗಳಿಲ್ಲದಿರುವುದು, ಜನಾಂಗ, ಜಾತಿ, ಲಿಂಗದ ಆಧಾರದಲ್ಲಿನ ತಾರತಮ್ಯ, ರಾಜಕೀಯ - ಸಾಮಾಜಿಕ ಸಂಸ್ಥೆಗಳಲ್ಲಿ ಸಮಾನತೆ ಇಲ್ಲದ ಪ್ರಾತಿನಿಧ್ಯ ಎಂಬಿತ್ಯಾದಿ ವಿವಿಧ ರೂಪಗಳಲ್ಲಿ ಸಾಮಾಜಿಕ ಅಸಮಾನತೆ ಪ್ರಕಟವಾಗುತ್ತದೆ. ಸಾಮಾಜಿಕ ಅಸಮಾನತೆಯನ್ನು ಹೋಗಲಾಡಿಸುವುದಕ್ಕಾಗಿ ಸಮಾಜದ ಎಲ್ಲಾ ಸದಸ್ಯರಿಗೂ ಸಮಾನತೆ, ನ್ಯಾಯ, ಸಮಾನ ಅವಕಾಶವನ್ನು ಒದಗಿಸುವುದಕ್ಕಾಗಿ ಸರಕಾರ ನೀತಿಗಳನ್ನು ರೂಪಿಸುತ್ತದೆ.

ಕೆಲವು ಸಾಮಾಜಿಕ ವಿಭಾಗದಲ್ಲಿ ಒಳಗೊಂಡವರು ತಾರತಮ್ಯವನ್ನು ಎದುರಿಸಬೇಕಾಗಿ ಬರುವುದು ಯಾಕೆ? ಸಮಾಜದಲ್ಲಿ ಇಂತಹ ಸನ್ನಿವೇಶಗಳು ಇವೆಯೇ? ಚರ್ಚಿಸಿರಿ.

ಸಾಮಾಜಿಕ ಅಸಮಾನತೆಗೆ ಇರುವ ಕಾರಣಗಳು ಮತ್ತು ಅವುಗಳ ಮೇಲೆ ಪ್ರಭಾವ ಬೀರುವ ಘಟಕಗಳು ಯಾವುವೆಂದು ಪರಿಶೀಲಿಸೋಣ.

| ಸಾಮಾಜಿಕ ಅಸಮಾನತೆಗಿರುವ ಕಾರಣಗಳು | ಪ್ರಭಾವ ಬೀರುವ ಘಟಕಗಳು |
|---|---|
| **ಆರ್ಥಿಕ ಅಸಮಾನತೆ** | • ಆದಾಯದ ವ್ಯತ್ಯಾಸ<br>• ನಿರುದ್ಯೋಗ<br>• ಸಂಪನ್ಮೂಲಗಳ ಕೊರತೆ<br>• ಕೂಲಿ / ಸಂಬಳದಲ್ಲಿನ ವ್ಯತ್ಯಾಸ |
| **ಶೈಕ್ಷಣಿಕ ಅಸಮಾನತೆ** | • ಗುಣಮಟ್ಟದ ಶಿಕ್ಷಣದ ಕೊರತೆ<br>• ಪರಿಮಿತವಾದ ಶೈಕ್ಷಣಿಕ ಅವಕಾಶಗಳು |
| **ಸಾಮಾಜಿಕ ಘಟಕಗಳ ಒಳಗಿನ ಅಸಮಾನತೆ** | • ಜಾತಿ, ಮತ, ಜನಾಂಗ, ಲಿಂಗ, ವಿಶೇಷ ಚೇತನರು ಎಂಬಿವುಗಳ ಆಧಾರದಲ್ಲಿನ ತಾರತಮ್ಯ<br>• ಸಾಮಾಜಿಕ ರೂಢಿಗಳು ಉಂಟುಮಾಡುವ ಅಸಮಾನತೆ. |
| **ಭೌಗೋಳಿಕ ಅಸಮಾನತೆಗಳು** | • ಗ್ರಾಮ - ನಗರ ವ್ಯತ್ಯಾಸ<br>• ಸಂಪನ್ಮೂಲಗಳ ಕೊರತೆ |
| **ಐತಿಹಾಸಿಕ ಘಟಕಗಳು** | • ವಸಾಹತುಶಾಹಿ<br>• ಗುಲಾಮಗಿರಿ<br>• ದಮನಿಸುವಿಕೆ |

ಸಾಮಾಜಿಕ ಅಸಮಾನತೆಗಿರುವ ಕಾರಣಗಳು ಮತ್ತು ಅದರ ಮೇಲೆ ಪ್ರಭಾವ ಬೀರುವ ಘಟಕಗಳನ್ನು ತರಗತಿಯಲ್ಲಿ ಚರ್ಚಿಸಿ ಟಿಪ್ಪಣಿ ತಯಾರಿಸಿರಿ.

**ಶಾಂತಿ ಐದನೇ ತರಗತಿಯಲ್ಲಿ ಕಲಿಯುತ್ತಿರುವಳು. ಅವಳಿಗೆ ಅಪ್ಪ, ಅಮ್ಮ, ಅಕ್ಕ, ತಮ್ಮ ಇದ್ದಾರೆ. ಕಡಲ ತೀರದಲ್ಲಿ ವಾಸಿಸುವ ಇವರು ಕಡಲ್ಕೊರೆತ ತೀವ್ರವಾದಾಗ ಭಯದಲ್ಲಿ ಬದುಕುತ್ತಾರೆ. ಗಟ್ಟಿಯಾದ ಮನೆ ಇಲ್ಲದಿರುವುದು ಅವರು ಎದುರಿಸುತ್ತಿರುವ ಅತಿ ದೊಡ್ಡ ಸಮಸ್ಯೆ.**

**ಆಕಾಶ್ ಮತ್ತು ಅವನ ಕುಟುಂಬ ಮಲೆನಾಡು ಪ್ರದೇಶದಲ್ಲಿ ವಾಸಿಸುತ್ತಿದ್ದಾರೆ. ವಾಹನ ಸೌಕರ್ಯವಿಲ್ಲದಿರುವುದರಿಂದ ಆಕಾಶ್‌ಗೆ ಮತ್ತು ಅವನ ಸಹೋದರಿಯರಿಗೆ ಶಾಲೆಗೆ ಹೋಗುವುದು ಕಷ್ಟವಾಗಿದೆ.**

ಮೇಲೆ ನೀಡಿರುವ ಎರಡು ಸಂದರ್ಭಗಳನ್ನು ಗಮನಿಸಿರಿ.ಅವರು ಎದುರಿಸುವ ಸಮಸ್ಯೆಗಳೇನೆಲ್ಲಾ?

- 
- 

ಇವುಗಳನ್ನೆಲ್ಲ ಪರಿಹರಿಸಬೇಡವೇ? ಶಾಂತಿ ಮತ್ತು ಆಕಾಶ್ ನ ಸಮಸ್ಯೆಗಳನ್ನು ಪರಿಹರಿಸುವುದರೊಂದಿಗೆ ಸಾಮಾಜಿಕ ಅಸಮಾನತೆ ಎದುರಿಸುವ ಎಲ್ಲಾ ಜನ ವಿಭಾಗಗಳ ಸಮಸ್ಯೆಗಳನ್ನು ಪರಿಹರಿಸಬೇಕಾಗಿದೆ.

ಎಲ್ಲಾ ಜನವಿಭಾಗಗಳ ಮೂಲಭೂತ ಅಗತ್ಯಗಳನ್ನು ನೆರವೇರಿಸುವಾಗ ಸಾಮಾಜಿಕ ಪ್ರಗತಿ ಸಾಧ್ಯವಾಗುವುದು. ಅದಕ್ಕಿರುವ ಸೌಲಭ್ಯಗಳನ್ನು ಮತ್ತು ಸನ್ನಿವೇಶಗಳನ್ನು ಸೃಷ್ಟಿಸಬೇಕಾಗಿದೆ. ಸಾಮಾಜಿಕ ಅಸಮಾನತೆಯನ್ನು ನಿವಾರಿಸಲು ಸಮಗ್ರ ನೀತಿ, ಸುಧಾರಣೆಗಳು ಅಗತ್ಯವಿದೆ. ಇದಕ್ಕಾಗಿ ಸರಕಾರ ಶೈಕ್ಷಣಿಕ ಸಂಸ್ಥೆಗಳು, ಸಾಮಾಜಿಕ ನೀತಿಗೆ ಮತ್ತು ಸಮಾನತೆಗೆ ಅಗತ್ಯವಾದ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸುತ್ತಿವೆ.

## ಸಾಮಾಜಿಕ - ಆರ್ಥಿಕ ಅಸಮಾನತೆಯನ್ನು ನಿವಾರಿಸಲು ಇರುವ ಸರಕಾರದ ಕಾರ್ಯಕ್ರಮಗಳು

ಅಸಮಾನತೆಯನ್ನು ಎದುರಿಸುವ ಜನ ವಿಭಾಗಗಳ ಅಭ್ಯುದಯಕ್ಕಾಗಿ ಸರಕಾರ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ. ಆಹಾರ, ವಸತಿ, ಶಿಕ್ಷಣ, ಆರೋಗ್ಯ ಸಂರಕ್ಷಣೆ, ಇತರ ಮೂಲಭೂತ ಸೌಕರ್ಯಗಳು ಎಂಬಿವುಗಳು ಎಲ್ಲಾ ವಿಭಾಗದ ಜನರಿಗೆ ಲಭಿಸುವುದಕ್ಕಾಗಿ ಕೇಂದ್ರ - ರಾಜ್ಯ ಸರಕಾರಗಳು ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ. ಅವುಗಳನ್ನು ನಾವು ತಿಳಿದುಕೊಳ್ಳೋಣ.

### ಕ್ಷೇಮ ಪೆನ್ಶನ್ (ಕಲ್ಯಾಣ ಪಿಂಚಣಿ)

ಕ್ಷೇಮ ಪೆನ್ಶನ್ (ಕಲ್ಯಾಣ ಪಿಂಚಣಿ) ಎಂಬುದು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ಜನವಿಭಾಗಗಳಿಗೆ ಮತ್ತು ದುರ್ಬಲ ವಿಭಾಗದ ಜನರಿಗೆ ಹಣಕಾಸು ಸಹಾಯ ನೀಡುವ ಉದ್ದೇಶ ಹೊಂದಿರುವ ಸಾಮಾಜಿಕ ಭದ್ರತಾ ಯೋಜನೆಗಳಾಗಿವೆ. ಹಿರಿಯ ನಾಗರಿಕರು, ವಿಶೇಷಚೇತನರು, ವಿಧವೆಯರು, 50ವರ್ಷಕ್ಕಿಂತ ಹೆಚ್ಚಿನ ಪ್ರಾಯದ ಅವಿವಾಹಿತ ಮಹಿಳೆಯರು, ಕೃಷಿ ಕಾರ್ಮಿಕರು ಮೊದಲಾದವರು ಕ್ಷೇಮ ಪೆನ್ಶನ್‌ನ ಪ್ರಮುಖ ಫಲಾನುಭವಿಗಳಾಗಿದ್ದಾರೆ.

ಸರಕಾರ ಜಾರಿಗೊಳಿಸಿದ ವಿವಿಧ ಕ್ಷೇಮ ಪೆನ್ಶನ್‌ಗಳು ಯಾವುವೆಲ್ಲಾ?

- ಕೃಷಿ ಕಾರ್ಮಿಕರ ಪಿಂಚಣಿ
- 
- ವೃದ್ಧಾಪ್ಯ ಪಿಂಚಣಿ
- 

## ವಿದ್ಯಾರ್ಥಿ ವೇತನಗಳು (ಸ್ಕಾಲರ್ ಶಿಪ್‌ಗಳು)

ವಿದ್ಯಾರ್ಥಿಗಳಿಗೆ ಅವರ ಶೈಕ್ಷಣಿಕ ಅಗತ್ಯಗಳಿಗಾಗಿ ಅನೇಕ ವಿದ್ಯಾರ್ಥಿ ವೇತನಗಳನ್ನು ನೀಡಲಾಗುತ್ತಿದೆ. ವಿದ್ಯಾರ್ಥಿಗಳಿಗೆ ನೀಡುವ ವಿದ್ಯಾರ್ಥಿ ವೇತನಗಳು ಯಾವುವೆಲ್ಲ ಎಂದು ಕಂಡುಹಿಡಿದು ಪಟ್ಟಿ ಮಾಡಿರಿ.

- ಪ್ರೀ ಮೆಟ್ರಿಕ್ ಸ್ಕಾಲರ್ ಶಿಪ್
- 
- 

**ವಿದ್ಯಾರ್ಥಿಗಳನ್ನು ಶೈಕ್ಷಣಿಕವಾಗಿ ಉನ್ನತಿಗೇರಿಸಲು, ಹಿಂದುಳಿದ ಸ್ಥಿತಿಯನ್ನು ನಿವಾರಿಸಲು, ಅಸಮಾನತೆಯನ್ನು ಕಡಿಮೆ ಮಾಡಲು ಸಹಾಯಕವಾದ ಹೊಸ ಅವಕಾಶಗಳನ್ನು ಮತ್ತು ಯೋಜನೆಗಳನ್ನು ಕಂಡುಹಿಡಿದು ತರಗತಿಯಲ್ಲಿ ಚರ್ಚಿಸಿರಿ.**

ಇವುಗಳನ್ನು ಹೊರತು ಪಡಿಸಿ ಸಾಮಾಜಿಕ - ಆರ್ಥಿಕ ಅಸಮಾನತೆಗಳನ್ನು ನಿವಾರಿಸಲು ಸರಕಾರ ಯಾವೆಲ್ಲಾ ಯೋಜನೆಗಳನ್ನು ರೂಪಿಸಿ ಜಾರಿಗೊಳಿಸುತ್ತಿದೆ?



ಸಾರ್ವಜನಿಕ ವಿತರಣಾ ಕೇಂದ್ರ



ಮಾವೇಲಿ ಸ್ಟೋರ್



ನೀತಿ ಸ್ಟೋರ್

ಚಿತ್ರಗಳನ್ನು ಗಮನಿಸಿದಿರಲ್ಲವೇ. ಸಾರ್ವಜನಿಕ ವಿತರಣಾ ಕೇಂದ್ರ, ಮಾವೇಲಿ ಸ್ಟೋರ್, ನೀತಿ ಸ್ಟೋರ್ ಎಂಬಿವುಗಳು ಕಡಿಮೆ ಬೆಲೆಯಲ್ಲಿ ಅಗತ್ಯ ಸಾಮಗ್ರಿಗಳನ್ನು ಒದಗಿಸುವ ವ್ಯವಸ್ಥೆಗಳಾಗಿವೆ. ಸರಕಾರ ನೀಡುವ ಸಬ್ಸಿಡಿಯಿಂದಾಗಿ ಈ ಕೇಂದ್ರಗಳಲ್ಲಿ ಕಡಿಮೆ ಬೆಲೆಗೆ ಸಾಮಗ್ರಿಗಳು ಲಭಿಸುವುದು.

### ಸಬ್ಸಿಡಿ (ಸಹಾಯಧನ)

**ಸಬ್ಸಿಡಿ ಎಂಬುದು ವ್ಯಕ್ತಿಗಳಿಗೆ ಅಥವಾ ಸಂಸ್ಥೆಗಳಿಗೆ ಮಾನದಂಡಕ್ಕನುಸರಿಸಿ ಸರಕಾರ ನೀಡುವ ಹಣಕಾಸು ಸೌಲಭ್ಯವಾಗಿದೆ. ನೇರವಾಗಿಯೋ ಪರೋಕ್ಷವಾಗಿಯೋ ಸಬ್ಸಿಡಿ ನೀಡಬಹುದು. ನಗದು ರೂಪದಲ್ಲಿ ನೀಡುವ ಬೆಂಬಲವು ನೇರ ರೀತಿಯ ಸಬ್ಸಿಡಿಯಾಗಿದೆ. ತೆರಿಗೆ ದರಗಳನ್ನು ಕಡಿಮೆ ಮಾಡುವುದು, ಸಾಲಗಳಿಗೆ ಕಡಿಮೆ ಬಡ್ಡಿ, ಎಂಬಿವುಗಳು ಪರೋಕ್ಷ ಸಬ್ಸಿಡಿಯಾಗಿರುವುದು.**

ಕೇಂದ್ರ - ರಾಜ್ಯ ಸರಕಾರಗಳು, ಸ್ಥಳೀಯಾಡಳಿತ ಸಂಸ್ಥೆಗಳ ಬಡತನ ನಿರ್ಮೂಲನೆಗಾಗಿ ಮತ್ತು ಸಾಮಾಜಿಕ ಅಸಮಾನತೆಯನ್ನು ಕಡಿಮೆ ಮಾಡಲು ಹಲವಾರು ಯೋಜನೆಗಳು ಮತ್ತು ಕಾರ್ಯಕ್ರಮಗಳನ್ನು ನಡೆಸುತ್ತಿವೆ. ಅವುಗಳಲ್ಲಿ ಕೆಲವನ್ನು ತಿಳಿದುಕೊಳ್ಳೋಣ.

### ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ

ಈ ಯೋಜನೆಯ ಮೂಲಕ ಗ್ರಾಮೀಣ ಪ್ರದೇಶದಲ್ಲಿ ವಾಸಿಸುವ ಯಾವುದೇ ಕುಟುಂಬಕ್ಕೂ ಒಂದು ಆರ್ಥಿಕ ವರ್ಷದಲ್ಲಿ 100 ದಿನಗಳಿಗಿಂತ ಕಡಿಮೆಯಿಲ್ಲದೆ ಕೌಶಲ ರಹಿತವಾದ (Unskilled) ದೈಹಿಕ ಉದ್ಯೋಗವನ್ನು ಖಾತರಿಪಡಿಸಲಾಗುತ್ತದೆ. 18 ವರ್ಷಕ್ಕಿಂತ ಮೇಲ್ಪಟ್ಟ ವ್ಯಕ್ತಿಗಳು ಇದರ ಫಲಾನುಭವಿಗಳಾಗಿರುತ್ತಾರೆ. ಇದು ಕೇಂದ್ರ ಮತ್ತು ರಾಜ್ಯ ಸರಕಾರಗಳು ರೂಪಿಸಿ ಜಾರಿಗೊಳಿಸುವ ಬಡತನ ನಿರ್ಮೂಲನಾ ಯೋಜನೆಯಾಗಿದೆ.



### ಲೈಫ್ ಮಿಶನ್

ಕೇರಳದ ಎಲ್ಲಾ ಭೂರಹಿತರಿಗೂ , ಭೂರಹಿತ - ಮನೆರಹಿತರಿಗೂ, ಮನೆ ಪೂರ್ತಿಗೊಳಿಸದವರಿಗೂ, ಇರುವ ಮನೆ ವಾಸಯೋಗ್ಯವಲ್ಲದಿದ್ದವರಿಗೂ ಸುರಕ್ಷಿತವೂ ಯೋಗ್ಯವೂ ಆದ ಸಂಪೂರ್ಣ ವಸತಿ ವ್ಯವಸ್ಥೆ (ಲೈಫ್) ಯನ್ನು ಕಲ್ಪಿಸುವುದು ಇದರ ಉದ್ದೇಶವಾಗಿದೆ. ಇದು ಕೇಂದ್ರ- ರಾಜ್ಯ ಸರಕಾರಗಳು ರೂಪಿಸಿ ಜಾರಿಗೊಳಿಸುವ ಯೋಜನೆಯಾಗಿದೆ.




### ತೀರ ಮೈತ್ರಿ

ತೀರ ಮೈತ್ರಿಯು ಮೀನುಗಾರರ ಕುಟುಂಬದ ಮಹಿಳೆಯರನ್ನು ಉದ್ಯಮಿಗಳನ್ನಾಗಿ ಮಾಡಿ ಸಮಾಜದ ಮುಖ್ಯವಾಹಿನಿಗೆ ತರುವುದಕ್ಕಾಗಿ ಕೇರಳ ಸರಕಾರವು ಆರಂಭಿಸಿದ ಕಿರು ಉದ್ಯಮಗಳ ಅಭಿವೃದ್ಧಿ ಯೋಜನೆಯಾಗಿದೆ. ಕೇರಳಾದ್ಯಂತ ಜಾರಿಗೊಳಿಸಿದ ಈ ಯೋಜನೆಯ ಮೂಲಕ ಮಹಿಳಾ ಮೀನು ಕಾರ್ಮಿಕರ ಸಾಮಾಜಿಕ - ಆರ್ಥಿಕ ಸಬಲೀಕರಣ ಖಾತರಿಪಡಿಸಲು ಸಾಧ್ಯವಾಗುವುದು.




### ಕೈವಲ್ಯ

ಇದು ಕೇರಳ ಸರಕಾರವು ವಿಶೇಷಚೇತನ ಉದ್ಯೋಗಾಕಾಂಕ್ಷಿಗಳಿಗಾಗಿ ಆರಂಭಿಸಿದ ಯೋಜನೆಯಾಗಿದೆ. ಸಮಾನ ಅವಕಾಶ, ಸಮಾಜದಲ್ಲಿ ಎಲ್ಲರ ಜೊತೆ ಒಳಗೊಳ್ಳುವಂತೆ ಮಾಡುವುದು ಈ ಯೋಜನೆಯ ಉದ್ದೇಶವಾಗಿದೆ.

### ವಿದ್ಯಾವಾಹಿನಿ

ವಿದ್ಯಾವಾಹಿನಿಯು ಬುಡಕಟ್ಟು ಸಮುದಾಯಗಳ ವಿದ್ಯಾರ್ಥಿಗಳು ಶಾಲೆಗೆ ತೆರಳಲು ಮತ್ತು ಮರಳಲು ವಾಹನ ಸೌಕರ್ಯವನ್ನು ಒದಗಿಸುವ ಯೋಜನೆಯಾಗಿದೆ. ಈ ಯೋಜನೆಯನ್ನು ಬುಡಕಟ್ಟು ಸಮುದಾಯದ ಮಕ್ಕಳ ಸಂಚಾರ ಸೌಕರ್ಯವನ್ನು ಖಾತರಿಪಡಿಸಿ, ಶಾಲೆ ಬಿಡುವುದನ್ನು ತಡೆಯುವ ಉದ್ದೇಶದಿಂದ ಆರಂಭಿಸಲಾಗಿದೆ.



#### ಜನನಿ ಜನ್ಮರಕ್ಷ

**ಬುಡಕಟ್ಟು ಸಮುದಾಯಗಳ ಗರ್ಭಿಣಿಗಳು ಮತ್ತು ತಾಯಂದಿರಿಗೆ ಪೋಷಕಾಂಶಯುಕ್ತ ಆಹಾರ ಲಭಿಸಲು ಕೇರಳ ಸರಕಾರ ಜಾರಿಗೊಳಿಸಿದ ಯೋಜನೆಯಾಗಿದೆ.**

#### ಪ್ರತಿಭಾತೀರಂ

**ಇದು ಕರಾವಳಿ ಪ್ರದೇಶದ ಮಕ್ಕಳ ಶೈಕ್ಷಣಿಕ ಪ್ರಗತಿಗಾಗಿ ಕೇರಳ ಸರಕಾರ ಆರಂಭಿಸಿದ ಯೋಜನೆಯಾಗಿದೆ.**

#### ಗೋತ್ರಬಂಧು

**ಬುಡಕಟ್ಟು ಸಮುದಾಯಗಳ ಮಕ್ಕಳ ಭಾಷಾ ಸಮಸ್ಯೆಯನ್ನು ಪರಿಹರಿಸುವುದು, ಶಾಲೆ ಬಿಡುವುದನ್ನು ತಡೆಯುವುದು ಎಂಬೀ ಉದ್ದೇಶಗಳನ್ನು ಪೂರೈಸಲು ಬುಡಕಟ್ಟು ಸಮುದಾಯಗಳ ಭಾಷೆ ಮತ್ತು ಮಲಯಾಳ ಭಾಷೆಗಳಲ್ಲಿ ಜ್ಞಾನವಿರುವ ಅರ್ಹರನ್ನು ಬುಡಕಟ್ಟು ಸಮುದಾಯದ ಪ್ರಾಥಮಿಕ ಶಾಲೆಗಳಲ್ಲಿ ಅಧ್ಯಾಪಕರಾಗಿ ನೇಮಿಸುವ ಕೇರಳ ಸರಕಾರದ ಯೋಜನೆಯಾಗಿದೆ.**

**ಇಂತಹ ಯೋಜನೆಗಳ ಕುರಿತು ಹೆಚ್ಚಿನ ಮಾಹಿತಿ ಸಂಗ್ರಹಿಸುವುದಕ್ಕಾಗಿ ಸ್ಥಳೀಯಾಡಳಿತ ಸಂಸ್ಥೆಗಳ ಪ್ರತಿನಿಧಿಗಳೊಂದಿಗೆ ಸಂದರ್ಶನವನ್ನು ಆಯೋಜಿಸಿರಿ.**

**ಕೆಳಗೆ ನೀಡಿರುವ ಪಟ್ಟಿಯನ್ನು ಪೂರ್ತಿಗೊಳಿಸಿರಿ.**

| ಯೋಜನೆಗಳು | ಫಲಾನುಭವಿಗಳು | ವಿಶೇಷತೆಗಳು |
|---|---|---|
| ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ | ಗ್ರಾಮೀಣ ಪ್ರದೇಶದ 18 ವರ್ಷಕ್ಕಿಂತ ಮೇಲ್ಪಟ್ಟವರು | ______________________ |
| ಲೈಫ್ ಮಿಶನ್ | ______________________ | ಮನೆ ಲಭಿಸುವುದು |
| ವಿದ್ಯಾವಾಹಿನಿ | ______________________ | ______________________ |
| ತೀರ ಮೈತ್ರಿ | ಮಹಿಳಾ ಮೀನುಕಾರ್ಮಿಕರು | ______________________ |
| ಕೈವಲ್ಯ | ______________________ | ಸಮಾನ ಅವಕಾಶಗಳು |

**ಸಾಮಾಜಿಕ - ಆರ್ಥಿಕ ಅಸಮಾನತೆಗಳನ್ನು ನಿವಾರಿಸಲು ಸರಕಾರ ಜಾರಿಗೊಳಿಸುವ ವಿವಿಧ ಯೋಜನೆಗಳ ಕುರಿತು ಜಾಗೃತಿ ಮೂಡಿಸುವ ಪೋಸ್ಟರ್ ತಯಾರಿಸಿರಿ.**







ಭೌಗೋಳಿಕವಾದ, ಐತಿಹಾಸಿಕವಾದ, ಶೈಕ್ಷಣಿಕವಾದ ಮತ್ತು ಆರ್ಥಿಕವಾದ ಘಟಕಗಳು ಸಾಮಾಜಿಕ ಅಸಮಾನತೆಗೆ ಹೇಗೆ ಕಾರಣವಾಗುವುದು ಎಂದು ಚರ್ಚಿಸಿದಿರಲ್ಲವೇ. ಇಂತಹ ಅಸಮಾನತೆಗಳು ಸಾಮಾಜಿಕ ಪ್ರಗತಿಗೆ ತಡೆಯನ್ನು ಉಂಟುಮಾಡುತ್ತದೆ. ಸಂವಿಧಾನವು ಜನರಿಗೆ ಖಾತರಿಪಡಿಸುವ ಸಮಾನತೆಯೆಡೆಗೆ ಎಲ್ಲಾ ಜನರನ್ನು ತಲಪಿಸುವುದು ಮತ್ತು ಸಾಮಾಜಿಕ ಪ್ರಗತಿಯನ್ನು ಉಂಟುಮಾಡಲು ಕೇಂದ್ರ - ರಾಜ್ಯ ಸರಕಾರಗಳು ವಿವಿಧ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸುತ್ತಿದೆ. ಎಲ್ಲಾ ಜನರಿಗೆ ತಮ್ಮ ಪ್ರಾಥಮಿಕ ಅಗತ್ಯಗಳನ್ನು ಪೂರೈಸಲು ಮತ್ತು ಸ್ವತಂತ್ರರಾಗಿ ಜೀವಿಸಲಿರುವ ಅವಕಾಶ ಹೊಂದಿರಬೇಕು. ಎಲ್ಲಾ ಜನರು ಸಮಾನರೆಂಬ ಸತ್ಯವನ್ನು ತಿಳಿದು ಅಸಮಾನತೆಯನ್ನು ಎದುರಿಸುವ ಜನವಿಭಾಗಗಳನ್ನು ಒಟ್ಟು ಸೇರಿಸುವ ಅಗತ್ಯವನ್ನು ಮನಗಂಡು ನಾವು ಸಮಾಜದಲ್ಲಿ ಮಧ್ಯಪ್ರವೇಶಿಸಬೇಕಿದೆ.

## ಮುಂದುವರಿದ ಚಟುವಟಿಕೆಗಳು

1. ಸ್ವಾತಂತ್ರ್ಯಾನಂತರ ಭಾರತದಲ್ಲಿ ಸಾಮಾಜಿಕ - ಆರ್ಥಿಕ ಸಮಾನತೆ ಸಾಧಿಸಲು ಕೇಂದ್ರ- ರಾಜ್ಯ ಸರಕಾರಗಳು ಜಾರಿಗೊಳಿಸಿದ ವಿವಿಧ ಯೋಜನೆಗಳು ಮತ್ತು ಅವುಗಳ ಉದ್ದೇಶಗಳನ್ನು ಕಂಡುಕೊಂಡು ಚಾರ್ಟಿನಲ್ಲಿ ಬರೆದು ತರಗತಿಯಲ್ಲಿ ಪ್ರದರ್ಶಿಸಿರಿ.
2. 'ಸಾಮಾಜಿಕ - ಆರ್ಥಿಕ ಅಸಮಾನತೆಗಳು ಮತ್ತು ದೇಶದ ಪ್ರಗತಿ' ಎಂಬ ವಿಷಯದಲ್ಲಿ ಒಂದು ಸೆಮಿನಾರ್ ಅಯೋಜಿಸಿರಿ. ಸೆಮಿನಾರಿನಲ್ಲಿ ಸೇರಿಸಬೇಕಾದ ವಿಷಯಗಳು
   - ಸಾಮಾಜಿಕ ಅಸಮಾನತೆ
   - ಆರ್ಥಿಕ ಅಸಮಾನತೆ
   - ಅಸಮಾನತೆಗಿರುವ ಕಾರಣಗಳು
3. ಸಾಮಾಜಿಕ - ಆರ್ಥಿಕ ಅಸಮಾನತೆಗಳನ್ನು ನಿವಾರಿಸಲು ಸರಕಾರ ಜಾರಿಗೊಳಿಸುತ್ತಿರುವ ಯೋಜನೆಗಳ ಕುರಿತು ಪ್ಲಕಾರ್ಡ್‌ಗಳು, ಪೋಸ್ಟರುಗಳು ಮೊದಲಾದವುಗಳನ್ನು ತಯಾರಿಸಿ ಸಮಾಜ ವಿಜ್ಞಾನ ಕ್ಲಬ್ಬಿನ ನೇತೃತ್ವದಲ್ಲಿ ಸಾರ್ವಜನಿಕರನ್ನು ಜಾಗೃತಿಗೊಳಿಸುವ ಕಾರ್ಯಕ್ರಮಗಳನ್ನು ಆಯೋಜಿಸಿರಿ.

# 10 ಆಕಾಶ ವಿಸ್ಮಯ ಮತ್ತು ಮಣ್ಣಿನ ವಿಶೇಷತೆ



ನೀವು ಪೀಲಿಯ ಗ್ರಾಮಕ್ಕೆ ಪ್ರವಾಸ ಹೋಗುವಾಗ ರಾತ್ರಿಯ ಆಕಾಶ ವೀಕ್ಷಣೆಯನ್ನು ಆಸ್ವಾದಿಸಿದ್ದೀರಲ್ಲವೇ. ಪ್ರವಾಸದ ನಂತರ ಅಪ್ಪು ಬರೆದ ವಿವರಣೆಯನ್ನು ನೋಡಿರಿ.



ಎಲ್ಲರಿಗೂ ರಾತ್ರಿಕಾಲದ ಆಕಾಶ ವೀಕ್ಷಣೆ ಇಷ್ಟವಲ್ಲವೇ? ನಮಗೆ ರಾತ್ರಿಕಾಲದ ಸುಂದರವಾದ ಆಕಾಶ ನೋಟಗಳು ಹಗಲು ಹೊತ್ತಿನಲ್ಲಿ ಗೋಚರಿಸದಿರಲು ಕಾರಣವೇನು? ಕಾರಣವನ್ನು ಬರೆಯೋಣವೇ

- 
- 
- 

ಇದಕ್ಕೆ ಕಾರಣ ಸೂರ್ಯನ ಇರುವಿಕೆಯೆಂದು ತಿಳಿಯಿತಲ್ಲವೇ. ಸೂರ್ಯ ಒಂದು ನಕ್ಷತ್ರವಾಗಿದೆ. ಸೂರ್ಯನು ಭೂಮಿಗೆ ಅತ್ಯಂತ ಸಮೀಪವಿರುವ ನಕ್ಷತ್ರವಾಗಿದೆ. ಸೂರ್ಯನಿಗಿಂತಲೂ ದೊಡ್ಡದಾದ ಅನೇಕ ನಕ್ಷತ್ರಗಳಿವೆ.

ಭೂಮಿಯಿಂದ ನೋಡುವಾಗ ನಕ್ಷತ್ರಗಳು ಬಹಳ ಚಿಕ್ಕದಾಗಿ ಗೋಚರಿಸುತ್ತವೆಯಲ್ಲವೇ? ಯಾಕಾಗಿರಬಹುದು?

ಭೂಮಿಯಿಂದ ಬಹಳ ದೂರವಿರುವ ಕಾರಣ ನಕ್ಷತ್ರಗಳು ಚಿಕ್ಕದಾಗಿ ಗೋಚರಿಸುತ್ತವೆ. ನಕ್ಷತ್ರಗಳು ಸ್ವಯಂ ಉರಿಯುವ ದೈತ್ಯಾಕಾರದ ಆಕಾಶಕಾಯಗಳಾಗಿವೆ. ಇವು ಹೆಚ್ಚಿನ ಪ್ರಮಾಣದಲ್ಲಿ ಉಷ್ಣ ಮತ್ತು ಬೆಳಕನ್ನು ಹೊರಸೂಸುತ್ತವೆ. ಗ್ಯಾಲಕ್ಸಿಗಳು (Galaxies) ಕೋಟಿಗಟ್ಟಲೆ ನಕ್ಷತ್ರಗಳನ್ನು ಒಳಗೊಂಡ ನಕ್ಷತ್ರ ಸಮೂಹವಾಗಿವೆ.



ಗ್ಯಾಲಕ್ಸಿಗಳು



**ನಕ್ಷತ್ರಗಳು ಏಕೆ ಮಿನುಗುತ್ತವೆ?**

ನಕ್ಷತ್ರಗಳಿಂದ ಸರಳರೇಖೆಯಲ್ಲಿ ಬರುವ ಬೆಳಕು ವಾತಾವರಣದ ವಿವಿಧ ಪದರಗಳನ್ನು ದಾಟಿ ಬರುವಾಗ ನಿರಂತರವಾಗಿ ದಿಶೆ (ದಿಕ್ಕು) ಬದಲಾವಣೆಗೆ ಒಳಗಾಗುತ್ತದೆ. ಆ ಕಾರಣದಿಂದಾಗಿ ಭೂಮಿಯಿಂದ ನಕ್ಷತ್ರಗಳನ್ನು ನೋಡುವಾಗ ಮಿನುಗುವಂತೆ ಗೋಚರಿಸುತ್ತದೆ.

**ಸೂರ್ಯ ಉದಯಿಸುವ ಅಥವಾ ಸೂರ್ಯ ಅಸ್ತಮಿಸುವ ವೇಳೆಯ ಪ್ರಕೃತಿ ಸೌಂದರ್ಯವನ್ನು ಸೂಚಿಸುವ ಚಿತ್ರ ಬಿಡಿಸಿರಿ.**

ಸೂರ್ಯನನ್ನು ಕೇಂದ್ರವಾಗಿಸಿ ಕೆಲವು ಆಕಾಶಕಾಯಗಳು ಸುತ್ತು ಬರುತ್ತದೆ. ಸೂರ್ಯ ಮತ್ತು ಈ ಆಕಾಶಕಾಯಗಳನ್ನು ಒಳಗೊಂಡ ಚಿತ್ರವನ್ನು ಗಮನಿಸಿರಿ.




ಚಿತ್ರ -1

ಚಿತ್ರದಲ್ಲಿ ಸೂರ್ಯಮಾತ್ರವಲ್ಲದೆ ಯಾವೆಲ್ಲಾ ಆಕಾಶಕಾಯಗಳನ್ನು ಕಾಣಲು ಸಾಧ್ಯ?

ಇದರಲ್ಲಿ ನಾವು ಜೀವಿಸುವ ಆಕಾಶಕಾಯ ಯಾವುದು?

ಭೂಮಿ ಒಂದು ಗ್ರಹವಾಗಿದೆ. ಗ್ರಹಗಳು ಎಂದರೇನು?

ಗ್ರಹಗಳು ಸ್ವಯಂ ತಿರುಗುವುದರೊಂದಿಗೆ ಸೂರ್ಯನಿಗೆ ಸುತ್ತು ಬರುವ ಆಕಾಶಕಾಯಗಳಾಗಿವೆ. ಗ್ರಹಗಳಿಗೆ ಉಷ್ಣ ಮತ್ತು ಪ್ರಕಾಶವನ್ನು ಸ್ವತಃ ಉತ್ಪಾದಿಸಲು ಸಾಧ್ಯವಿಲ್ಲ. ಗ್ರಹಗಳಿಗೆ ಸೂರ್ಯನಿಂದ ಉಷ್ಣ ಮತ್ತು ಪ್ರಕಾಶ ಲಭಿಸುತ್ತದೆ. ಯಾವೆಲ್ಲಾ ಗ್ರಹಗಳು ಸೂರ್ಯನ ಸುತ್ತ ಸಂಚರಿಸುತ್ತವೆ ಮತ್ತು ಪ್ರತಿಯೊಂದು ಗ್ರಹಗಳ ವಿಶೇಷತೆಗಳನ್ನು ಪಟ್ಟಿ ನೋಡಿ ತಿಳಿಯಿರಿ.

| ಗ್ರಹಗಳು | ವಿಶೇಷತೆಗಳು | ಗ್ರಹಗಳು | ವಿಶೇಷತೆಗಳು |
|---|---|---|---|
|  ಬುಧ | ಸೂರ್ಯನ ಸಮೀಪವಿರುವ ಗ್ರಹ |  ಗುರು | ಅತಿದೊಡ್ಡ ಗ್ರಹ |
|  ಶುಕ್ರ | ಮುಂಜಾನೆ ನಕ್ಷತ್ರ, ಮುಸ್ಸಂಜೆ ನಕ್ಷತ್ರ ಎನ್ನುವ ಗ್ರಹ |  ಶನಿ | ಎರಡನೇಯ ಅತಿ ದೊಡ್ಡ ಗ್ರಹ |
|  ಭೂಮಿ | ಜೀವರಾಶಿಯುಳ್ಳ ಏಕೈಕ ಗ್ರಹ |  ಯುರೇನಸ್ | ಅತ್ಯಂತ ತಂಪಾಗಿರುವ ಗ್ರಹ |
|  ಮಂಗಳ | ಕೆಂಪು ಗ್ರಹ |  ನೆಪ್ಚ್ಯೂನ್ | ಸೂರ್ಯನಿಂದ ಅತಿ ದೂರವಿರುವ ಗ್ರಹ |

ಸೂರ್ಯ ಮತ್ತು ಅದನ್ನು ಸುತ್ತುವರಿಯುವ ಆಕಾಶಕಾಯಗಳ ಚಿತ್ರಗಳನ್ನು ಗಮನಿಸಿದಿರಲ್ಲವೇ?

ಗ್ರಹಗಳು ಮಾತ್ರ ಸೂರ್ಯನಿಗೆ ಸುತ್ತುಬರುವುದೇ? ಚಿತ್ರ 1ರಲ್ಲಿ (ಪುಟಸಂಖ್ಯೆ-163) ಗ್ರಹಗಳು ಮಾತ್ರವಲ್ಲದೇ ಕುಬ್ಜ ಗ್ರಹಗಳು ಮತ್ತು ಕ್ಷುದ್ರಗ್ರಹಗಳನ್ನು ಗಮನಿಸಲಿಲ್ಲವೇ.

ಸೂರ್ಯ,ಸೂರ್ಯನಿಗೆ ಸುತ್ತುಬರುವ ಎಂಟು ಗ್ರಹಗಳು, ಅವುಗಳ ಉಪಗ್ರಹಗಳು, ಕುಬ್ಜಗ್ರಹಗಳು, ಕ್ಷುದ್ರಗ್ರಹಗಳು, ಉಲ್ಕೆಗಳು, ಧೂಮಕೇತುಗಳು ಇತ್ಯಾದಿಗಳು ಸೇರಿಕೊಂಡಿರುವುದು ಸೌರವ್ಯೂಹವಾಗಿದೆ. ಸೂರ್ಯ ಸೌರವ್ಯೂಹದ ಕೇಂದ್ರವಾಗಿದೆ.

**ಸೂರ್ಯ ಸೌರವ್ಯೂಹದ ಕೇಂದ್ರ ಎಂದು ಇಡೀ ವಿಶ್ವಕ್ಕೆ ಸಾರಿದವನು ನಿಕೊಲಾಸ್ ಕೋಪರ್ನಿಕಸ್. ಇವನು ಪೋಲೆಂಡ್‌ನ ಖಗೋಳ ವಿಜ್ಞಾನಿಯಾಗಿದ್ದನು.**



ಕ್ಷೀರಪಥ (Milky Way) ಅಥವಾ ಆಕಾಶಗಂಗೆ ಸೌರವ್ಯೂಹವನ್ನು ಒಳಗೊಂಡಿರುವ ಗ್ಯಾಲಕ್ಸಿಯಾಗಿದೆ. ಇದರಲ್ಲಿ ಕೋಟಿಗಟ್ಟಲೆ ನಕ್ಷತ್ರಗಳಿವೆ. ಈ ರೀತಿಯ ಕೋಟಿಗಟ್ಟಲೆ ಗ್ಯಾಲಕ್ಸಿಗಳು ಸೇರಿಕೊಂಡಿರುವುದು ವಿಶ್ವ (Universe).



### ಧೂಮಕೇತು

**ಸೌರವ್ಯೂಹದಲ್ಲಿ ಅಪೂರ್ವವಾಗಿ ಪ್ರತ್ಯಕ್ಷಗೊಳ್ಳುವ ಅತಿಥಿಗಳೇ ಧೂಮಕೇತುಗಳು (Comets). ಕಲ್ಲು, ಧೂಳು, ಹಿಮ ಮುಂತಾದವುಗಳು ಸೇರಿ ಧೂಮಕೇತು ಉಂಟಾಗುತ್ತದೆ. ಸೂರ್ಯನಿಗೆ ಸಮೀಪ ಬಂದಾಗ ಇವುಗಳ ಬಾಲ ಸೂರ್ಯಪ್ರಕಾಶದಿಂದ ಹೊಳೆಯುತ್ತದೆ.**



### ಕ್ಷುದ್ರಗ್ರಹಗಳು

**ಕ್ಷುದ್ರಗ್ರಹಗಳು (Asteroid) ಗುರು ಮತ್ತು ಮಂಗಳ ಗ್ರಹಗಳ ಮಧ್ಯದಲ್ಲಿ ಕಂಡುಬರುವ ಚಿಕ್ಕ ಗ್ರಹಗಳ ಹಾಗಿರುವ ಶಿಲಾತುಣುಕುಗಳಾಗಿವೆ.**



### ಕುಬ್ಜಗ್ರಹಗಳು

**ಸೌರವ್ಯೂಹದಲ್ಲಿ ಸೂರ್ಯನ ಸುತ್ತ ಪರಿಕ್ರಮಣ ಮಾಡುವ ಆದರೆ ಗ್ರಹಗಳಿಂದ ಚಿಕ್ಕದಾಗಿರುವ, ಸ್ವಯಂ ಭ್ರಮಣ ಪಥವಿಲ್ಲದ ಮತ್ತು ಗೋಲಾಕೃತಿಯಲ್ಲಿರುವ ವಸ್ತುಗಳನ್ನು ಕುಬ್ಜಗ್ರಹ (Dwarf Planets) ಗಳೆನ್ನುವರು.**

### ಉಲ್ಕೆಗಳು



ಕ್ಷುದ್ರಗ್ರಹಗಳಿಂದ ಮತ್ತು ಇತರ ಕಡೆಗಳಿಂದ ಭೂಮಿಯ ವಾತಾವರಣಕ್ಕೆ ಅತಿ ವೇಗವಾಗಿ ಪ್ರವೇಶಿಸುವ ಶಿಲಾತುಣುಕುಗಳನ್ನು ಉಲ್ಕೆಗಳು (meteors) ಎನ್ನುವರು. ರಾತ್ರಿ ಹೊತ್ತಿನಲ್ಲಿ ವೇಗವಾಗಿ ಸಂಚರಿಸಿ ಉರಿಯುವ ವಸ್ತುಗಳಂತೆ ಆಕಾಶದಲ್ಲಿ ಗೋಚರಿಸುತ್ತವೆ. ಇವು ಕೆಲವೇ ಕ್ಷಣಗಳಲ್ಲಿ ಉರಿದು ಬೂದಿಯಾಗುತ್ತವೆ. ಇವುಗಳನ್ನು ಉಲ್ಕಾಪಾತ ಎಂದು ಕರೆಯುತ್ತಾರೆ.

ಗ್ರಹಗಳ ಸುತ್ತ ನಿಶ್ಚಿತ ಸಂಚಾರ ಪಥದಲ್ಲಿ ಸುತ್ತುವರಿಯುವ ಆಕಾಶಕಾಯಗಳನ್ನು ಉಪಗ್ರಹಗಳು (Satellites) ಎನ್ನುವರು. ಚಂದ್ರ ಭೂಮಿಯ ಏಕೈಕ ಉಪಗ್ರಹವಾಗಿದೆ.




### ನಕ್ಷತ್ರ ಮಾಸ

ಚಂದ್ರನು ಭೂಮಿಗೆ ಒಂದು ಸುತ್ತು ಹಾಕಲು ಸಾಮಾನ್ಯವಾಗಿ 27.3 ದಿವಸಗಳು ಬೇಕು. ಇದು ಒಂದು ನಕ್ಷತ್ರ ಮಾಸ (Sidereal month) ವಾಗಿದೆ.



ಸೌರವ್ಯೂಹದ ಚಿತ್ರದಲ್ಲಿ ಗ್ರಹಗಳ ಸಂಚಾರಪಥ (ಕಕ್ಷೆ)ವನ್ನು ಗಮನಿಸಿರಿ. ಸೂರ್ಯನ ಸುತ್ತಲೂ ಸಂಚರಿಸುವ ಆಕಾಶಕಾಯಗಳ ಚಲನೆಯ ದಾರಿಯನ್ನು ಭ್ರಮಣಪಥ (orbit) ಎನ್ನುತ್ತಾರೆ. ದೀರ್ಘ ವೃತ್ತಾಕೃತಿಯ ಭ್ರಮಣ ಪಥದಲ್ಲಿ ಗ್ರಹಗಳು ಸೂರ್ಯನನ್ನು ಸುತ್ತುತ್ತವೆ. ಗ್ರಹಗಳು ಮತ್ತು ಸೂರ್ಯನ ನಡುವೆಯುಳ್ಳ ಗುರುತ್ವಾಕರ್ಷಣ ಬಲವು ಗ್ರಹಗಳು ಅದರ ನಿಶ್ಚಿತ ಭ್ರಮಣಪಥದಲ್ಲಿ ಸಂಚರಿಸಲು ಸಹಾಯಕವಾಗುತ್ತದೆ. ಗ್ರಹಗಳು ಸೂರ್ಯನಿಗೆ ಸುತ್ತು ಬರುವುದರೊಂದಿಗೆ ಅದರ ಕಾಲ್ಪನಿಕ ಅಕ್ಷದಲ್ಲಿ ಸ್ವಯಂ ತಿರುಗುತ್ತವೆ.

ಗೆಳೆಯರೊಂದಿಗೆ ಸೌರವ್ಯೂಹದ ರೋಲ್ ಪ್ಲೇ ನಡೆಸಿರಿ. ಪ್ರತಿ ಗ್ರಹ ಮತ್ತು ಅದರ ವಿಶೇಷತೆಗಳನ್ನು ಸ್ವತಃ ತಿಳಿದುಕೊಳ್ಳಲು ಮರೆಯದಿರಿ.

## ನಮ್ಮ ಭೂಮಿ

ಬಾಹ್ಯಾಕಾಶ ಸಂಚಾರಿಯಾದ ಸುನೀತ ವಿಲಿಯಮ್ಸ್‌ರವರ ಭೂಮಿಯ ಕುರಿತಾದ ಹೇಳಿಕೆಯನ್ನು ಓದಿರಿ.

**"ಭೂಮಿ ತುಂಬಾ ಸುಂದರವಾಗಿಯೂ ವಿಸ್ಮಯಕಾರಿಯಾಗಿಯೂ ಕಂಡುಬಂತು. ನಮಗೆ ಬಾಹ್ಯಾಕಾಶ ನಿಲಯದ ಕಿಟಕಿಯ ಮೂಲಕ ಗಂಟೆಗಟ್ಟಲೆ ಕಾಲ ಅದನ್ನು ನೋಡಲು ಸಾಧ್ಯವಾಯಿತು. ನಮಗೆ ಭೂಮಿಯ ಗೋಲಾಕೃತಿಯನ್ನು ಸ್ಪಷ್ಟವಾಗಿ ನೋಡಲು ಸಾಧ್ಯವಾಯಿತು."**


ಸುನೀತ ವಿಲಿಯಮ್ಸ್

**ಬಾಹ್ಯಾಕಾಶ**

**ಭೂಮಿಯ ವಾತಾವರಣದ (ಜ್ಯೋತಿರ್ಗೋಳದ) ಹೊರಗಿರುವ ವಿಶಾಲವಾದ ಶೂನ್ಯ ಪ್ರದೇಶವನ್ನು ಬಾಹ್ಯಾಕಾಶ ಎನ್ನುವರು. ಬೇರೆ ಬೇರೆ ದೇಶಗಳು ವಿವಿಧ ಅಧ್ಯಯನಕ್ಕೆ ಮತ್ತು ಸಂಶೋಧನೆಗಾಗಿ ಬಾಹ್ಯಾಕಾಶಕ್ಕೆ ತಜ್ಞರನ್ನು ಕಳುಹಿಸುತ್ತವೆ.**

ಸೌರವ್ಯೂಹದಲ್ಲಿ ಜೀವಜಾಲಗಳಿರುವ ಏಕೈಕಗ್ರಹ ಭೂಮಿ. ಗೋಲಾಕೃತಿಯಾಗಿರುವುದು ಭೂಮಿಯ ವಿಶೇಷತೆಯಾಗಿದೆ. ಧ್ರುವಗಳು ಸ್ವಲ್ಪ ಚಪ್ಪಟೆಯಾಗಿದ್ದು, ಭೂಮಧ್ಯ ರೇಖೆಯ ಭಾಗ ಸ್ವಲ್ಪ ಉಬ್ಬಿರುವ ಗೋಲಾಕೃತಿಯಾಗಿದೆ. ಈ ಆಕಾರವು ಜಿಯೋಯ್ಡ್ (Geoid) ಆಗಿದೆ. ಜಿಯೋಯ್ಡ್ ಎಂಬ ಪದಕ್ಕೆ ಭೂಮಿಯ ಆಕೃತಿ ಎಂಬ ಅರ್ಥವಿದೆ.

**ಭಾರತೀಯ ವಿಜ್ಞಾನಿ ಆರ್ಯಭಟ ಭೂಮಿಯು ಗೋಲಾಕೃತಿಯಲ್ಲಿದ್ದು ಕಾಲ್ಪನಿಕ ಅಕ್ಷದಲ್ಲಿ ಸ್ವಯಂ ತಿರುಗುತ್ತದೆ ಎಂದು ನಂಬಿದ್ದರು. ಗ್ರೀಕ್ ತತ್ತ್ವಜ್ಞಾನಿಗಳು ಥೇಲ್ಸ್, ಪೈಥಾಗೋರಸ್, ಅರಿಸ್ಟಾಟಲ್ ಮುಂತಾದವರು ಭೂಮಿಯು ಗೋಲಾಕೃತಿಯಲ್ಲಿದೆ ಎಂದು ನಂಬಿದ್ದರು. ನಂತರ ಮೆಗಲನ್ ಎಂಬ ಸಮುದ್ರಯಾನಿ ಪ್ರಪಂಚ ಪರ್ಯಟನೆ ಮಾಡುವುದರ ಮೂಲಕ ಭೂಮಿಯು ಗೋಲಾಕಾರವಾಗಿದೆಯೆಂದು ಸಾಬೀತುಪಡಿಸಿದನು.**


ಬಾಹ್ಯಾಕಾಶದಿಂದ ತೆಗೆದ ಭೂಮಿಯ ಚಿತ್ರಗಳು

ಬಾಹ್ಯಾಕಾಶದಿಂದ ತೆಗೆದ ಭೂಮಿಯ ಚಿತ್ರವನ್ನು ಗಮನಿಸಿರಿ. ಈ ಚಿತ್ರಗಳಲ್ಲಿ ಭೂಮಿ ನೀಲಿಗೋಲವಾಗಿ ಕಂಡುಬರುವುದಲ್ಲವೇ? ಯಾಕಾಗಿರಬಹುದು? ಭೂಮಿಯ ಮಾದರಿಯಾದ 'ಗ್ಲೋಬ್' ಸಾಮಾನ್ಯವಾಗಿ ಯಾವ ಬಣ್ಣದಲ್ಲಿ ಕಂಡುಬರುವುದು? ಭೂಮಿಯ ಮೇಲ್ಮೈಯಲ್ಲಿ ಸುಮಾರು 71% ನೀರು ಇರುವ ಕಾರಣ ಬಾಹ್ಯಾಕಾಶದಿಂದ ನೋಡುವಾಗ ಭೂಮಿಯು ನೀಲಿ ಗೋಲಾಕೃತಿಯಾಗಿ ಕಂಡುಬರುತ್ತದೆ.

ಭೂಮಿಯನ್ನು ಇತರ ಗ್ರಹಗಳಿಂದ ಪ್ರತ್ಯೇಕಿಸುವ ಮತ್ತೊಂದು ವಿಶೇಷತೆಯೆಂದರೆ ವಾತಾವರಣ. ವಾತಾವರಣವು ಭೂಮಿಯನ್ನು ಆವರಿಸಿರುವ ವಾಯುವಿನ ಹೊದಿಕೆಯಾಗಿದೆ. ಅನಿಲಗಳು, ಧೂಳು, ನೀರು ಮುಂತಾದವುಗಳನ್ನು ವಾತಾವರಣವು ಹೊಂದಿರುತ್ತದೆ. ಭೂಮಿಯಲ್ಲಿ ಉಷ್ಣತೆ ಮತ್ತು ಶೀತಗಳನ್ನು ನಿಯಂತ್ರಿಸಿ ಜೀವಜಾಲಗಳ ಉಳಿಯುವಿಕೆಗೆ ವಾತಾವರಣವು ಮಹತ್ವವಾದ ಪಾತ್ರವಹಿಸುತ್ತದೆ.

ವಾತಾವರಣವು ಭೂಮಿಯನ್ನು ಆವರಿಸಿ ನಿಲ್ಲಲು ಕಾರಣವೇನು? ಕಂಡುಹಿಡಿಯಿರಿ.

**ಭೂಮಿಯಲ್ಲಿ ಜೀವಜಾಲಗಳು ಉಳಿಯಲು ವಾತಾವರಣ ವಹಿಸುವ ಪ್ರಾಮುಖ್ಯತೆಯ ಕುರಿತು ಟಿಪ್ಪಣಿ ರಚಿಸಿರಿ.**

## ಭೂಮಿಯ ಚಲನೆಗಳು




ಸಂಭಾಷಣೆಯನ್ನು ಗಮನಿಸಿರಿ. ಕೆನಡಾದಲ್ಲಿ ಉದ್ಯೋಗದಲ್ಲಿರುವ ಜಿನು ಭಾರತದಲ್ಲಿರುವ ತಂದೆ ತಾಯಿಯೊಂದಿಗೆ ವಿಡಿಯೋ ಕಾಲ್‌ನ ಮೂಲಕ ಮಾತನಾಡುವುದನ್ನು ನಾವು ನೋಡಬಹುದು. ಜಿನು ಮತ್ತು ಹೆತ್ತವರು ವಾಸಿಸುವುದು ಭೂಮಿಯ ಬೇರೆ ಬೇರೆ ಪ್ರದೇಶಗಳಲ್ಲಾಗಿದೆ.

ಗ್ಲೋಬ್ ನಿರೀಕ್ಷಿಸಿ ಭಾರತ ಮತ್ತು ಕೆನಡಾದ ಸ್ಥಾನವನ್ನು ಗುರುತಿಸಿರಿ.

ಈ ಎರಡು ಸ್ಥಳಗಳಲ್ಲಿ ಒಂದು ಕಡೆ ಹಗಲು ಮತ್ತು ಇನ್ನೊಂದು ಕಡೆ ರಾತ್ರಿಯಾಗಿರಲು ಕಾರಣವೇನು?

ಭೂಮಿ ಗೋಲಾಕೃತಿಯಲ್ಲಿರುವ ಕಾರಣ ಭೂಮಿಯ ಒಂದು ಭಾಗಕ್ಕೆ ಮಾತ್ರ ಸೂರ್ಯನ ಬೆಳಕು ಲಭಿಸುವುದು. ಮತ್ತೊಂದು ಭಾಗ ಕತ್ತಲು ಆಗಿರುವುದು.

ಸೂರ್ಯನಿಗೆ ಅಭಿಮುಖವಾಗಿ ಬರುವ ಭೂಮಿಯ ಭಾಗಗಳಿಗೆ ಸೂರ್ಯಪ್ರಕಾಶ ಲಭಿಸುವ ಕಾರಣ ಅಲ್ಲಿ ಹಗಲು ಉಂಟಾಗುತ್ತದೆ. ಇನ್ನೊಂದು ಭಾಗಕ್ಕೆ ಸೂರ್ಯಪ್ರಕಾಶ ಲಭಿಸದ ಕಾರಣ ರಾತ್ರಿಯಾಗಿರುವುದು. ಭೂಮಿಯ ಭ್ರಮಣ ಚಲನೆಯ ಕಾರಣದಿಂದ ಭೂಮಿಯಲ್ಲಿ ಹಗಲು ಮತ್ತು ರಾತ್ರಿ ಮತ್ತೆ ಮತ್ತೆ ಉಂಟಾಗುತ್ತದೆ. ಭೂಮಿ ತನ್ನ ಕಾಲ್ಪನಿಕ ಅಕ್ಷದಲ್ಲಿ ಸ್ವಯಂ ತಿರುಗುವುದನ್ನು ಭ್ರಮಣ (Rotation) ಎನ್ನುವರು.



ಭೂಮಿಯ ಭ್ರಮಣ

**ಭೂಮಿಯು ಪಶ್ಚಿಮದಿಂದ ಪೂರ್ವಕ್ಕೆ ಭ್ರಮಣ ಚಲನೆ ಮಾಡುವುದು. ಆ ಕಾರಣದಿಂದ ಸೂರ್ಯನು ಪೂರ್ವದಲ್ಲಿ ಉದಯಿಸಿ ಪಶ್ಚಿಮದಲ್ಲಿ ಅಸ್ತಮಿಸುವಂತೆ ಕಾಣುವುದು.**

**ಭೂಮಿಯು ತನ್ನ ಭ್ರಮಣ ಪೂರ್ಣಗೊಳಿಸಲು 23 ಗಂಟೆ 56 ನಿಮಿಷ 4 ಸೆಕುಂಡ್ ತೆಗೆದುಕೊಳ್ಳುತ್ತದೆ. ಇದು ಒಂದು ದಿನ.**


ಭೂಮಿಯ ಪರಿಕ್ರಮಣ

ಭೂಮಿ ಭ್ರಮಣ ಮಾಡುವುದರೊಂದಿಗೆ ನಿಶ್ಚಿತ ಸಂಚಾರ ಪಥದಲ್ಲಿ ಸೂರ್ಯನಿಗೆ ಸುತ್ತುಹಾಕುತ್ತದೆ. ಇದನ್ನು ಪರಿಕ್ರಮಣ (Revolution) ಎನ್ನುತ್ತಾರೆ. ಒಂದು ಬಾರಿ ಸೂರ್ಯನಿಗೆ ಸುತ್ತು ಬರಲು ಭೂಮಿಗೆ 365 $^{1}/_{4}$ ದಿವಸಗಳು ಬೇಕು. ಇದನ್ನು ಒಂದು ವರ್ಷ ಎನ್ನುತ್ತಾರೆ. ಭೂಮಿಯ ಪರಿಕ್ರಮಣ ಚಲನೆಯಿಂದಾಗಿ ವಿಭಿನ್ನವಾದ ಋತುಗಳು (Seasons) ಅನುಭವಕ್ಕೆ ಬರುತ್ತದೆ.

**ಭೂಮಿಯ ಪರಿಕ್ರಮಣವನ್ನು ತೋರಿಸುವ ಡಯಗ್ರಾಂ ಚಾರ್ಟ್ ನಲ್ಲಿ ರಚಿಸಿ, ತರಗತಿಯಲ್ಲಿ ಪ್ರದರ್ಶಿಸಿರಿ.**

## ಋತುಗಳು



ನನ್ನ ಬಾಲ್ಯಕಾಲವು ಎಷ್ಟೊಂದು ಮನೋಹರವಾಗಿತ್ತು. . . . . . . ! ಶಾಲೆ ಆರಂಭವಾಗುವಾಗಲೇ ಹೊಸ ಉಡುಪುಗಳನ್ನು ಒದ್ದೆ ಮಾಡುವ ಮುಂಗಾರು ಮಳೆ... ಸಾಧಾರಣವಾಗಿ ಎರಡು ತಿಂಗಳು ಮುಂದುವರಿಯುವ ಈ ಮಳೆ ಕರ್ಕಾಟಕ ಮಾಸದ ಅಂತ್ಯದಲ್ಲಿ ಶಮನಗೊಳ್ಳುವುದು. ನಂತರ ಸಂಪತ್ತು ಸಮೃದ್ಧಿಯ ತಿಂಗಳಾದ ಸಿಂಹ ಮಾಸದ ಆಗಮನ. ಈ ತಿಂಗಳಲ್ಲಿ ಪ್ರಕೃತಿಯು ಶೃಂಗಾರಗೊಂಡು ಓಣಂ ಹಬ್ಬವನ್ನು ಸ್ವಾಗತಿಸುವ ದೃಶ್ಯ ಎಷ್ಟೊಂದು ಮನೋಹರವಾಗಿತ್ತು... ಆನಂತರ ಕನ್ಯಾಮಾಸದ ಸೆಖೆಗೆ ಸಮಾಧಾನವೀಯುತ್ತಾ ಹಿಂಗಾರು ಮಳೆ ತಲುಪುತ್ತದೆ. ವೃಶ್ಚಿಕ, ಧನು ತಿಂಗಳುಗಳು ಪ್ರಕೃತಿಯನ್ನು ತಂಪುಗೊಳಿಸುತ್ತವೆ. ಮಕರ ಮಾಸದಲ್ಲಿ ಕೆಲವು ಮರಗಳು ಎಲೆ ಉದುರಿಸಿ ನಿಲ್ಲುತ್ತವೆ. ಕುಂಭ, ಮೀನಾ, ಮೇಷ ತಿಂಗಳು ಅತಿ ತೀವ್ರವಾದ ಸೆಖೆಯಿಂದ ಹೆಚ್ಚಿನ ಜಲಾಶಯಗಳು ಬತ್ತಿಹೋಗುತ್ತವೆ. ಹಿತ್ತಿಲಲ್ಲಿ ಫಲಗಳಿಂದ ತುಂಬಿರುವ ಮಾವು ಮತ್ತು ಹಲಸು ಪ್ರಕೃತಿಯನ್ನು ಮನೋಹರಗೊಳಿಸಿತ್ತು.

ಅಜ್ಜಿಯ ಅನುಭವದ ಮಾತುಗಳನ್ನು ಓದಿದಿರಲ್ಲವೇ? ಇಲ್ಲಿ ಅಜ್ಜಿ ಹೇಳಿರುವುದು ಬಾಲ್ಯಕಾಲದಿಂದಲೂ ತನ್ನ ಪರಿಸರದಲ್ಲಾಗುವ ಬದಲಾವಣೆಯ ಕುರಿತಲ್ಲವೇ.ಯಾವೆಲ್ಲಾ ಬದಲಾವಣೆ ಉಂಟಾಗಿದೆ?

- ಮಳೆ
- 
- 
- 

**ನಮಗೆ ಎಲ್ಲಾ ಸಮಯದಲ್ಲಿ ಎಲ್ಲಾ ರೀತಿಯ ಹಣ್ಣುಗಳು ಲಭಿಸುತ್ತವೆಯೇ? ಚರ್ಚಿಸಿರಿ.**







ನೀಡಿರುವ ಚಿತ್ರಗಳು ಯಾವೆಲ್ಲಾ ಕಾಲಗಳನ್ನು ಸೂಚಿಸುತ್ತವೆ?

- ಮಳೆಗಾಲ
- 
- 

ನಿಮ್ಮ ಪ್ರದೇಶದಲ್ಲಿ ಈ ಕಾಲಗಳು ಅನುಭವಕ್ಕೆ ಬರುತ್ತವೆಯೇ?

**ನಿಮ್ಮ ಪರಿಸರದಲ್ಲಿ ಈ ಕಾಲಗಳು ಅನುಭವಕ್ಕೆ ಬರುತ್ತವೆಯೇ? ವಿಭಿನ್ನವಾದ ಕಾಲಗಳಲ್ಲಿ ನಿಮ್ಮ ಸುತ್ತುಮುತ್ತ ಕಾಣುವ ದೃಶ್ಯಗಳು ಯಾವುದೆಲ್ಲಾ? ತರಗತಿಯಲ್ಲಿ ಚರ್ಚಿಸಿ ಕೆಳಗೆ ನೀಡಿರುವ ಪಟ್ಟಿ ಪೂರ್ತಿಗೊಳಿಸಿರಿ.**

| ಬೇಸಗೆ ಕಾಲ | ಮಳೆಗಾಲ | ಚಳಿಗಾಲ |
|---|---|---|
| • ಜಲಾಶಯಗಳು ಬತ್ತಿ ಹೋಗುವುದು | • ಹೊಳೆ ತುಂಬಿ ಹರಿಯುತ್ತದೆ | • ಎತ್ತರ ಪ್ರದೇಶದಲ್ಲಿ ಹಿಮಪಾತ |
| • | • | • |
| • | • | • |

ಕೇರಳದಲ್ಲಿ ವಿವಿಧ ಕಾಲಗಳು ಈ ರೀತಿಯಾಗಿ ಅನುಭವಕ್ಕೆ ಬರುವುದಾದರೂ, ಭೂಮಿಯ ಬೇರೆ ಪ್ರದೇಶಗಳಲ್ಲಿ ಈ ಕಾಲಗಳು ವಿಭಿನ್ನವಾಗಿ ಅನುಭವಕ್ಕೆ ಬರುತ್ತವೆ. ಭೂಮಿಯ ಪರಿಕ್ರಮಣದಿಂದ ಭೂಮಿಗೆ ಲಭಿಸುವ ಸೌರಶಕ್ತಿಯು ಹೆಚ್ಚು ಮತ್ತು ಕಡಿಮೆ ಆಗುವುದು. ಇದು ಋತು ಬದಲಾವಣೆಗಳಾಗಲು (Seasonal changes) ಕಾರಣವಾಗಿದೆ.

ಋತು ಬದಲಾವಣೆಗನುಸಾರವಾಗಿ ವಾತಾವರಣ ಮತ್ತು ಪ್ರಕೃತಿಯಲ್ಲಿ ಬದಲಾವಣೆ ಉಂಟಾಗುತ್ತವೆ.

ಭೂಮಿಯ ಪ್ರಮುಖ ಎರಡು ಚಲನೆಯಾಗಳಾದ ಭ್ರಮಣ ಮತ್ತು ಪರಿಕ್ರಮಣ ಆಧಾರದಲ್ಲಿ ಕೆಳಗೆ ನೀಡಿರುವ ಪಟ್ಟಿಯನ್ನು ಪೂರ್ಣಗೊಳಿಸಿರಿ.

|  ಭ್ರಮಣ |  ಪರಿಕ್ರಮಣ |
|---|---|
| • ಭೂಮಿ ತನ್ನ ಅಕ್ಷದಲ್ಲಿ ಸ್ವಯಂ ತಿರುಗುತ್ತದೆ | • ............................................................ |
| • ............................................ | • ಋತುಗಳು ಉಂಟಾಗುತ್ತವೆ |

## ಹವಾಮಾನ ಮತ್ತು ಹವಾಗುಣ

**ಅಂಡರ್ 17 ಕ್ರಿಕೆಟ್ : ಮಳೆಯ ಕಾರಣದಿಂದ ಫೈನಲ್ ಪಂದ್ಯ ರದ್ದು**

ಕೊಚ್ಚಿ: ನಿನ್ನೆ ನಡೆಯಬೇಕಾದ ಅಂಡರ್ 17 ಕ್ರಿಕೆಟ್‌ನ ಫೈನಲ್ ಪಂದ್ಯವನ್ನು ಭಾರೀ ಮಳೆಯಿಂದಾಗಿ ರದ್ದುಗೊಳಿಸಲಾಯಿತು. ಮುಂದಿನ ಮೂರು ದಿನಗಳವರೆಗೆ ಭಾರೀ ಮಳೆ ಮತ್ತು ಪ್ರಬಲ ಗಾಳಿ ಬೀಸುವ ಸಾಧ್ಯತೆಯಿದೆಯೆಂದು ಹವಾಮಾನ ಇಲಾಖೆ ತಿಳಿಸಿದೆ.

ಈ ವಾರ್ತೆಯನ್ನು ಗಮನಿಸಿದಿರಲ್ಲವೇ. ಕ್ರಿಕೆಟ್ ಪಂದ್ಯಾಟ ರದ್ದುಗೊಳಿಸಲು ಕಾರಣವಾದ ಸನ್ನಿವೇಶ ಯಾವುದು? ಹವಾಮಾನ ಬದಲಾವಣೆಯು ಕೆಲವೊಮ್ಮೆ ವಾತಾವರಣದಲ್ಲಿ ಉಂಟಾಗುವ ಈ ರೀತಿಯ ಬದಲಾವಣೆಗಳಿಗೆ ಕಾರಣವಾಗಿರುತ್ತದೆ.

**ಹವಾಮಾನ (Weather)**

ಒಂದು ನಿಶ್ಚಿತ ಕಾಲದಲ್ಲಿ ಒಂದು ಪ್ರದೇಶದಲ್ಲಿ ಅನುಭವಕ್ಕೆ ಬರುವ ವಾತಾವರಣದ ಸ್ಥಿತಿಯೇ ಹವಾಮಾನ. (weather) ವಾತಾವರಣದ ಆರ್ದ್ರತೆ, ಉಷ್ಣತೆ, ಮಳೆ, ಗಾಳಿ, ಮೋಡ ಇತ್ಯಾದಿಗಳು ನಿಶ್ಚಿತ ಕಾಲದ ಹವಾಮಾನದ ಮೇಲೆ ಪ್ರಭಾವ ಬೀರುತ್ತವೆ.

**ಹವಾಗುಣ (Climate)**

ಹಲವು ವರ್ಷಗಳಲ್ಲಿ ಒಂದು ಪ್ರದೇಶದಲ್ಲಿ ಅನುಭವಕ್ಕೆ ಬಂದ ಹವಾಮಾನದ ಸರಾಸರಿಯೇ ಹವಾಗುಣ. (Climate)

**ಅಧಿಕವಾದ ತಾಪಮಾನ : ಎಚ್ಚರವಹಿಸಲು ಸೂಚನೆ**

**ಹಿಮಾಚಲದಲ್ಲಿ ಮತ್ತೆ ಹಿಮಪಾತ : ಶಾಲೆಗಳಿಗೆ ರಜೆ**

**ಭಾರೀ ಮಳೆ: 5 ಜಿಲ್ಲೆಗಳಲ್ಲಿ ಓರೆಂಜ್ ಅಲರ್ಟ್**

**ಪ್ರಬಲವಾದ ಗಾಳಿಯ ಸಾಧ್ಯತೆ: ಸಮುದ್ರಕ್ಕೆ ಇಳಿಯದಂತೆ ಮೀನುಗಾರರಿಗೆ ಮುನ್ನೆಚ್ಚರಿಕೆ**

ಹವಾಮಾನ ಬದಲಾವಣೆಯ ನಿಖರ ಮತ್ತು ವೈಜ್ಞಾನಿಕವಾದ ಮುನ್ನೆಚ್ಚರಿಕೆಯು ದೈನಂದಿನ ಜೀವನಕ್ಕೆ ಎಷ್ಟು ಪ್ರಯೋಜನವಾಗುತ್ತದೆ? ಚರ್ಚಿಸಿರಿ.

## ಹವಾಗುಣ ಮತ್ತು ಜನಜೀವನ



ಎಸ್. ಕೆ. ಪೊಟ್ಟೆಕ್ಕಾಡ್

" ನೀರು ಗಟ್ಟಿಯಾಗಿರುವ ಸರೋವರದ ದಡದಲ್ಲಿ ಬಸ್ಸು, ಲಾರಿ ಮತ್ತು ಕಾರುಗಳು ಓಡಲಾರಂಭಿಸುತ್ತದೆ... ಸ್ಕೀಯಿಂಗ್, ಸ್ಕೇಟಿಂಗ್ ಮುಂತಾದ ಚಳಿಗಾಲದ ಆಟಗಳು ಪ್ರತಿ ಮೂಲೆ ಮೂಲೆಗಳಲ್ಲಿ ನಡೆಯುತ್ತದೆ. ವರ್ಷದಲ್ಲಿ ಅಧಿಕ ಕಾಲ ಹಿಮ ಆವೃತವಾಗಿರುವ ಕಾರಣ ರಸ್ತೆಯನ್ನು ಗಟ್ಟಿಯಾಗಿ ಮತ್ತು ಸುಂದರವಾಗಿರುವಂತೆ ಮಾಡಲು ಬಹಳ ಕಷ್ಟವಾಗುತ್ತದೆ ಮತ್ತು ಅಧಿಕ ಹಣದ ಅಗತ್ಯವಿದೆ. ಲಾಹ್‌ತಿಯದ ನಿಜವಾದ ಸೌಂದರ್ಯ ಆಸ್ವಾದಿಸಲು ಹೇಮಂತ ಋತುವಿನಲ್ಲಿ ಇಲ್ಲಿಗೆ ಬರಬೇಕೆಂದು ಕಾಯ ಹೇಳಿದರು. ಆಗ ನೆಲವೆಲ್ಲಾ ಧವಳ ಹಿಮದಿಂದ ಆವೃತವಾಗಿರುತ್ತದೆ. ಮರಗಳೆಲ್ಲಾ ಬಿಳಿಯ ಕಾಗದಗಳ ತೋರಣಗಳಂತೆ ಗೋಚರಿಸುತ್ತದೆ. ಹಿಮದಲ್ಲಿ ಆಟವಾಡಲು ಮಕ್ಕಳಿಗೆ ಏನೋ ಉತ್ಸಾಹ... ಬಹುತೇಕ ಆರು ತಿಂಗಳ ಕಾಲ ರಾತ್ರಿಮಾತ್ರ. ಹಗಲಾದರೋ ಗರಿಷ್ಟ ಒಂದೋ ಎರಡೋ ಗಂಟೆಗಳ ಕಾಲಮಾತ್ರ. ನೆಲವನ್ನು ಆವರಿಸಿದ ಹಿಮದ ಬಿಳುಪು ಮತ್ತು ಆಕಾಶದ ಬೆಳಕು ಸೇರಿ ಬೆಳದಿಂಗಳು ಹರಡಿದಂತೆ ಕಾಣುತ್ತದೆ."

ಟಿಪ್ಪಣಿಯನ್ನು ಓದಿದಿರಲ್ಲವೇ. ಇದು ಪ್ರಖ್ಯಾತ ಪ್ರವಾಸಿ ಸಾಹಿತ್ಯಕಾರರಾದ ಎಸ್. ಕೆ ಪೊಟ್ಟೆಕ್ಕಾಡ್ ರವರ 'ಪಾದಿರ ಸೂರ್ಯಂಡೇ ನಾಟಿಲ್ ' ಎನ್ನುವ ಕೃತಿಯ ಭಾಗವಾಗಿದೆ. ನೀವು ಹಿಮ ಆವೃತವಾಗಿರುವ ಪ್ರದೇಶದ ಜನರ ಜನಜೀವನದ ಕುರಿತಾಗಿ ತಿಳಿಸುವ ಭಾಗವನ್ನು ಓದಿದಿರಿ. ಈ ಪ್ರದೇಶದಲ್ಲಿ ಏನೆಲ್ಲಾ ವಿಶೇಷತೆಗಳಿವೆ?

- 
- 
- 
- 

**ಮಧ್ಯರಾತ್ರಿ ಸೂರ್ಯ ಉದಯಿಸುವ ನಾಡು**

ಮಧ್ಯರಾತ್ರಿ ಸೂರ್ಯ ಉದಯಿಸುವ ನಾಡು ಎಂದು ನಾರ್ವೆ ದೇಶವನ್ನು ಕರೆಯುತ್ತಾರೆ. ಇದು ಯುರೋಪಿನ ಉತ್ತರ ಭಾಗದಲ್ಲಿದೆ . ವರ್ಷದಲ್ಲಿ ಹೆಚ್ಚಿನ ಕಾಲವು ಮಂಜಿನಿಂದ ಆವೃತ್ತವಾಗಿರುವ ಈ ದೇಶದ ಉತ್ತರ ಭಾಗದಲ್ಲಿರುವ ಪ್ರದೇಶಗಳಲ್ಲಿ ನಿರಂತರವಾಗಿ ಆರು ತಿಂಗಳು ಹಗಲು ಮತ್ತು ಆರು ತಿಂಗಳು ರಾತ್ರಿ ಅನುಭವಕ್ಕೆ ಬರುತ್ತದೆ.

**ಅಟ್ಲಾಸ್‌ನ ಸಹಾಯದಿಂದ ನಾರ್ವೆಯ ಸ್ಥಾನವನ್ನು ಗುರುತಿಸಿರಿ.**



ಸ್ಲೆಡ್ಜು

ಹಿಮದಿಂದ ಆವೃತವಾಗಿರುವ ಈ ಪ್ರದೇಶದಲ್ಲಿ ವಿರಳವಾಗಿರುವ ಜನರ ಜೀವನವು ಹೇಗೆ ರೂಪಿತವಾಗಿದೆಯೆಂದು ನೋಡೋಣ. ಇಲ್ಲಿನ ಜನರು ಚರ್ಮದಿಂದ ತಯಾರಿಸಿದ ಮತ್ತು ಗಾಳಿ ಪ್ರವೇಶಿಸದ ಪಾದರಕ್ಷೆಗಳು, ರೋಮಗಳಿಂದ ನಿರ್ಮಿಸಿದ ವಸ್ತ್ರಗಳನ್ನು ಧರಿಸುತ್ತಾರೆ. ಇಲ್ಲಿನ ಸ್ಥಳೀಯರಾದ ಇನ್ಯೂಟುಗಳು, ಸಾಕು ನಾಯಿಗಳು ಎಳೆಯುವ ಸ್ಲೆಡ್ಜುಗಳನ್ನು ಸಂಚರಿಸಲು ಬಳಸುವರು. ಆರು ತಿಂಗಳ ಕಾಲ ಮುಂದುವರಿಯುವ ಶೀತಕಾಲದಲ್ಲಿ ಇವರು ವಾಸಸ್ಥಳವಾದ ಇಗ್ಲೂವಿನಿಂದ ಹೊರಬರುವುದಿಲ್ಲ. ಅತಿಯಾದ ಶೈತ್ಯವನ್ನು ತಾಳಿಕೊಳ್ಳುವ ಪಾಚಿ, ಹಾವಸೆಗಳು ಇಲ್ಲಿನ ಪ್ರಧಾನ ಸಸ್ಯವರ್ಗಗಳಾಗಿವೆ. ತಿಮಿಂಗಿಲ, ಮೀನುಗಳು, ಹಿಮಗೂಬೆ, ಸೀಲ್, ಹಿಮಕರಡಿ ಮುಂತಾದವು ಇಲ್ಲಿನ ಪ್ರಮುಖ ಜೀವಿಗಳಾಗಿವೆ. ಬೇಟೆಯಾಡುವುದು ಮತ್ತು ಮೀನುಗಾರಿಕೆ ಇವರ ಪ್ರಮುಖ ಕಸುಬುಗಳಾಗಿವೆ.



ಇಗ್ಲೂ

**ಇಗ್ಲೂ (Igloo)**

**ಇನ್ಯೂಟ್‌ಗಳು ಅಥವಾ ಎಸ್ಕಿಮೋಗಳು ಧ್ರುವ ಪ್ರದೇಶಗಳಲ್ಲಿ ಜೀವಿಸುವ ಜನಾಂಗವಾಗಿದ್ದಾರೆ. ಇಗ್ಲೂ ಎಂಬುದು ಇವರು ಮಂಜಿನ ಗಡ್ಡೆಗಳಿಂದ ನಿರ್ಮಿಸುವ ವಾಸಸ್ಥಳವಾಗಿದೆ.**

**ಟೀಚರ ಸಹಾಯದಿಂದ ಹಿಮ ಆವೃತವಾಗಿರುವ ಪ್ರದೇಶದ ವಿಶೇಷತೆಗಳನ್ನು ಗುರುತಿಸಿ ಡಿಜಿಟಲ್ ಆಲ್ಬಂ ತಯಾರಿಸಿ ತರಗತಿಯಲ್ಲಿ ಪ್ರದರ್ಶಿಸಿರಿ.**

ಚಿತ್ರಗಳನ್ನು ಗಮನಿಸಿರಿ.



**ಮರುಭೂಮಿ**

ಉಷ್ಣಮರುಭೂಮಿಗಳು ಧ್ರುವ ಪ್ರದೇಶಗಳಿಂದ ಸಂಪೂರ್ಣ ಭಿನ್ನವಾಗಿರುವ ಭೌಗೋಳಿಕ ಲಕ್ಷಣಗಳನ್ನು ಹೊಂದಿರುತ್ತವೆ. ವಿಶಾಲವಾದ ಮರಳಗಾಡುಗಳು, ಮರಳ ದಿಬ್ಬ ಇಲ್ಲಿಯ ವಿಶೇಷವಾಗಿದೆ. ಇಲ್ಲಿ ಹಗಲು ಹೊತ್ತಿನಲ್ಲಿ ಅತಿಯಾದ ಉಷ್ಣವೂ ರಾತ್ರಿ ಹೊತ್ತಿನಲ್ಲಿ ಕನಿಷ್ಠ ತಾಪವು ಅನುಭವಕ್ಕೆ ಬರುತ್ತದೆ. ಮಳೆ ಕಡಿಮೆಯಾಗಿರುವ ಈ ಪ್ರದೇಶಗಳಲ್ಲಿ ಗರಿಷ್ಠ ಉಷ್ಣ, ಒಣಗಾಳಿ ಮತ್ತು ಜಲಕ್ಷಾಮ ಅನುಭವಕ್ಕೆ ಬರುತ್ತದೆ. ಈ ಪ್ರದೇಶದಲ್ಲಿ ಜನವಾಸ ಕಡಿಮೆಯಿದೆ. ಉಷ್ಣ ಮರುಭೂಮಿಗಳಲ್ಲಿರುವ ಸನ್ನಿವೇಶಗಳಿಗೆ ಅನುಗುಣವಾಗಿ ಇಲ್ಲಿನ ಜೀವನ ಶೈಲಿಯಿದೆ. ನಿರಂತರ ಬರಗಾಲ ಮತ್ತು ಮರಳು ಗಾಳಿ ಇಲ್ಲಿನ ಮತ್ತೊಂದು ವಿಶೇಷತೆಯಾಗಿದೆ. ಇಲ್ಲಿಯ ನಿವಾಸಿಗಳು ಸಾಮಾನ್ಯವಾಗಿ ಸಡಿಲವಾದ ವಸ್ತ್ರ ಮತ್ತು ಮುಖ ಮುಚ್ಚುವ ಶಿರವಸ್ತ್ರಧಾರಣೆ ಮಾಡುವುದು ವಿಶೇಷವಾಗಿದೆ. ಮರುಭೂಮಿಯಲ್ಲಿ ಸಾಮಾನ್ಯವಾಗಿ ಒಂಟೆಗಳನ್ನು ಸರಕು ಸಾಗಾಟಕ್ಕೆ ಮತ್ತು ಸಂಚರಿಸಲು ಬಳಸುತ್ತಾರೆ.

**ಮರುಭೂಮಿಯ ಇತರ ವಿಶೇಷತೆಗಳನ್ನು ಗುರುತಿಸಿ ಚಾರ್ಟ್ ತಯಾರಿಸಿರಿ.**



ಈ ರೀತಿ  ವಿಶೇಷತೆಗಳಿರುವ ಪ್ರದೇಶಗಳಲ್ಲಿ ಹವಾಗುಣಕ್ಕನುಸಾರವಾದ ಜೀವನ ಶೈಲಿಯಿದೆ. ಧ್ರುವ ಪ್ರದೇಶಗಳ ಮತ್ತು ಮರುಭೂಮಿ ಪ್ರದೇಶಗಳ ಭೌಗೋಳಿಕ ವಿಶೇಷತೆಗಳು ಅಲ್ಲಿನ ಜನಜೀವನದ ಮೇಲೆ ಯಾವ ರೀತಿಯಲ್ಲಿ ಪ್ರಭಾವ ಬೀರುತ್ತದೆಯೆಂದು ನಾವು ಚರ್ಚಿಸಿದ್ದೇವಲ್ಲವೇ. ಒಂದು ಪ್ರದೇಶದ ಕೃಷಿ, ಉದ್ಯೋಗ, ಆಹಾರ, ವಸ್ತ್ರಧಾರಣೆ, ಮನೆ ನಿರ್ಮಾಣ, ಆಚರಣೆಗಳು ಮೊದಲಾದವುಗಳು ಅಲ್ಲಿನ ಹವಾಗುಣಕ್ಕೆ ಅನುಗುಣವಾಗಿ ರೂಪೀಕರಣವಾಗಿದೆ. ಆದರೆ ಮಾನವರ ಅವೈಜ್ಞಾನಿಕವಾದ ಹಸ್ತಕ್ಷೇಪವೂ ಸ್ವಾಭಾವಿಕವಾದ ಪರಿಸರ ವ್ಯವಸ್ಥೆಯ ಬದಲಾವಣೆಗೆ ಕಾರಣವಾಗಿದೆಯೆಂದು ವರದಿಗಳು ಸೂಚಿಸುತ್ತವೆ. ಇದರ ಕಾರಣದಿಂದಾಗಿ ವಿಶ್ವದಾದ್ಯಂತ ಹವಾಗುಣದಲ್ಲಿ ಮಹತ್ವವಾದ ಏರುಪೇರು ಉಂಟಾಗುತ್ತವೆ.

## ಹವಾಗುಣ ವೈಪರೀತ್ಯ



ನಾನು ಕೀನ್ಯಾದಿಂದ ಬಂದಿದ್ದೇನೆ. ಅಲ್ಲಿನ 20 ಕೋಟಿ  ಜನತೆ ಹವಾಗುಣ ವ್ಯತ್ಯಾಸದಿಂದ ಕಷ್ಟವನ್ನು ಅನುಭವಿಸುತ್ತಿದ್ದಾರೆ. ಅಲ್ಲಿ ತೀವ್ರ ಬರಗಾಲ. ಎರಡು ವರ್ಷಗಳಿಂದ ನಮಗೆ ಮಳೆ ಲಭಿಸಿಲ್ಲ. ಮೂರನೇಯ ವರ್ಷವೂ ಅದೇ ಪರಿಸ್ಥಿತಿ ಮುಂದುವರಿಯುವುದೆಂದು ವಿಜ್ಞಾನಿಗಳು ಹೇಳುತ್ತಿದ್ದಾರೆ. ನಮಗೆ  ಮಳೆಯಿಲ್ಲ. ಹೊಳೆಗಳೆಲ್ಲಾ ಬತ್ತಿ ಹೋಗಿವೆ. ಉಷ್ಣಗಾಳಿ ಬೀಸುತ್ತಿದೆ. ದಯವಿಟ್ಟು ನಿಮ್ಮ ಹೃದಯವನ್ನು




ತೆರೆಯಿರಿ. ನಮ್ಮ ಬೆಳೆಗಳೆಲ್ಲಾ ಸುಟ್ಟುಹೋಗಿವೆ. ಮಾನವರು , ಮೃಗಗಳು ಸತ್ತು  ಬೀಳುತ್ತಿವೆ. ಹೀಗೆ ಮುಂದುವರಿದರೆ 2025ರಲ್ಲಿ ನಮ್ಮ ಜನಸಂಖ್ಯೆಯ ಅರ್ಧ ಭಾಗದಷ್ಟು ಜನರು ಮರಣ ಹೊಂದಬಹುದು. ಈ ಸಮ್ಮೇಳನದ ನಿಮ್ಮ ತೀರ್ಮಾನವು ನಮಗೆ ಮಳೆ ಲಭಿಸಬಹುದೇ ಎಂಬುದನ್ನು ತೀರ್ಮಾನಿಸುತ್ತದೆ. ನಮ್ಮ ಗೆಳೆಯರಾದ ಮಕ್ಕಳಿಗೆ ಆಹಾರ ಮತ್ತು ನೀರು ಲಭಿಸಬಹುದೇ ಎಂದು ತೀರ್ಮಾನಿಸಿರಿ. ದಯವಿಟ್ಟು ನಿಮ್ಮ ಹೃದಯ ತೆರೆಯಿರಿ... ದಯವಿಟ್ಟು ನಿಮ್ಮ ಹೃದಯ ತೆರೆಯಿರಿ...

2021 ಒಕ್ಟೋಬರ್ 31 ರಂದು ಕೀನ್ಯಾದ ಶಾಲಾ ವಿದ್ಯಾರ್ಥಿನಿಯಾದ ಎಲಿಜಬೆತ್ ವತುಟಿ ವಿಶ್ವಸಂಸ್ಥೆಯ ಗ್ಲಾಸ್ಗೋ ಹವಾಮಾನ ಬದಲಾವಣೆ ಸಮ್ಮೇಳನದಲ್ಲಿ ವಿಶ್ವ ನಾಯಕರಲ್ಲಿ ಮಾಡಿದ ಮನವಿಯನ್ನು ಓದಿದಿರಲ್ಲವೇ. ಹವಾಗುಣ ವೈಪರೀತ್ಯ ಪ್ರಪಂಚ ಎದುರಿಸುತ್ತಿರುವ ಮತ್ತು ಮುಂದಿನ ಜನಾಂಗ ಎದುರಿಸಲಿರುವ ಬಹಳ ಭೀಕರವಾದ ಕಠಿಣ ಸಮಸ್ಯೆಯಾಗಿದೆ. ಒಂದು ಪ್ರದೇಶದ ಹವಾಗುಣದ ಮೇಲೆ ಪ್ರಭಾವ ಬೀರುವ ಪ್ರಮುಖ ಅಂಶವೆಂದರೆ ಆ ಪ್ರದೇಶದ ಹವಾಮಾನವಾಗಿದೆ. ಹವಾಮಾನದಲ್ಲಾಗುವ ಉಷ್ಣತೆಯ ಏರುಪೇರುಗಳನ್ನಾಗಿವೆ. ಹವಾಗುಣ ಬದಲಾವಣೆಯಾಗಿ ಪರಿಗಣಿಸುವುದು. ಹವಾಗುಣ ಬದಲಾವಣೆ ಭೂಮಿಯಲ್ಲಿ ನಿಧಾನವಾಗಿ ಉಂಟಾಗುತ್ತಿರುವ ಪ್ರಕ್ರಿಯೆಯಾಗಿದೆ. ಹವಾಗುಣದಲ್ಲಿ ಉಂಟಾಗುವ ಕ್ಷಿಪ್ರವಾದ ಬದಲಾವಣೆ ಪ್ರಕೃತಿಯನ್ನು ಬಹಳವಾಗಿ ಬಾಧಿಸುತ್ತದೆ. ಹವಾಗುಣದಲ್ಲಿ ಉಂಟಾಗುವ ಬದಲಾವಣೆ ನಮಗೆ ಯಾವ ರೀತಿಯಲ್ಲಿ ತಿಳಿಯಲು ಸಾಧ್ಯ?

ಅನುವಿನ ಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ನಡೆದ ಚಿತ್ರ ಪ್ರದರ್ಶನದ ಕೆಲವು ಚಿತ್ರಗಳನ್ನು ಕೆಳಗೆ ನೀಡಲಾಗಿದೆ.



ಚಿತ್ರಗಳನ್ನು ನೋಡಿರಿ. ಹವಾಮಾನ ವೈಪರೀತ್ಯದ ಕಾರಣದಿಂದ ಭೂಮಿಯಲ್ಲಿ ನಡೆಯುವ ಪ್ರಾಕೃತಿಕ ದುರಂತದ ಚಿತ್ರಗಳನ್ನು ನೀಡಲಾಗಿದೆ. ಅವುಗಳು ಯಾವುವೆಲ್ಲಾ?

- 
- 
- 
- 

ಹವಾಗುಣ ವೈಪರೀತ್ಯದಿಂದ ಉಂಟಾಗುವ ಪರಿಣಾಮಗಳು ಯಾವುದೆಂದು ಗುರುತಿಸಿರಿ.

**ಹವಾಮಾನ ವೈಪರೀತ್ಯದ ಪರಿಣಾಮಗಳು**

- ಏರುತ್ತಿರುವ ಜಾಗತಿಕ ತಾಪಮಾನ
- ಸಮುದ್ರ ಮಟ್ಟದ ಏರಿಕೆ ಮತ್ತು ಸುನಾಮಿ ದುರಂತಗಳು
- ಅಕಾಲಿಕ ಮಳೆ ಮತ್ತು ಮಳೆಯ ಮಟ್ಟದಲ್ಲಿ ಏರುಪೇರು
- ಬರಗಾಲ
- ಧ್ರುವಪ್ರದೇಶಗಳಲ್ಲಿ ಮಂಜುಗಡ್ಡೆ ಕರಗುವಿಕೆ.

ಅನಿಯಂತ್ರಿಕವಾದ ಪ್ರಾಕೃತಿಕ ಸಂಪನ್ಮೂಲಗಳ ಅತಿಯಾದ ಬಳಕೆ ಮತ್ತು ಅವೈಜ್ಞಾನಿಕವಾದ ನಿರ್ಮಾಣ ಚಟುವಟಿಕೆಗಳು ಭೂಮಿಯ ಅಸ್ತಿತ್ವಕ್ಕೆ ಬಾಧಿಸುತ್ತದೆ.

ಚಿತ್ರಗಳನ್ನು ನಿರೀಕ್ಷಿಸಿರಿ.



ಮಾನವರ ಅವೈಜ್ಞಾನಿಕವಾದ ಹಲವಾರು ಚಟುವಟಿಕೆಗಳು ಹವಾಗುಣ ವೈಪರೀತ್ಯಕ್ಕೆ ಕಾರಣವಾಗುತ್ತದೆ. ಅವುಗಳು ಯಾವುದೆಂದು ಚಿತ್ರಗಳನ್ನು ನೋಡಿ ಬರೆಯಿರಿ.

- ವಾಹನಗಳಿಂದ ಬರುವ ವಿಷಾನಿಲಗಳು
- ಅರಣ್ಯನಾಶ
- 
- 

ಹವಾಗುಣ ವೈಪರೀತ್ಯವೂ ಭೂಮಿಯ ಎಲ್ಲಾ ಜೀವಜಾಲಗಳಿಗೂ ಹಲವಾರು ರೀತಿಯಲ್ಲಿ ಬಾಧಿಸುತ್ತದೆ. ಇದು ಹಲವು ಜೀವಿಗಳ ವಂಶನಾಶಕ್ಕೆ ಕಾರಣವಾಗುತ್ತದೆ. ಕೆಲವೊಮ್ಮೆ ಈ ಹವಾಗುಣ ವೈಪರೀತ್ಯದಿಂದಾಗಿ ಪ್ರಕೃತಿ ದುರಂತಗಳು ಉಂಟಾಗುತ್ತದೆ.

ಟೀಚರ ಸಹಾಯದಿಂದ, ಹವಾಗುಣ ವೈಪರೀತ್ಯವನ್ನು ಎದುರಿಸುತ್ತಿರುವ ವಂಶನಾಶದ ಭೀತಿಯಲ್ಲಿರುವ ಜೀವಜಾಲಗಳ ಕುರಿತು ಮಾಹಿತಿ ಸಂಗ್ರಹಿಸಿ ಭಿತ್ತಿಪತ್ರ ತಯಾರಿಸಿರಿ

ಕೇರಳ ಸರಕಾರವು ಹವಾಗುಣ ವೈಪರೀತ್ಯಕ್ಕೆ ಕಾರಣವಾಗುವ ಚಟುವಟಿಕೆಗಳನ್ನು ನಿಯಂತ್ರಿಸಲು ಮತ್ತು ಪರಿಸರ ಸಂರಕ್ಷಣೆಗಾಗಿ ವಿವಿಧ ಯೋಜನೆಗಳನ್ನು ತಯಾರಿಸಿ ಜಾರಿಗೊಳಿಸುತ್ತಿದೆ. ಹರಿತ ಕೇರಳ ಮಿಷನ್ ಇದಕ್ಕೆ ಉದಾಹರಣೆಯಾಗಿದೆ.

### ಹರಿತ ಕೇರಳ ಮಿಷನ್

ಮಣ್ಣು, ಜಲ ಸಂರಕ್ಷಣೆ, ಶುಚಿತ್ವ, ತ್ಯಾಜ್ಯ ಸಂಸ್ಕರಣೆ, ಜೈವಿಕ ಕೃಷಿ (ಸಾವಯವ ಕೃಷಿ) ಮುಂತಾದ ವಲಯಗಳಿಗೆ ಆದ್ಯತೆ ನೀಡಿ ಸರಕಾರದ ವತಿಯಿಂದ ನಡೆಸುವ ಯೋಜನೆಯಾಗಿದೆ ಹರಿತ ಕೇರಳ ಮಿಷನ್.ಹರಿತ ಕರ್ಮಸೇನೆ, ಸಸ್ಯಗಳಿಂದ ಹಸಿರು ದ್ವೀಪ ರಚನೆ ಮುಂತಾದವುಗಳು ಹರಿತ ಕೇರಳ ಮಿಷನ್ ನ ಶ್ರೇಷ್ಠವಾದ ಕಾರ್ಯ ಯೋಜನೆಯಾಗಿವೆ.

ಹರಿತ ಕೇರಳ ಮಿಷನ್

ಜನರಿಗೆ ಹವಾಗುಣ ವೈಪರೀತ್ಯದ ಕುರಿತು ಅರಿವು ಮೂಡಿಸಲು ಪೋಸ್ಟರ್ ತಯಾರಿಸಿ ತರಗತಿಯಲ್ಲಿ ಪ್ರದರ್ಶಿಸಿರಿ.




ನಾವು ಜೀವಿಸುವ ಸುಂದರವಾದ ಭೂಮಿ ಮತ್ತು ಸಂಪನ್ಮೂಲಗಳಲ್ಲಿ ಮುಂದಿನ ತಲೆಮಾರಿಗೂ ಅಧಿಕಾರವಿದೆ. ಹಾಗಾಗಿ ನಾವು ಈಗ ಉಪಯೋಗಿಸುತ್ತಿರುವ ಪ್ರಕೃತಿದತ್ತ ಸಂಪನ್ಮೂಲಗಳನ್ನು ಎಚ್ಚರಿಕೆಯಿಂದ ಬಳಸಬೇಕಾಗಿದೆ. ನಾವು ಪ್ರಕೃತಿಯೊಂದಿಗೆ ಜೀವನ ನಡೆಸಿಕೊಂಡು ಹವಾಗುಣ ವೈಪರೀತ್ಯವೆನ್ನುವ ವಿಪತ್ತು ಇಲ್ಲದಾಗಿಸಲು ಒಟ್ಟಾಗಿ ಹೋರಾಟ ಮಾಡೋಣ. ಹವಾಗುಣ ವೈಪರೀತ್ಯ ಕಡಿಮೆ ಮಾಡಲು ಪರಿಸರ ಸಂರಕ್ಷಣೆ ಮಾಡುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ. ನಮ್ಮ ಪರಿಸರದಿಂದಲೇ ಪರಿಸರ ಸಂರಕ್ಷಣೆಯ ಚಟುವಟಿಕೆಗಳನ್ನು ಆರಂಭಿಸೋಣ.

ನೀವು ಹವಾಮಾನ ವೈಪರೀತ್ಯವನ್ನು ಕಡಿಮೆಗೊಳಿಸಲು ಕೈಗೊಳ್ಳುವ ಪರಿಸರ ಸಂರಕ್ಷಣೆ ಚಟುವಟಿಕೆಗಳು ಯಾವುವು? ನಿಮ್ಮ ಸಲಹೆಗಳನ್ನು ತರಗತಿಯ ನೋಟೀಸ್ ಬೋರ್ಡಿನಲ್ಲಿ ಪ್ರದರ್ಶಿಸಿರಿ.

- ವಾತಾವರಣ ಮಾಲಿನ್ಯ ಕಡಿಮೆಗೊಳಿಸುವ
- ಅರಣ್ಯ ನಾಶ ತಡೆಯುವ
- ಪ್ಲಾಸ್ಟಿಕ್ ಬಳಕೆ ಕಡಿಮೆಗೊಳಿಸುವ
- ಸಾವಯವ ಗೊಬ್ಬರ ಉಪಯೋಗ ಹೆಚ್ಚಿಸುವ
-
-
-
-
-

## ಮುಂದುವರಿದ ಚಟುವಟಿಕೆ

1. ಕ್ಯಾಲೆಂಡರ್ ಗಮನಿಸುವ.

ಈ ವರ್ಷದ ಕ್ಯಾಲೆಂಡರ್ ನಿರೀಕ್ಷಿಸಿ ಕೆಳಗೆ ನೀಡಿರುವ ದಿನಾಂಕದಂದು ಸೂರ್ಯೋದಯ ಮತ್ತು ಸೂರ್ಯಾಸ್ತಮಾನ ಕಂಡುಹಿಡಿದು ಪಟ್ಟಿ ಪೂರ್ತಿಗೊಳಿಸಿರಿ.

| | ದಿನಾಂಕ / ತಿಂಗಳು | 19 | 20 | 21 | 22 | 23 |
|---|---|---|---|---|---|---|
| ಸೂರ್ಯೋದಯ | ಜೂನ್ | | | | | |
| | ಡಿಸೆಂಬರ್ | | | | | |
| ಸೂರ್ಯಾಸ್ತಮಾನ | ಜೂನ್ | | | | | |
| | ಡಿಸೆಂಬರ್ | | | | | |

ಪಟ್ಟಿಯಲ್ಲಿ ಸೂರ್ಯೋದಯ ಮತ್ತು ಸೂರ್ಯಾಸ್ತಮಾನವು ಒಂದೇ ರೀತಿಯಾಗಿದೆಯೇ? ನೀವು ರಾತ್ರಿ ಮತ್ತು ಹಗಲಿನ ಅವಧಿಯಲ್ಲಿ ಯಾವ ವ್ಯತ್ಯಾಸ ಗುರುತಿಸಿದ್ದೀರಾ? ನೀವು ಕಂಡುಹಿಡಿದ ಮಾಹಿತಿಯನ್ನು ನಿರೀಕ್ಷಣಾ ಡೈರಿಯಲ್ಲಿ ಬರೆಯಿರಿ.

2. ಸೂರ್ಯ, ಗ್ರಹಗಳು ಇತರ ಆಕಾಶಕಾಯಗಳು ಮುಂತಾದವುಗಳಿಗೆ ಸಂಬಂಧಿಸಿದ ವಾರ್ತೆಗಳು, ಚಿತ್ರಗಳನ್ನು ಸಂಗ್ರಹಿಸಿ ಆಲ್ಬಂ ತಯಾರಿಸಿರಿ.
3. ನಿರೀಕ್ಷಣಾ ಕ್ಯಾಲೆಂಡರ್ ತಯಾರಿಸಿರಿ.

ನಿಮ್ಮ ಪ್ರದೇಶದ ಪ್ರತಿಯೊಂದು ಋತುಗಳಲ್ಲಿ ಉಂಟಾಗುವ ಪ್ರಾಕೃತಿಕ ಬದಲಾವಣೆಗಳನ್ನು ಗಮನಿಸಿ ಪುಸ್ತಕದಲ್ಲಿ ಅನುಕ್ರಮವಾಗಿ ಬರೆಯಿರಿ. ಚಿತ್ರಗಳನ್ನು ಸೇರಿಸಿ ನಿರೀಕ್ಷಣಾ ಕ್ಯಾಲೆಂಡರ್ ಉತ್ತಮಗೊಳಿಸಿರಿ.

4. ನೀಡಿರುವ ಸೂಚನೆಯ ಆಧಾರದಲ್ಲಿ 'ಮರುಭೂಮಿಗಳ ಮತ್ತು ಧ್ರುವ ಪ್ರದೇಶಗಳ ಹವಾಗುಣ ಮತ್ತು ಜನಜೀವನ' ಎಂಬ ಶೀರ್ಷಿಕೆ ನೀಡಿ ಡಿಜಿಟಲ್ ಪ್ರೆಸೆಂಟೇಶನ್ ತಯಾರಿಸಿರಿ.

ಸೂಚನೆ

- ಆಹಾರ
- ವಸ್ತ್ರಧಾರಣೆ
- ಉದ್ಯೋಗ
- ಮನೆನಿರ್ಮಾಣ
- ಸಸ್ಯ ಜೀವಜಾಲಗಳು

5. ಸೌರವ್ಯೂಹದ ಕುರಿತಾಗಿ ಹೆಚ್ಚಿನ ಮಾಹಿತಿ ಸಂಗ್ರಹಿಸಿ ಯೋಗ್ಯವಾದ ಚಿತ್ರಗಳನ್ನು ಸೇರಿಸಿ ಸಂಚಿಕೆ ತಯಾರಿಸಿರಿ. ಸಂಚಿಕೆಗೆ ಸೂಕ್ತವಾದ ಶೀರ್ಷಿಕೆ ನೀಡುವಿರಲ್ಲವೇ?

# 11

# ಕಾನೂನುಗಳು ಮತ್ತು ಸಮಾಜ



ಚಿತ್ರವನ್ನು ನಿರೀಕ್ಷಿಸಿರಿ.

ಗೆಳೆಯರೆಲ್ಲರೂ ಸೇರಿ 'ಕೆರೆ - ದಡ' ಆಟವನ್ನು ಆಡುವ ಚಿತ್ರವನ್ನು ನೀಡಲಾಗಿದೆ. ಈ ಆಟವನ್ನು ನೀವು ಆಡಿರುವಿರಾ? ನಾವೊಮ್ಮೆ ಆಡಿ ನೋಡೋಣವೇ?

'ಕೆರೆ - ದಡ' ಆಟದ ನಿಬಂಧನೆಗಳೇನು?

-
-

ಎಲ್ಲಾ ಆಟಗಳಿಗೂ ಕೆಲವು ನಿಬಂಧನೆಗಳಿರುವುದಲ್ಲವೇ.

ನೀವು ಆಡುವ ಆಟಗಳಲ್ಲಿ ನಿಬಂಧನೆಯನ್ನು ಯಾರಾದರೂ ಪಾಲಿಸದಿದ್ದಲ್ಲಿ ಅವರಿಗೆ ಆಟದಲ್ಲಿ ಮುಂದುವರಿಯಬಹುದೇ?

ಹಾಗೆಯೇ, ಶಾಲೆಯ ಸುಗಮವಾದ ನಿರ್ವಹಣೆಗೆ ಕೆಲವು ನಿಬಂಧನೆಗಳು ಮತ್ತು ಸೂಚನೆಗಳನ್ನು ನಾವು ಪಾಲಿಸಬೇಕಲ್ಲವೇ. ಅವುಗಳು ಯಾವುದೆಲ್ಲಾ?

- ಸಮಯವನ್ನು ಪಾಲಿಸುವುದು
- ಶಾಲಾ ಸಮವಸ್ತ್ರ ಧರಿಸುವುದು
-
-

ಇವುಗಳನ್ನು ಪಾಲಿಸದಿದ್ದರೆ ಏನಾಗುವುದು?

**ಶಾಲೆಯಲ್ಲಿ ಪಾಲಿಸಬೇಕಾದ ನಿಬಂಧನೆಗಳು ಮತ್ತು ಸೂಚನೆಗಳನ್ನು ಗುಂಪಾಗಿ ರಚಿಸಿ ಚಾರ್ಟಿನಲ್ಲಿ ಬರೆದು ತರಗತಿಯಲ್ಲಿ ಪ್ರದರ್ಶಿಸಿರಿ.**

## ಕಾನೂನು ಎಂದರೇನು?

ಶಾಲೆಯಲ್ಲಿ ನಿಬಂಧನೆಗಳನ್ನು ಮತ್ತು ಸೂಚನೆಗಳನ್ನು ಪಾಲಿಸುವಂತೆ, ಸಮಾಜದ ಅಸ್ತಿತ್ವಕ್ಕೆ ಕೆಲವು ನಿಬಂಧನೆಗಳು ಮತ್ತು ಸೂಚನೆಗಳನ್ನು ಪಾಲಿಸುವುದು ಅತಿ ಅಗತ್ಯವಾಗಿದೆ.

**ಕಾನೂನು ಎನ್ನುವುದು ಸಮಾಜದ ಅಸ್ತಿತ್ವಕ್ಕೆ ಮತ್ತು ಸುಗಮವಾದ ಕಾರ್ಯನಿರ್ವಹಣೆಗಾಗಿ ವಿಧಿಸಿ, ಅಂಗೀಕರಿಸಲ್ಪಟ್ಟ ನಿಯಂತ್ರಣಗಳು ಮತ್ತು ನಿಬಂಧನೆಗಳಾಗಿವೆ.**

ಮನುಷ್ಯರು ಸಾಮಾಜಿಕ ಜೀವಿಗಳಾಗಿದ್ದಾರೆ. ಸಮಾಜದಲ್ಲಿ ಪ್ರತಿಯೊಬ್ಬ ವ್ಯಕ್ತಿಗೂ ಉತ್ತಮ ಜೀವನ ಮತ್ತು ಸಂರಕ್ಷಣೆಯನ್ನು ಖಾತರಿಪಡಿಸಲು ಕಾನೂನುಗಳು ಅತಿ ಅಗತ್ಯವಾಗಿವೆ. ಕಾನೂನುಗಳು ಸಮಾಜದ ಪ್ರತಿಯೊಬ್ಬರ ನೆಮ್ಮದಿಗೆ ಇರುವುದಾಗಿದೆ.

ಒಂದು ಸಾಮಾಜಿಕ ಗುಂಪಿಗೆ ಅದರ ಸದಸ್ಯರಾದ ವ್ಯಕ್ತಿಗಳ ಸ್ವಭಾವ, ನಡವಳಿಕೆ, ಆಸಕ್ತಿ, ಸ್ವಾತಂತ್ರ್ಯ, ಹಕ್ಕುಗಳಂತಹ ಕೆಲವು ನಿಬಂಧನೆಗಳು ಮತ್ತು ನಿಯಂತ್ರಣಗಳು ಅಗತ್ಯವಾಗಿವೆ. ವೈಯಕ್ತಿಕ ಹಿತಾಸಕ್ತಿಗಳನ್ನು ಸಂರಕ್ಷಿಸುವುದರೊಂದಿಗೆ ಸಾರ್ವಜನಿಕ ಹಿತಾಸಕ್ತಿಗಳನ್ನು ಪರಿಗಣಿಸಬೇಕಾಗಿದೆ. ಇಂತಹ ಸಂದರ್ಭಗಳಲ್ಲಿ ಸಮಾಜದಲ್ಲಿ ಕೆಲವು ಕ್ರಮಗಳು ಅಗತ್ಯವಾಗಿ ಬರುವುದು. ಈ ಕೆಲಸವನ್ನು ಕಾನೂನುಗಳು ಮಾಡುವುದು.

ಸಮಾಜದಲ್ಲಿ ಕಾನೂನುಗಳನ್ನು ಪಾಲಿಸದೆ ಇದ್ದಲ್ಲಿ ಏನಾಗುವುದು?

ಕಾನೂನುಗಳನ್ನು ಪಾಲಿಸದೆ ಇದ್ದಲ್ಲಿ ಸಂಘರ್ಷಗಳು ಉಂಟಾಗುವುದು. ಇದು ಸಮಾಜದ ಉಳಿವಿಗೆ ಅಪಾಯಕಾರಿಯಾಗಿ ಪರಿಣಮಿಸುವುದು. ಆದುದರಿಂದ, ಕಾನೂನುಗಳನ್ನು ಪಾಲಿಸದೆ ಇರುವುದು ಶಿಕ್ಷಾರ್ಹವಾಗಿದೆ.

ಕಾನೂನುಗಳು ಮುಖ್ಯವಾಗಿ ಎರಡು ರೀತಿಯಲ್ಲಿ ರಚನೆಯಾಗುತ್ತವೆ.

- ಸಾಮಾಜಿಕ ರೂಢಿಗಳ ಮೂಲಕ ರಚನೆಯಾದ ಕಾನೂನುಗಳು
- ವ್ಯವಸ್ಥೆಗಳ ಮೂಲಕ ರಚನೆಯಾದ ಕಾನೂನುಗಳು

ಪ್ರಾಚೀನ ಸಮಾಜದಲ್ಲಿ ನೆಲೆನಿಂತಿದ್ದ ಕಾನೂನುಗಳೆಲ್ಲ ರೂಢಿಯ ಮೂಲಕ ರಚನೆಯಾದವುಗಳಾಗಿವೆ.

**ಸಾಮಾಜಿಕ ರೂಢಿಗಳು**
(Social Norms)

**ಸಾಮಾಜಿಕ ರೂಢಿಗಳು ಎಂಬುದು ಒಂದು ನಿರ್ದಿಷ್ಟ ಸಮುದಾಯದಲ್ಲಿ, ಸಂಸ್ಕೃತಿಯಲ್ಲಿ ಸ್ವೀಕಾರಕ್ಕೆ ಅರ್ಹವಾದ ನಂಬಿಕೆಗಳು ಮನೋಭಾವಗಳು, ನಡವಳಿಕೆಗಳು ಎಂಬಿವುಗಳ ಅಲಿಖಿತ ಕಾನೂನುಗಳಾಗಿವೆ.**

ಸಾಮಾನ್ಯವಾಗಿ ಇವುಗಳನ್ನು ಬರೆದಿರುವುದಿಲ್ಲ. ಸಾಮಾಜಿಕ ರೂಢಿಗಳು ಮತ್ತು ಆಚರಣೆಗಳ ಮೂಲಕ ಅವುಗಳನ್ನು ಅಳವಡಿಸುತ್ತಿದ್ದರು. ಸಾಮಾಜಿಕ ಕ್ರಮಗಳ ಭಾಗವಾಗಿ ಇದ್ದಂತಹ ಹೆಚ್ಚಿನ ಕಾನೂನುಗಳು ಬಳಿಕ ಕಾಲಕ್ಕೆ ತಕ್ಕಂತೆ ಬದಲಾಗಿವೆ ಮತ್ತು ಪರಿಷ್ಕರಿಸಲ್ಪಟ್ಟಿವೆ.

ನಿತ್ಯಜೀವನದಲ್ಲಿ ನಮಗೆ ಪರಿಚಿತವಾದ ಕಾನೂನುಗಳು ಯಾವುದೆಲ್ಲಾ?

- ಸಂಚಾರಿ ಕಾನೂನುಗಳು
- ಶಿಕ್ಷಣ ಹಕ್ಕು ಕಾಯ್ದೆ
- ಮಕ್ಕಳ ಹಕ್ಕುಗಳ ಕಾಯ್ದೆ
- 
- 

ಈ ಕಾನೂನುಗಳು ಹೇಗೆ ರಚನೆಯಾದುವು?

ಆಧುನಿಕ ಕಾಲಘಟ್ಟದಲ್ಲಿ ಪ್ರತಿ ಸರಕಾರಗಳು ಶಾಸಕಾಂಗದ ಮೂಲಕ ದೇಶಕ್ಕೆ ಅಗತ್ಯವಾದ ಕಾನೂನುಗಳನ್ನು ರಚಿಸುವುದು.

ಸರಕಾರದ ಮುತುವರ್ಜಿಯಿಂದ ರಚನೆಯಾಗುವ ಕಾನೂನುಗಳಿಗೆ ಹೊರತಾಗಿ ಪ್ರಬಲವಾದ ಸಾರ್ವಜನಿಕ ಅಭಿಪ್ರಾಯಗಳನ್ನು ಪಡೆದು ಶಾಸಕಾಂಗವು ಕಾನೂನುಗಳನ್ನು ರಚಿಸುವುದು.

ಕೆಲವು ಬಾರಿ ನ್ಯಾಯಾಲಯದ ತೀರ್ಪುಗಳು, ವ್ಯಾಖ್ಯಾನಗಳು, ಸೂಚನೆಗಳು ಕಾನೂನುಗಳ ರಚನೆಗೆ ಕಾರಣವಾಗುವುದು. ಹೀಗೆ ನ್ಯಾಯಾಲಯದ ಮಧ್ಯಪ್ರವೇಶದಿಂದಲೂ ಕಾನೂನುಗಳು ರಚನೆಯಾಗುವುದು.

**ರಾಷ್ಟ್ರ**

**ರಾಷ್ಟ್ರ ಎಂಬುದು ನಿರ್ದಿಷ್ಟ ಪ್ರದೇಶದಲ್ಲಿ ಒಂದು ಆಡಳಿತದ ಅಡಿಯಲ್ಲಿ ಬದುಕುವ ಸಂಘಟಿತ ಸಮಾಜ ಎಂದು ಅರ್ಥೈಸಬಹುದು. ಜನಸಂಖ್ಯೆ, ಭೂಪ್ರಕೃತಿ, ಸರಕಾರ, ಪರಮಾಧಿಕಾರ ಎಂಬಿವುಗಳು ರಾಷ್ಟ್ರದ ಘಟಕಗಳಾಗಿವೆ.**



**ಭಾರತೀಯ ಪಾರ್ಲಿಮೆಂಟ್**



**ಕೇರಳ ವಿಧಾನಸಭೆ**

**ಕಾನೂನುಗಳು ಹೇಗೆ ರಚನೆಯಾಗುವುದು ಎಂದು ತಿಳಿದಿರಲ್ಲವೇ. ವಿವಿಧ ರೀತಿಗಳಲ್ಲಿ ರಚನೆಯಾದ ಕಾನೂನುಗಳಿಗೆ ಉದಾಹರಣೆಗಳನ್ನು ಕಂಡುಕೊಂಡು ಪಟ್ಟಿಮಾಡಿರಿ.**

## ನಿಲ್ಲಿರಿ... ನೋಡಿರಿ... ಚಲಿಸಿರಿ...



(1)



(2)



(3)




(4)



(5)



(6)



(7)



(8)



(9)

ರಸ್ತೆ ಸುರಕ್ಷತೆಗೆ ಸಂಬಂಧಿಸಿದ ಈ ಚಿತ್ರಗಳು ಏನನ್ನು ಸೂಚಿಸುವುದು ಎಂದು ಕಂಡುಹಿಡಿದು ಬರೆಯಿರಿ.

| | | |
|---|---|---|
| (1) ಸೈಕಲ್ ಸವಾರಿ ಮಾಡಬಾರದು | (2) .................... | (3) .................... |
| (4) .................... | (5) .................... | (6) .................... |
| (7) ಸೀಟ್ ಬೆಲ್ಟ್ ಧರಿಸಿರಿ | (8) .................... | (9) .................... |

ದೈನಂದಿನ ಜೀವನದಲ್ಲಿ ಇಂತಹ ಚಿಹ್ನೆಗಳು ಸೂಚಿಸುವ ನಿಯಮಗಳನ್ನು ಪಾಲಿಸುವುದು ಅತಿ ಅಗತ್ಯವಾಗಿದೆ. ರಸ್ತೆ ಸುರಕ್ಷಾ ನಿಯಮಗಳು ರಸ್ತೆ ಸಂಚಾರವನ್ನು ಸುಗಮಗೊಳಿಸುವುದಕ್ಕೆ ಮತ್ತು ಅಪಘಾತ ರಹಿತವನ್ನಾಗಿಸಲು ರೂಪಿಸಿದ ನಿಯಮಗಳಾಗಿವೆ. ಪಾದಚಾರಿಗಳು ಮತ್ತು ವಾಹನ ಚಾಲಕರು

ಈ ನಿಯಮಗಳನ್ನು ಪಾಲಿಸಲು ಜವಾಬ್ದಾರರಾಗಿರುತ್ತಾರೆ. ರಸ್ತೆ ನಿಯಮಗಳನ್ನು ಅನುಸರಿಸುವ ಮೂಲಕ ಸ್ವ ಸುರಕ್ಷೆ ಮತ್ತು ಇತರರ ಸುರಕ್ಷತೆಯನ್ನು ಖಾತರಿಪಡಿಸಲು ಸಾಧ್ಯವಾಗುವುದು.

**ರಸ್ತೆ ಸುರಕ್ಷಾ ನಿಯಮಗಳ ಕುರಿತು ಅರಿವು ಮೂಡಿಸುವುದಕ್ಕಾಗಿ ಪ್ಲಕಾರ್ಡುಗಳು, ಘೋಷ ವಾಕ್ಯಗಳನ್ನು ತಯಾರಿಸಿ ರಸ್ತೆ ಸುರಕ್ಷಾ ದಿನದಂದು ಮೆರವಣಿಗೆ ಆಯೋಜಿಸಿರಿ.**







## ಪಾದಚಾರಿಗಳ ಗಮನಕ್ಕೆ

- ನಮ್ಮ ದೇಶದಲ್ಲಿ ವಾಹನಗಳು ರಸ್ತೆಯ ಎಡಭಾಗದಲ್ಲಿ ಸಂಚರಿಸುತ್ತವೆ. ರಸ್ತೆಯ ಬಲಭಾಗದಲ್ಲಿ ನಡೆದರೆ ಎದುರಿನಿಂದ ಬರುವ ವಾಹನಗಳನ್ನು ಸ್ಪಷ್ಟವಾಗಿ ಕಾಣಬಹುದು. ಎಡಭಾಗದಲ್ಲಿ ನಡೆಯುವುದಾದರೆ ಹಿಂದಿನಿಂದ ಬರುವ ವಾಹನಗಳನ್ನು ನಮಗೆ ಕಾಣಲು ಸಾಧ್ಯವಿಲ್ಲ. ಇದು ಅಪಘಾತ ಸಾಧ್ಯತೆಯನ್ನು ಹೆಚ್ಚಿಸುವುದು.
- ರಸ್ತೆಯ ಬದಿಯಲ್ಲಿ ಪಾದಚಾರಿಮಾರ್ಗ ಇದ್ದಲ್ಲಿ ಅದರ ಮೂಲಕ ನಡೆಯಿರಿ. ಪಾದಚಾರಿಮಾರ್ಗ ಇಲ್ಲವಾದಲ್ಲಿ ರಸ್ತೆಯ ಬಲಭಾಗದಲ್ಲಿ ಮಾತ್ರ ನಡೆಯಿರಿ.
- ರಸ್ತೆ ಬದಿಯಲ್ಲಿ ಇಬ್ಬರಿಗಿಂತ ಹೆಚ್ಚು ಮಂದಿ ಜೊತೆಯಾಗಿ ನಡೆಯಬಾರದು.
- ಕಾಲ್ನಡಿಗೆ ನಿಷೇಧಿಸಿದ ಪ್ರದೇಶಗಳಲ್ಲಿ ನಡೆಯಬಾರದು.



- ಮೊಬೈಲ್ ಫೋನ್, ಹೆಡ್ ಸೆಟ್ ಎಂಬಿವುಗಳನ್ನು ಬಳಸಿಕೊಂಡು ರಸ್ತೆಯಲ್ಲಿ ನಡೆಯಬಾರದು.
- ಮೊದಲು ಬಲಭಾಗಕ್ಕೆ, ನಂತರ ಎಡಭಾಗಕ್ಕೆ ನೋಡಿ ವಾಹನಗಳಿಲ್ಲ ಎಂದು ಖಚಿತಪಡಿಸಿದ ಬಳಿಕ ಮಾತ್ರ ರಸ್ತೆಯನ್ನು ದಾಟಬೇಕು. ಜೀಬ್ರಾ ಕ್ರಾಸಿಂಗ್ ಇರುವಲ್ಲಿ ಅದರ ಮೂಲಕವೇ ರಸ್ತೆ ದಾಟಬೇಕು.



- ಸಿಗ್ನಲ್‌ಗಳು ಇರುವಲ್ಲಿ ಪಾದಚಾರಿಗಳಿಗೆ ದಾಟಲು ಇರುವ ಹಸಿರು ಬಣ್ಣದ ಸಿಗ್ನಲ್ ಬೆಳಗಿ

ಸೂಚನೆ ಲಭಿಸುವವರೆಗೆ ನಿಲ್ಲಿರಿ.

- ಪಾದಚಾರಿಗಳಿಗಾಗಿ ನಿರ್ಮಿಸಿದ ಪಾದಚಾರಿ ಮೇಲ್ಸೇತುವೆ (Foot Over Bridge), ಸ್ಕೈವಾಕ್, ಅಂಡರ್ ಪಾಸ್ ಎಂಬಿವುಗಳಿದ್ದರೆ ಅದನ್ನೇ ಬಳಸಿರಿ.



ಪಾದಚಾರಿಗಳಿಗಿರುವ ಸುರಕ್ಷತಾ ಸೂಚನೆಗಳನ್ನು ವಿವಿಧ ಗುಂಪುಗಳಲ್ಲಿ ರೋಲ್ ಪ್ಲೇ ಮಂಡಿಸಿರಿ.

## ಸೈಬರ್ ಲೋಕ ಮತ್ತು ಕಾನೂನುಗಳು

ಸೈಬರ್ ವಂಚನೆ; ವಿದೇಶಿಪ್ರಜೆಯ ಬಂಧನ

ನಕಲಿ ವಿಡಿಯೋ ಕಾಲ್: ಸ್ನೇಹಿತನ ಮುಖ ತೋರಿಸಿ ಹಣ ಸುಲಿಗೆ



ಆನ್ಲೈನ್ ವ್ಯವಹಾರ ನಡೆಸುವವರಿಗೆ ಲಕ್ಕಿ ಕೂಪನ್ ಕಳುಹಿಸಿ ವಂಚನೆ ; ಎಚ್ಚರಿಕೆ ಪಾಲಿಸಿರಿ

ಸಾಮಾಜಿಕ ಜಾಲತಾಣದಲ್ಲಿ ನಕಲಿ ಪ್ರೊಫೈಲ್ ಬಳಸಿ ಹಣಕಾಸು ವಂಚನೆ

ಪತ್ರಿಕಾ ವಾರ್ತೆಗಳ ಶೀರ್ಷಿಕೆಗಳನ್ನು ಓದಿದಿರಲ್ಲವೇ.

ಸಾಮಾಜಿಕ ಜಾಲತಾಣಗಳ ಮೂಲಕ ಎಷ್ಟೊಂದು ವಂಚನೆಗಳು ನಡೆಯುತ್ತವಲ್ಲವೇ. ಇವುಗಳನ್ನು ನಿಯಂತ್ರಿಸಲು ಕಾನೂನುಗಳಿವೆಯೇ?

ಇಂಟರ್ ನೆಟ್ ಗೇಮ್ ಗಳು, ಮೊಬೈಲ್ ಆಪ್ ಗಳು, ಆನ್ಲೈನ್ ಸೇವೆಗಳು ಎಂಬಿವುಗಳಲ್ಲಿ ಧಾರಾಳ ವಂಚನೆಗಳು ನಡೆಯುವುದು. ಇಂತಹ

### ಮಾಹಿತಿ ತಂತ್ರಜ್ಞಾನ ಕಾಯ್ದೆ 2000

ಇದು ಮಾಹಿತಿ ತಂತ್ರಜ್ಞಾನದ ಉಪಯೋಗದ ಮೂಲಕ ನಡೆಯುವ ವ್ಯವಹಾರಗಳಿಗೆ ಕಾನೂನು ಪ್ರಕಾರದ ಮಾನ್ಯತೆ ಮತ್ತು ಭದ್ರತೆಯನ್ನು ಖಾತರಿಪಡಿಸುವುದಕ್ಕಾಗಿ ಜಾರಿಗೆ ಬಂದಿದೆ. ಈ ಕಾನೂನಿನಲ್ಲಿ ಸೈಬರ್ ಅಪರಾಧಗಳಲ್ಲಿ ತೊಡಗುವವರಿಗೆ ಕಠಿಣ ಶಿಕ್ಷೆಯನ್ನು ವಿಧಿಸಲಾಗುವುದು.

ಸಂದರ್ಭಗಳಲ್ಲಿ ಸುರಕ್ಷತೆ ಲಭಿಸುವುದಕ್ಕಾಗಿ 'ಮಾಹಿತಿ ತಂತ್ರಜ್ಞಾನ ಕಾಯ್ದೆ 2000' ಎಂಬ ಕಾನೂನನ್ನು ರೂಪಿಸಲಾಗಿದೆ. ಹೀಗೆ ಜನರ ಸುರಕ್ಷತೆಗಾಗಿ ಹಲವು ರೀತಿಯ ಕಾನೂನುಗಳಿವೆ.

ನಿಮಗೆ ಪರಿಚಿತವಾದ ಕಾನೂನುಗಳನ್ನು ಕಂಡುಕೊಂಡು ಪಟ್ಟಿಯನ್ನು ಪೂರ್ತಿಗೊಳಿಸಿರಿ.

| ಕಾನೂನುಗಳು | ಉದ್ದೇಶಗಳು |
|---|---|
| • ಮಾಹಿತಿ ಹಕ್ಕು ಕಾಯ್ದೆ (2005) | • ಸಾರ್ವಜನಿಕರಿಗೆ ಮಾಹಿತಿಗಳನ್ನು ತಿಳಿಯಲಿರುವ ಹಕ್ಕು ಖಾತರಿಪಡಿಸುವುದು. |
| • | • |
| • | • |

ರಸ್ತೆ ನಿಯಮ, ಸೈಬರ್ ಕಾನೂನು ಮೊದಲಾದವುಗಳು ಸಮಾಜದ ಎಲ್ಲಾ ಜನರ ಸುರಕ್ಷತೆಯ ಉದ್ದೇಶವನ್ನು ಹೊಂದಿದೆ. ಆದರೆ ಕೆಲವು ಕಾನೂನುಗಳು ಪ್ರತ್ಯೇಕ ವಿಭಾಗದವರ ಸುರಕ್ಷತೆಗಾಗಿ ಇರುವವುಗಳಾಗಿವೆ.

## ಮಕ್ಕಳು ಮತ್ತು ಹಕ್ಕುಗಳು




ಪತ್ರಿಕಾ ವರದಿಗಳ ಶೀರ್ಷಿಕೆಗಳ ಕೊಲಾಷ್ ಗಮನಿಸಿರಿ. ಇದರಲ್ಲಿ ಯಾವೆಲ್ಲಾ ಕಾನೂನುಗಳನ್ನು ಸೂಚಿಸಲಾಗಿದೆ?

- ಬಾಲಕಾರ್ಮಿಕ ನಿಷೇಧ ಕಾಯ್ದೆ
-
-
-

ಸುರಕ್ಷಿತವಾದ ಬಾಲ್ಯ ಪ್ರತಿ ಮಗುವಿನ ಹಕ್ಕು ಆಗಿದೆ. ಭಾರತದ ಸಂವಿಧಾನವು ಮಕ್ಕಳ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು ಕೆಲವು ಹಕ್ಕುಗಳನ್ನು ಖಾತರಿಪಡಿಸುತ್ತದೆ. ಇದಲ್ಲದೆ ಮಕ್ಕಳ ಹಕ್ಕುಗಳನ್ನು ಸಂರಕ್ಷಿಸುವುದಕ್ಕಾಗಿ ಹಲವಾರು ಕಾನೂನುಗಳು ಮತ್ತು ಸಂಸ್ಥೆಗಳಿವೆ.

**ಬಾಲಕಾರ್ಮಿಕ ನಿಷೇಧ ಕಾಯ್ದೆ 1986**

**14 ವರ್ಷಕ್ಕಿಂತ ಕೆಳಗಿನ ಮಕ್ಕಳನ್ನು ಕೆಲಸಕ್ಕೆ ನೇಮಿಸುವುದು ಅಪರಾಧವಾಗಿದೆ.**

### ಶಿಕ್ಷಣ ಹಕ್ಕು ಕಾಯ್ದೆ 2009

6 ರಿಂದ 14 ವರ್ಷದ ವರೆಗಿನ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯವಾಗಿ ಪ್ರಾಥಮಿಕ ಶಿಕ್ಷಣವನ್ನು ಖಾತರಿಪಡಿಸುವುದು.

### ಮಕ್ಕಳ ಹಕ್ಕು ಸಂರಕ್ಷಣ ಆಯೋಗ

ಮಕ್ಕಳ ಹಕ್ಕುಗಳನ್ನು ಸಂರಕ್ಷಿಸುವುದಕ್ಕಾಗಿ ರಾಷ್ಟ್ರೀಯ ಮಟ್ಟದಲ್ಲಿ ರಾಷ್ಟ್ರೀಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ ಮತ್ತು ರಾಜ್ಯಮಟ್ಟದಲ್ಲಿ ರಾಜ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ ಕಾರ್ಯನಿರ್ವಹಿಸುತ್ತದೆ.

ಮಕ್ಕಳ ಹಕ್ಕು ಸಂರಕ್ಷಣೆಗೆ ಸಂಬಂಧಿಸಿ 'ಬಾಲಸಭೆ'ಯಲ್ಲಿ ಮಂಡಿಸಲು ಒಂದು ಭಾಷಣವನ್ನು ಬರೆಯಿರಿ.

### ಬಾಲಾಪರಾಧಿ ಕಾಯ್ದೆ 2015

ಬಾಲಾಪರಾಧಿ ಕಾಯ್ದೆಯು ಮಕ್ಕಳ ಸುರಕ್ಷಿತ ಬಾಲ್ಯವನ್ನು ಖಾತರಿಪಡಿಸುವುದಕ್ಕಾಗಿ 2015 ರಲ್ಲಿ ಜಾರಿಗೆ ಬಂತು. ಮಕ್ಕಳಿಗೆ ಕಿರುಕುಳ ನೀಡುವುದು, ನಿರ್ಲಕ್ಷಿಸುವುದು, ಭಿಕ್ಷಾಟನೆಗೆ ಮಕ್ಕಳನ್ನು ಬಳಸುವುದು, ಜೀತಕ್ಕೆ ಇರಿಸುವುದು, ಮಾದಕ ವಸ್ತುಗಳನ್ನು ನೀಡುವುದು ಮತ್ತು ಅದರ ಮಾರಾಟಕ್ಕಾಗಿ ಮಕ್ಕಳನ್ನು ಬಳಸುವುದು ಮೊದಲಾದವುಗಳು ಈ ಕಾನೂನಿನ ಅನುಸಾರ ಶಿಕ್ಷಾರ್ಹವಾಗಿದೆ.
ಇಂತಹ ಹಕ್ಕು ಉಲ್ಲಂಘನೆಗಳು ಉಂಟಾದಲ್ಲಿ ರಾಜ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗಕ್ಕೆ ದೂರು ನೀಡಬಹುದಾಗಿದೆ.



ನವೆಂಬರ್ 20 ವಿಶ್ವ ಮಕ್ಕಳ ಹಕ್ಕು ಸಂರಕ್ಷಣಾ ದಿನ




ಜೂನ್ 12 ಬಾಲಕಾರ್ಮಿಕ ವಿರೋಧಿ ದಿನ

ಚೈಲ್ಡ್ ಹೆಲ್ಪ್ ಲೈನ್ ನಂಬರ್ : 1098

### ಪೋಕ್ಸೋ ಕಾಯ್ದೆ 2012
### (Protection of Children from Sexual Offences Act 2012)

ಪೋಕ್ಸೋ ಕಾಯ್ದೆ (ಲೈಂಗಿಕ ಅಪರಾಧಗಳಿಂದ ಮಕ್ಕಳ ಸಂರಕ್ಷಣ ಕಾನೂನು 2012) ಲಿಂಗ ವ್ಯತ್ಯಾಸವಿಲ್ಲದೆ ಮಕ್ಕಳಿಗೆದುರಾದ ಲೈಂಗಿಕ ದೌರ್ಜನ್ಯದಿಂದ ಅವರನ್ನು ಸಂರಕ್ಷಿಸುವುದಕ್ಕಾಗಿ ಜಾರಿಗೆ ಬಂತು. ಅಂತಾರಾಷ್ಟ್ರೀಯ ಮಟ್ಟದಲ್ಲಿ 1989 ರಲ್ಲಿ ನಡೆದ ಮಕ್ಕಳ ಹಕ್ಕುಗಳ ಸಮಾವೇಶದ ನಿರ್ಣಯಗಳನ್ನು ಅಂಗೀಕರಿಸುವ ಮೂಲಕ ಭಾರತ ಸರಕಾರ ಈ ಕಾಯ್ದೆಯನ್ನು ಜಾರಿಗೊಳಿಸಿತು.



ಮಕ್ಕಳ ಹಕ್ಕು ಸಂರಕ್ಷಣೆಯ ಸಂದೇಶ ನೀಡುವ ಪೋಸ್ಟರುಗಳನ್ನು ತಯಾರಿಸಿರಿ.










## ಕಾನೂನಿನ ಆಡಳಿತ

ನಾವು ವಿವಿಧ ರೀತಿಯ ಕಾನೂನುಗಳನ್ನು ತಿಳಿದೆವಲ್ಲವೇ? ನಮ್ಮ ಸಾಮಾಜಿಕ ಜೀವನವು ಈ ಕಾನೂನುಗಳನ್ನು ಪಾಲಿಸುವುದರಿಂದ ಸುಗಮವಾಗಿ ಮುಂದುವರಿಯುತ್ತದೆ. ಕಾನೂನಿನ ಮುಂದೆ ಪ್ರಜೆಗಳೆಲ್ಲರೂ ಸಮಾನರು. ಕಾನೂನಿನ ಆಡಳಿತವೆಂದರೆ ಕಾನೂನು ಖಾತರಿಪಡಿಸುವ ಸಮಾನ ಸಂರಕ್ಷಣೆಯನ್ನು ಅನುಭವಿಸಿ ಅದಕ್ಕೆ ವಿಧೇಯರಾಗಿ ಜೀವಿಸುವುದಾಗಿದೆ.

## ವಿವಾದಗಳ ಪರಿಹಾರ ವ್ಯವಸ್ಥೆಗಳು

ನಿಮ್ಮ ಶಾಲೆಯಲ್ಲಿ ಯಾವುದಾದರೂ ರೂಪದಲ್ಲಿ ಕಾನೂನಿನ ಉಲ್ಲಂಘನೆ ನಡೆದಲ್ಲಿ ಅದನ್ನು ಪರಿಹರಿಸುವುದಕ್ಕಾಗಿ ಯಾರನ್ನು ಸಂಪರ್ಕಿಸುವಿರಿ?

- 
- 

ಸಮಾಜದಲ್ಲಿ ವಿವಾದಗಳು, ಸಂಘರ್ಷಗಳು ಉಂಟಾಗುವಾಗ ಕಾನೂನಿನ ಆಡಳಿತವನ್ನು ಖಾತರಿಪಡಿಸಲು, ಅವುಗಳಿಗೆ ಪರಿಹಾರ ಕಾಣಲು ಯಾವೆಲ್ಲಾ ವ್ಯವಸ್ಥೆಗಳ ಸಹಾಯ ಪಡೆಯುತ್ತೇವೆ?

- ಸ್ಥಳೀಯಾಡಳಿತ ಸಂಸ್ಥೆಗಳ ಜಾಗೃತಿ ಸಮಿತಿಗಳು
- 
- 

ಕಾನೂನು ಸುವ್ಯವಸ್ಥೆ ಕಾಪಾಡುವುದು ಪೊಲೀಸರ ಕರ್ತವ್ಯ. ವಿವಾದಗಳನ್ನು ಪರಿಹರಿಸಲು ಮತ್ತು ಶಿಕ್ಷೆಯನ್ನು ವಿಧಿಸಲು ನ್ಯಾಯಾಲಯಗಳಿಗೆ ಅಧಿಕಾರವಿದೆ.

ನ್ಯಾಯಾಲಯಗಳ ಕುರಿತು ನೀಡಿರುವ ಮಾಹಿತಿಗಳನ್ನು ಗಮನಿಸಿರಿ.



**ಸುಪ್ರೀಂ ಕೋರ್ಟ್**

**ಸುಪ್ರೀಂ ಕೋರ್ಟ್ ಭಾರತದ ಪರಮೋಚ್ಚ ನ್ಯಾಯಾಲಯವಾಗಿದೆ. ಸುಪ್ರೀಂ ಕೋರ್ಟ್ ನವದೆಹಲಿಯಲ್ಲಿದೆ.**



**ಕೇರಳ ಹೈಕೋರ್ಟ್**

**ಹೈಕೋರ್ಟ್ ರಾಜ್ಯದ ಅತ್ಯುನ್ನತ ನ್ಯಾಯಾಲಯವಾಗಿದೆ. ಕೇರಳದ ಹೈಕೋರ್ಟ್ ಎರ್ನಾಕುಳಂನಲ್ಲಿದೆ.**

ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್‌ಗಳಲ್ಲದೆ, ಇತರ ಹಲವಾರು ಕೋರ್ಟುಗಳು ನಮ್ಮ ದೇಶದಲ್ಲಿ ಕಾರ್ಯವೆಸಗುತ್ತಿವೆ. ವಿವಿಧ ಶ್ರೇಣಿಯ ಕೋರ್ಟುಗಳನ್ನು ಗಮನಿಸಿರಿ.




ಕಾನೂನುಗಳ ಪರಮಾಧಿಕಾರವನ್ನು ಖಾತರಿಪಡಿಸುವುದು ನ್ಯಾಯಾಲಯಗಳ ಜವಾಬ್ದಾರಿಯಾಗಿದೆ. ನಾವು ಕಾನೂನನ್ನು ಪಾಲಿಸುವುದರಿಂದ ನೆಮ್ಮದಿಯ ಜೀವನ ಸಾಧ್ಯವಾಗುವುದು. ಇದನ್ನು ತಿಳಿದು ಕಾರ್ಯವೆಸಗಬೇಕಾದುದು ನಮ್ಮೆಲ್ಲರ ಕರ್ತವ್ಯವಾಗಿದೆ.

**ಮಕ್ಕಳಿಗೆ ಸಂಬಂಧಿಸಿದ ಕಾನೂನುಗಳ ಕುರಿತು ಕಾನೂನು ತಜ್ಞರೊಂದಿಗೆ ಸಂದರ್ಶನ ನಡೆಸಿ ಮಾಹಿತಿಗಳನ್ನು ಸಂಗ್ರಹಿಸಿ ಟಿಪ್ಪಣಿ ತಯಾರಿಸಿರಿ.**

## ಮುಂದುವರಿದ ಚಟುವಟಿಕೆಗಳು

1. ಸಮಾಜವಿಜ್ಞಾನ ಕ್ಲಬ್‌ನ ನೇತೃತ್ವದಲ್ಲಿ 'ರಸ್ತೆ ಸುರಕ್ಷಾ ಸಪ್ತಾಹ'ವನ್ನು ಆಚರಿಸಿರಿ.
2. ತರಗತಿಯಲ್ಲಿ ಚೈಲ್ಡ್ ಲೈನ್ ಕಾರ್ಯಕರ್ತರೊಂದಿಗೆ ಸಂದರ್ಶನವನ್ನು ಆಯೋಜಿಸಿರಿ.
3. ಟೀಚರ್‌ನ ಸಹಾಯದಿಂದ ತರಗತಿಮಟ್ಟದ ನಿಯಮಾವಳಿಯನ್ನು ತಯಾರಿಸಿರಿ.
4. ನಿಮ್ಮ ಸಮೀಪದ ಆರಕ್ಷಕರ ಠಾಣೆ (ಪೊಲೀಸ್ ಸ್ಟೇಶನ್)ಯನ್ನು ಸಂದರ್ಶಿಸಿ ಅಲ್ಲಿನ ಚಟುವಟಿಕೆಗಳನ್ನು ನಿರೀಕ್ಷಿಸಿ ಟಿಪ್ಪಣಿ ತಯಾರಿಸಿರಿ.
5. ಸ್ಥಳೀಯಾಡಳಿತ ಜಾಗೃತಿ ಸಮಿತಿಗಳನ್ನು ನಿರೀಕ್ಷಿಸಿ, ಅಲ್ಲಿನ ವಿವಾದಗಳ ಪರಿಹಾರ ವ್ಯವಸ್ಥೆಗಳಿಗೆ ಸಂಬಂಧಿಸಿ ನಿರೀಕ್ಷಣಾ ಟಿಪ್ಪಣಿ ತಯಾರಿಸಿರಿ.
6. 'ಸೈಬರ್ ಲೋಕದ ವಂಚನಾ ಜಾಲಗಳು' ಎಂಬ ವಿಷಯಕ್ಕೆ ಸಂಬಂಧಿಸಿ ಸೆಮಿನಾರ್ ಒಂದನ್ನು ಆಯೋಜಿಸಿರಿ. ತಜ್ಞರ ಸಹಾಯವನ್ನು ಖಾತರಿಪಡಿಸಿರಿ.

# ಟಿಪ್ಪಣಿಗಳು

# ಭಾರತದ ಸಂವಿಧಾನ

## ಭಾಗ IV ಕ

## ಮೂಲಭೂತ ಕರ್ತವ್ಯಗಳು

**51 ಕ. ಮೂಲಭೂತ ಕರ್ತವ್ಯಗಳು - ಈ ಕೆಳಗಿನವುಗಳು ಭಾರತದ ಪ್ರತಿಯೊಬ್ಬ ಪೌರನ ಕರ್ತವ್ಯಗಳಾಗಿವೆ:**

(ಕ) ಸಂವಿಧಾನವನ್ನು ಅನುಸರಿಸುವುದು, ಅದರ ಆದರ್ಶಗಳನ್ನು, ಸಂಸ್ಥೆಗಳನ್ನು, ರಾಷ್ಟ್ರಧ್ವಜವನ್ನು ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು;

(ಖ) ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಫೂರ್ತಿದಾಯಕವಾದ ಉದಾತ್ತ ಆದರ್ಶಗಳನ್ನು ಘೋಷಿಸುವುದು ಮತ್ತು ಅನುಸರಿಸುವುದು;

(ಗ) ಭಾರತದ ಸಾರ್ವಭೌಮತೆಯನ್ನು, ಏಕತೆಯನ್ನು ಮತ್ತು ಅಖಂಡತೆಯನ್ನು ಗೌರವಿಸುವುದು ಹಾಗೂ ಸಂರಕ್ಷಿಸುವುದು;

(ಘ) ದೇಶವನ್ನು ರಕ್ಷಿಸಲು ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ಕರೆ ಬಂದಾಗ ಅದನ್ನು ಅನುಸರಿಸುವುದು;

(ಙ) ಧಾರ್ಮಿಕ, ಭಾಷಿಕ ಮತ್ತು ಪ್ರಾದೇಶಿಕ ಅಥವಾ ಜಾತಿ ಪಂಗಡಗಳ ಭಿನ್ನತೆಗಳಿಂದ ಅತೀತವಾಗಿ ಭಾರತದ ಎಲ್ಲ ಜನತೆಯಲ್ಲಿ ಸಾಮರಸ್ಯವನ್ನು ಮತ್ತು ಭ್ರಾತೃತ್ವದ ಭಾವನೆಯನ್ನು ಬೆಳೆಸುವುದು. ಸ್ತ್ರೀಯರ ಗೌರವಕ್ಕೆ ಕುಂದುಂಟು ಮಾಡುವ ಆಚರಣೆಯನ್ನು ಬಿಟ್ಟುಬಿಡುವುದು;

(ಚ) ನಮ್ಮ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಗೌರವಿಸುವುದು ಹಾಗೂ ಕಾಪಾಡುವುದು;

(ಛ) ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯಜೀವಿಗಳು ಸೇರಿದಂತೆ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಹಾಗೂ ಅಭಿವೃದ್ಧಿ ಮಾಡುವುದು. ಪ್ರಾಣಿಗಳಿಗೆ ಅನುಕಂಪ ತೋರಿಸುವುದು;

(ಜ) ವೈಜ್ಞಾನಿಕ ಮನೋಭಾವ, ಮಾನವೀಯತೆ, ಜಿಜ್ಞಾಸೆ ಮತ್ತು ಸುಧಾರಣ ಪ್ರವೃತ್ತಿಯನ್ನು ಬೆಳೆಸುವುದು;

(ಝ) ಸಾರ್ವಜನಿಕ ಸೊತ್ತನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು;

(ಞ) ರಾಷ್ಟ್ರವು ನಿರಂತರವಾಗಿ ಸಾಧನೆ ಮತ್ತು ಸಿದ್ಧಿಯ ಔನ್ನತ್ಯಕ್ಕೆ ತಲುಪಲು ವೈಯಕ್ತಿಕ ಹಾಗೂ ಸಾಮಾಜಿಕ ಚಟುವಟಿಕೆಯ ಎಲ್ಲ ಕಾರ್ಯಕ್ಷೇತ್ರಗಳಲ್ಲಿ ಪ್ರಾಮಾಣಿಕವಾಗಿ ಶ್ರಮಿಸುವುದು;

(ಟ) ಆರರಿಂದ ಹದಿನಾಲ್ಕು ವರ್ಷಗಳ ನಡುವಿನ ತನ್ನ ಮಕ್ಕಳಿಗೋ ತನ್ನ ರಕ್ಷಣೆಯಲ್ಲಿರುವ ಮಕ್ಕಳಿಗೋ ಆಯಾ ಸಂದರ್ಭಾನುಸಾರ ಹೆತ್ತವರೋ ರಕ್ಷಕರೋ ವಿದ್ಯಾಭ್ಯಾಸಕ್ಕಿರುವ ಅವಕಾಶವನ್ನು ಏರ್ಪಡಿಸುವುದು.

## ಮಕ್ಕಳ ಹಕ್ಕುಗಳು

ಪ್ರೀತಿಯ ಮಕ್ಕಳೇ,

ನಿಮ್ಮ ಹಕ್ಕುಗಳ ಕುರಿತು ತಿಳಿಯಬೇಕಲ್ಲವೇ? ಹಕ್ಕುಗಳ ಕುರಿತಾದ ತಿಳುವಳಿಕೆಯು ನಿಮ್ಮ ಭಾಗವಹಿಸುವಿಕೆ, ಸಂರಕ್ಷಣೆ, ಸಾಮಾಜಿಕ ನ್ಯಾಯ ಎಂಬಿವುಗಳನ್ನು ಖಾತರಿಪಡಿಸಲು ಪ್ರೇರಣೆಯನ್ನೂ ಪ್ರಚೋದನೆಯನ್ನೂ ನೀಡುತ್ತದೆ. ನಿಮ್ಮ ಹಕ್ಕುಗಳನ್ನು ಸಂರಕ್ಷಿಸಲು ಈಗ ಒಂದು ಆಯೋಗವು ಕಾರ್ಯಾಚರಿಸುತ್ತಿದೆ. 'ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣಾ ಆಯೋಗ' ಎಂದು ಅದರ ಹೆಸರು. ನಿಮ್ಮ ಹಕ್ಕುಗಳು ಯಾವುವು ಎಂದು ನೋಡೋಣ.

- ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ
- ಜೀವ ಮತ್ತು ವ್ಯಕ್ತಿ ಸ್ವಾತಂತ್ರ್ಯದ ರಕ್ಷಣೆ.
- ಪರಿಪೂರ್ಣವಾದ ಬದುಕು ಹಾಗೂ ವಿಕಾಸದ ಹಕ್ಕು.
- ಜಾತಿ, ಮತ, ವರ್ಗ, ವರ್ಣ ಎಂಬ ಚಿಂತನೆಗಳನ್ನು ಮೀರಿ ಗೌರವಿಸಲ್ಪಡುವ ಮತ್ತು ಅಂಗೀಕರಿಸಲ್ಪಡುವ ಹಕ್ಕು.
- ದೈಹಿಕ, ಮಾನಸಿಕ ಹಾಗೂ ಲೈಂಗಿಕ ದೌರ್ಜನ್ಯಗಳಿಂದ ರಕ್ಷಣೆ ಪಡೆಯಲೂ ಶುಶ್ರೂಷೆ ಪಡೆಯಲೂ ಇರುವ ಹಕ್ಕು.
- ಪಾಲ್ಗೊಳ್ಳುವಿಕೆಯ ಹಕ್ಕು.
- ಬಾಲ ಕಾರ್ಮಿಕತನದಿಂದ ಹಾಗೂ ಅಪಾಯಕಾರಿ ಕೆಲಸಗಳಿಂದ ಬಿಡುಗಡೆ.
- ಬಾಲ್ಯವಿವಾಹದಿಂದ ರಕ್ಷಣೆ.
- ವೈಯಕ್ತಿಕ ಸಂಸ್ಕೃತಿಯನ್ನು ಅರಿತುಕೊಂಡು ಅದನ್ನು ಅನುಸರಿಸಿ ಬದುಕುವ ಸ್ವಾತಂತ್ರ್ಯ.
- ನಿರ್ಲಕ್ಷ್ಯಕ್ಕೆ ಒಳಗಾಗದಂತೆ ಸಂರಕ್ಷಣೆ.
- ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಹಕ್ಕು.
- ಕಲಿಯಲೂ ಆಟವಾಡಲೂ ಇರುವ ಹಕ್ಕು.
- ಪ್ರೀತಿ ಹಾಗೂ ರಕ್ಷಣೆಯನ್ನು ಒದಗಿಸುವ ಕುಟುಂಬ ಹಾಗೂ ಸಮಾಜವನ್ನು ಪಡೆಯುವ ಹಕ್ಕು.

### ನಿಮ್ಮ ಕೆಲವು ಜವಾಬ್ದಾರಿಗಳು

- ಶಾಲೆ, ಸಾರ್ವಜನಿಕ ಸೊತ್ತುಗಳನ್ನು ಹಾನಿ ಮಾಡದೆ ರಕ್ಷಿಸುವುದು.
- ಶಾಲೆಯಲ್ಲಿ ಹಾಗೂ ಕಲಿಕಾ ಚಟುವಟಿಕೆಗಳಲ್ಲಿ ಶಿಸ್ತು ಪಾಲಿಸುವುದು.
- ಶಾಲಾ ಅಧಿಕಾರಿಗಳನ್ನು, ಹೆತ್ತವರನ್ನು ಹಾಗೂ ಸಹಪಾಠಿಗಳನ್ನು ಗೌರವಿಸುವುದು ಮತ್ತು ಅಂಗೀಕರಿಸುವುದು.
- ಜಾತಿ, ಮತ, ವರ್ಗ, ವರ್ಣ ಇತ್ಯಾದಿ ಚಿಂತನೆಗಳನ್ನು ಮೀರಿ ಇತರರನ್ನು ಗೌರವಿಸಲೂ ಅಂಗೀಕರಿಸಲೂ ಸಿದ್ಧರಾಗುವುದು.

*ಸಂಪರ್ಕಿಸಬೇಕಾದ ವಿಳಾಸ :*

**ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ**

'ಶ್ರೀಗಣೇಶ್', ಟಿ.ಸಿ. 14/2036, ವಾನ್ ರೋಡ್ ಜಂಕ್ಷನ್,
ಕೇರಳ ಯುನಿವರ್ಸಿಟಿ, ಪಿ.ಒ ತಿರುವನಂತಪುರ – 34
ಫೋನ್ 0471 – 2326603
ಈ ಮೈಲ್ childrights.cpcr@kerala.gov.in, rte.cpcr@kerala.gov.in
ವೆಬ್ ಸೈಟ್ : www.kescpcr.kerala.gov.in

ಮಕ್ಕಳ ಸಹಾಯವಾಣಿ - 1098, ಅಪರಾಧ ನಿಯಂತ್ರಣ - 1090, ನಿರ್ಭಯ – 1800 425 1400
ಕೇರಳ ಪೋಲೀಸ್ ಸಹಾಯವಾಣಿ - 0471 – 3243000/44000/45000

*online **R.T.E Monitoring : www.nireekshana.org.in***